ಶ್ರೀ ಗಟ್ಟಿ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೆ. ಈ ದಿವಸ ಯಾರು ಯಾರು ಭಾಷಣ ಮಾಡಬೇಕು ಎಂಬ ಪಟ್ಟಿ ತಮ್ಮ ಮುಂದಿದೆ. ಅದನ್ನು ಓದಿದರೆ ಯಾರುಯಾರಿಗೆ ಅವಕಾಶ ಇದೆ ಎಂಬುದನ್ನು ತಿಳಿದುಕೊಳ್ಳಬಹುದು.

ಅಧ್ಯಕ್ಷರು.—ತಮ್ಮ ಪಕ್ಷದ ಪಟ್ಟಿ ಬೇರೆ ಇದೆ, ಮತ್ತೆ ಬೇರೆ ಪಕ್ಷದ ಪಟ್ಟಿ ಬೇರೆ ಇದೆ.

ಶ್ರೀ ಎಂ. ಸಿ. ನಾಣಯ್ಯ.—ಅದನ್ನು ಓದಿಬಿಟ್ಟರೆ ಬಾಕಿಯುವರೆಲ್ಲಾ ಹೋಗಬಹುದು ಎಂಬ ದೃಷ್ಟಿಯಿಂದ ಅವರು ಕೇಳುತ್ತಿರಬಹುದು.

MOTION OF THANKS TO GOVERNORS ADDRESS

† ಶ್ರೀ ಡಿ. ಟಿ. ರಾಮು (ಚನ್ನಪಟ್ಟಣ).—ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ನಾನು ಮಾತನಾಡುತ್ತಾ ನಮ್ಮ ಸರ್ಕಾರ ರೈತರ ಬಗ್ಗೆ ಏನು ಕಳಕಳಿಯನ್ನು ಹೊಂದಿದೆ ಎಂಬುದನ್ನು ಹೇಳಿದೆ. ರೈತರಿಗೆ ೫ ಹೆಚ್. ಪಿ. ಯಿಂದ ೧೦ ಹೆಚ್. ಪಿ. ವರೆಗೆ ಉಪಯೋಗಿಸತಕ್ಕ ವಿದ್ಯುಚ್ಛಕ್ತಿಗೆ ಕನಿಷ್ಟ ದರ ೫೦ ರೂಪಾಯಿನಂತೆ ರಿಯಾಯಿತಿ ಕೊಟ್ಟಿದೆ. ಇದು ದೊಡ್ಡ ರಿಯಾಯಿತಿ ಎಂದು ಹೇಳಬೇಕಾಗಿದೆ. ಹಾಗೆಯೇ ನಮ್ಮ ಸರ್ಕಾರ ಹಳ್ಳಿಗಾಡಿನ ಜನರು ಗಾಢಾಂದಕಾರದಲ್ಲಿ ಮುಳುಗಿದ್ದಂಥ ಸನ್ನಿವೇಶದಲ್ಲಿ ಬೆಳಕನ್ನು ನೀಡಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಬೀದಿ ದೀಪಗಳ ವಿದ್ಯುತ್ ದರವನ್ನು ಆಯಾ ಗ್ರಾಮಪಂಚಾಯಿತಿಗಳೇ ಕಟ್ಟಬೇಕು ಎಂಬ ನಿಯಮ ಮೊದಲಿತ್ತು. ಇದರಿಂದ ಗ್ರಾಮಪಂಚಾಯಿತಿಯವರು ಸರಿಯಾಗಿ ಹಣ ಕಟ್ಟದೇ ಯಾವ ಊರಿಗೆ ಹೋದರೂ ಬೀದಿ ದೀಪಗಳಿರುತ್ತಿರಲಿಲ್ಲ. ಏಕೆಂದರೆ, ಅವರು ಹಣ ಕಟ್ಟುವ ಸ್ಥಿತಿಯಲ್ಲಿರಲಿಲ್ಲ. ಇದನ್ನು ಗಮನಿಸಿ ನಮ್ಮ ಸರ್ಕಾರ ದೊಡ್ಡ ತೀರ್ಮಾನ ತೆಗೆದುಕೊಂಡು ಬೀದಿ ದೀಪಗಳ ಹಣವನ್ನು ಸರ್ಕಾರವೇ ಕಟ್ಟಬೇಕು ಎಂಬ ನಿರ್ಧಾರಕ್ಕ ಬಂದು ಈ ದಿವಸ ರಾಜ್ಯದಲ್ಲಿರತಕ್ಕ ಎಲ್ಲ ಹಳ್ಳಿಗಳಲ್ಲೂ ಸಹ ಬೀದಿ ದೀಪಗಳು ಉರಿಯುವಂತೆ ಮಾಡಿದೆ.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು.)

ಇದು ಒಂದು ದೊಡ್ಡ ಸಾಧನೆ ಎಂದು ನನ್ನ ಅಭಿಪ್ರಾಯ ಎರಡನೆಯದಾಗಿ, ಈ ವತ್ತಿನದಿವಸ ನಮ್ಮ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ತ್ವರಿತಗತಿಯಲ್ಲಿ ನಡೆಯುತ್ತಿದೆ. ನನ್ನ ಮಿತ್ರರು ಮಾತನಾಡುತ್ತಾ ಕೆಲವು ವಿಷಯಗಳನ್ನು ಉಲ್ಲೇಖಿಸಿ, ಈ ಸರ್ಕಾರ ಉದ್ದೇಶಿಸಲಾಗಿದೆ, ಯೋಚಿಸಲಾಗಿದೆ, ನಿರೀಕ್ಷಿಸಲಾಗಿದೆ ಎಂದು ಹೇಳಿದೆಯೇ ಹೊರತು ಖಚಿತವಾಗಿ ಮಾಡುತ್ತೇವೆ ಎಂಬುದಾಗಿ ಹೇಳಿಲ್ಲ ಎಂದು ಹೇಳಿದರು. ನಾನು ಅವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ, ಕಾಳಿನದಿ ಜಲವಿದ್ಯುತ್ ಯೋಜನೆಯ ಎರಡನೇ ಘಟಕವು ಕಾರ್ಯಾರಂಭ ಮಾಡಿದೆ ಎಂಬ ಪದವೂ ಇಲ್ಲಿದೆ. ಮಾಡುತ್ತೇವೆ ಅಲ್ಲ, ಮಾಡಿದೆ ಎಂದಿದೆ. ಮಾಡುತ್ತೇವೆ, ನೋಡುತ್ತೇವೆ. ಬಿಡುತ್ತೇವೆ ಎಂಬುದು ಮಾತ್ರವಲ್ಲ, ಮಾಡಿದ್ದೇವೆ ಎಂಬ ಪದವೂ ಉಂಟು ಎಂಬುದನ್ನು ನಾನು ಅವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಕಾಳಿನದಿ ಯೋಜನೆಯಲ್ಲಿ ೬ ಘಟಕಗಳುಂಟು ಕಳೆದ ವರ್ಷ ನಾಗ್ಝರಿ ಎಂಬ ಘಟಕ ಕೆಲಸ ಮಾಡಿದೆ ಈ ಸಾರಿ ಎರಡನೇ ಘಟಕ ಪ್ರಾರಂಭ ಮಾಡಿದೆ. ಇನ್ನೂ ನಾಲ್ಕು ಘಟಕಗಳು ಆರೇಳು ತಿಂಗಳಲ್ಲಿ ಅಥವಾ ಈ ವರ್ಷದ ಕೊನೆಯೊಳಗೆ ಕೆಲಸ ಪ್ರಾರಂಭ ಮಾಡಿದರೆ ಈಗ ಮಾನ್ಯ ಮುಖ್ಯ ಮಂತ್ರಿಗಳು ಕೇರಳದಿಂದ ವಿದ್ಯುಚ್ಛಕ್ತಿ ದೊರಕಿಸಿಕೊಳ್ಳಲು ಏನು ಕಷ್ಟಪಡುತ್ತಿದ್ದಾರೋ ಇದು ಪರಿಹಾರವಾಗುತ್ತದೆ ಎಂಬುದು ನನ್ನ ಅಭಿಪ್ರಾಯ. ನಮ್ಮ ಎಲ್ಲ ಜಲವಿದ್ಯುತ್ ಯೋಜನೆಗಳೂ ಸಂಪೂರ್ಣವಾಗಿ ಕಾರ್ಯಗತವಾದರೆ ಆಗ ನಮ್ಮ ರಾಜ್ಯ ವಿದ್ಯುಚ್ಛಕ್ತಿ ವಿಚಾರದಲ್ಲಿ ಸ್ವಯಂಪರಿಪೂರ್ಣತೆಯನ್ನು ಪಡೆಯುತ್ತದೆ. ಆಗ ನಾವೇ ಬೇರೆ ರಾಜ್ಯಗಳಿಗೂ ವಿದ್ಯುಚ್ಛಕ್ತಿ ಒದಗಿಸುವ ಮಟ್ಟಕ್ಕೆ ಬರುತ್ತೇವೆ ಎಂಬ ವಿಶ್ವಾಸ ನನಗಿದೆ. ವಿದ್ಯುಚ್ಛಕ್ತಿಯನ್ನು ಶೀಘ್ರಗತಿಯಿಂದ ಉತ್ಪಾದನೆ ಮಾಡತಕ್ಕ ಪ್ರಾಮಾಣಿಕ ಪ್ರಯತ್ನವನ್ನು ನಮ್ಮ ಸರ್ಕಾರ ಮಾಡುತ್ತಿರುವುದು ಒಳ್ಳೆಯ ಸಾಧನೆ ಎಂಬುದು ನನ್ನ ಉದ್ದೇಶ. ಕೇಂದ್ರ ಸರ್ಕಾರದ ನೆರವಿನಿಂದ ಗ್ರಾಮೀಣ ಬ್ಯಾಂಕುಗಳನ್ನು ಹೆಚ್ಚು ತೆರೆಯಲು ಉದ್ದೇಶಿಸಿ ಈಗ ನಾಲ್ಕು ಬ್ಯಾಂಕ್‌ಗಳು ಇದ್ದುದನ್ನು ೬ ಬ್ಯಾಂಕುಗಳಿಗೆ ಹೆಚ್ಚಿಸುವುದಕ್ಕೆ ಸರ್ಕಾರ ನಿರ್ಧಾರ ಕೈಗೊಂಡಿದೆ. ಇದರಿಂದ ಸಣ್ಣ ರೈತರಿಗೆ, ಅತೀ ಸಣ್ಣ ರೈತರಿಗೆ, ಕೃಷಿಕರಿಗೆ ಮತ್ತು ಕೃಷಿ ಕಾರ್ಮಿಕರಿಗೆ ಹಾಗೂ ಹಳ್ಳಿಗಳಲ್ಲಿರುವ ಬಡವರಿಗೆ ಅನುಕೂಲವಾಗು

ತ್ತದೆ ಎಂದು ಹೇಳುತ್ತಾ ಇದರಿಂದ ಬಹಳ ಸಮಸ್ಯೆಗಳನ್ನು ಬಗೆಹರಿಸಿದಂತಾಗುತ್ತದೆ ಎಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಆಹಾರ ವಿತರಣೆ ಬಗ್ಗೆ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ಆಹಾರ ವಿತರಣೆಗಳನ್ನು ಮಾಡಲು ಪ್ರಾಮಾಣಿಕ ಅಧಿಕಾರಿಗಳನ್ನು ಹಾಕಿ ವಿತರಣೆ ವ್ಯವಸ್ಥೆ ಮಾಡಿದರೆ ನಾವು ನಿಜವಾಗಿಯೂ ಸಹ ಆಹಾರದ ಸಮಸ್ಯೆಯನ್ನು ನೀಗಿಸಬಹುದು ಎಂಬುದು ನನ್ನ ಉದ್ದೇಶ. ಆದ ಕಾರಣ, ಸರ್ಕಾರಕ್ಕೆ ಮಾನ್ಯ ಅಧ್ಯಕ್ಷರ ಮೂಲಕ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಸಮಿತಿಗಳನ್ನು ಆಹಾರ ವಿತರಣೆಗಾಗಿ ರಚಿಸಬೇಕು ಎಂದು. ತಾಲ್ಲೂಕು ಮಟ್ಟದಲ್ಲಿ ಆಹಾರ ವಿತರಣಾ ಸಮಿತಿಗಳನ್ನು ರಚಿಸಿ ವಿತರಣೆ ವ್ಯವಸ್ಥೆ ಮಾಡಿದರೆ ಒಳ್ಳೆಯ ರೀತಿಯಲ್ಲಿ ಸಮರ್ಪಕವಾಗಿ ಆಗುವುದಲ್ಲದೆ ಬೆಲೆ ಏರಿಕೆ ಈಗ ಏನಿದೆ ಇದರ ಪ್ರಭಾವ ಇರಲಾರದೆಂದು ನನ್ನ ಭಾವನೆ. ನನ್ನ ತಾಲ್ಲೂಕನ್ನೇ ತೆಗೆದುಕೊಂಡರೆ, ಒಂದು ತಿಂಗಳಿಗೆ ಸುಮಾರು ಎಂಟು ನೂರು ಕ್ವಿಂಟಾಲ್ ಸಕ್ಕರೆ ಅಲ್ಲಿಗೆ ಬರುತ್ತದೆ. ಮುನ್ನೂರು ಕ್ವಿಂಟಾಲ್ ಅಕ್ಕಿ ಮುನ್ನೂರು ಕ್ವಿಂಟಾಲ್ ರಾಗಿ ಮತ್ತು ಇನ್ನೂರು ಕ್ವಿಂಟಾಲ್ ಮೈದಾ ಬರುತ್ತಿದೆ. ಇದನ್ನು ಪ್ರಾಮಾಣಿಕವಾಗಿ ತಾಲ್ಲೂಕಿನ ಪೂರ್ತ ಹಂಚಿದ್ದೇ ಆದರೆ ಸುಲಭವಾಗಿ ಎಲ್ಲರಿಗೂ ತಲುಪುತ್ತದೆ. ತಲುಪದೆ ಇರಲಿಕ್ಕೆ ಸಾಧ್ಯವೇ ಇಲ್ಲ. ಆದರೆ ಕೆಲವು ಜನ ದಳ್ಳಾಳಿ ಕೆಲಸ ಮಾಡುತ್ತಾರೆ. ಇವರಿಂದಾಗಿ ಸಕ್ಕರೆ ಹಳ್ಳಿಗಳಿಗೆ ಮುಟ್ಟುವುದೇ ಇಲ್ಲ. ಹಳ್ಳಿಗಳಿಗೆ ಬರುವುದರೊಳಗೆ ಸಕ್ಕರೆ ಮೂಟೆಗಳು ಹಸ್ತಾಂತರಗೊಳ್ಳುತ್ತವೆ. ಹಸ್ತಾಂತರಗೊಂಡು ಬೆಂಗಳೂರಿನಿಂದ ಹೋದ ಸಕ್ಕರೆ ಮತ್ತೆ ಬೆಂಗಳೂರಿಗೆ ಬರುತ್ತದೆ. ಇಂತಹ ಖದೀಮರನ್ನು ಹದ ಮಾಡಬೇಕು. ಕಾಳಸಂತೆ ಖದೀಮರನ್ನು ಸ್ವಲ್ಪ ದಿವಸ ಒಳಕ್ಕೆ ಹಾಕಿದರೆ ಬುದ್ಧಿ ಬರುತ್ತದೆ. ಆಗ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ. ಇಲ್ಲದೆ ಹೋದರೆ ಇಲಾಖಾಧಿಕಾರಿಗಳೂ ಅವರೊಂದಿಗೆ ಶಾಮೀಲಾಗಿ ಆಹಾರದ ವಿತರಣೆ ಬಹಳ ಕಷ್ಟಕ್ಕೆ ಬರುತ್ತದೆ. ಆಗ ಮಾನ್ಯ ವಿರೋಧ ಪಕ್ಷದ ಮಿತ್ರರು ಹೇಳಿದ ಹಾಗೆ ನಾವು ಟೀಕೆಗೆ ಗುರಿಯಾಗುತ್ತೇವೆ. ಆದುದರಿಂದ, ಆಹಾರದ ವಿತರಣೆಗಾಗಿ ತಾಲ್ಲೂಕು ಮಟ್ಟದಲ್ಲಿ ಸಮಿತಿಗಳನ್ನು ಮಾಡಿ ಅದಕ್ಕೆ ಪ್ರಾಮಾಣಿಕ ವ್ಯಕ್ತಿಗಳನ್ನು ನೇಮಿಸಿ, ಅದರ ಮೂಲಕ ಆಹಾರದ ವಿತರಣೆ ಕಾರ್ಯ ಮಾಡಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

ಇನ್ನು ಬೆಲೆ ಏರಿಕೆ ಕುರಿತು ಹೇಳುವುದಾದರೆ, ಇದು ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಅಥವಾ ಸೀಮಿತವಾದ ಪ್ರಶ್ನೆಯಲ್ಲ. ಇದು ರಾಷ್ಟ್ರವ್ಯಾಪ್ತಿ ಸಮಸ್ಯೆಯಾಗಿದೆ. ಇದು ಇತ್ತೀಚೆಗೆ ಅಂತರ ರಾಷ್ಟ್ರೀಯ ಸಮಸ್ಯೆಯೂ ಆಗಿದೆ. ಇವತ್ತಿನ ದಿವಸ ಇಂಗ್ಲೆಂಡ್, ಅಮೇರಿಕಾ ಮುಂತಾದ ದೇಶಗಳಲ್ಲೂ ಬೆಲೆ ಏರಿಕೆ ಪ್ರಭಾವ ಇದೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಬೆಲೆ ಏರಿಕೆ ತನ್ನದೇ ಆದ ಪ್ರಭಾವವನ್ನು ಬೀರಿದೆ. ಇದಕ್ಕೆ ಕಾರಣವೇನು ? ಇವತ್ತಿನ ದಿವಸ ಎಣ್ಣೆ ಉತ್ಪಾದಿಸುವ ಅರಬ್ ರಾಷ್ಟ್ರಗಳಲ್ಲಿ ಯುದ್ಧದ ಕಾರ್ಮೋಡ ಕವಿದಿದೆ. ಇಂತಹ ಸಂದರ್ಭದಲ್ಲಿ ಎಣ್ಣೆಯ ಬೆಲೆ ಯಥೇಚ್ಛವಾಗಿ ಏರುತ್ತದೆ. ಒಂದು ವರ್ಷದ ಅವಧಿಯಲ್ಲಿ ನಮ್ಮ ರಾಷ್ಟ್ರದಲ್ಲಿ ಎರಡು ಬಾರಿ ಪೆಟ್ರೋಲ್ ಮತ್ತು ಡೀಸಲಿನ ಬೆಲೆಯನ್ನು ಏರಿಸಲಾಯಿತು. ಇದಕ್ಕೆ ಕಾರಣ, ನಮ್ಮ ರಾಷ್ಟ್ರದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಉತ್ಪತ್ತಿಯಾಗದಿರುವುದು. ಇದನ್ನು ನಾವು ವಿದೇಶಗಳಿಂದಲೇ ತರಿಸಬೇಕಾಗಿದೆ. ಪೆಟ್ರೋಲನ್ನು ಉತ್ಪಾದಿಸುವ ರಾಷ್ಟ್ರಗಳೇ ಯದ್ವಾತದ್ವಾ ಬೆಲೆಯನ್ನು ಏರಿಸಿರುವುದರಿಂದ ಸಹಜವಾಗಿ ನಮ್ಮ ದೇಶದಲ್ಲೂ ಪೆಟ್ರೋಲಿನ ಬೆಲೆ ಏರಿದೆ. ಪೆಟ್ರೋಲಿಯಂ ವಸ್ತುಗಳಲ್ಲಿ ಆಗಿರುವ ಬೆಲೆ ಏರಿಕೆಯು ಜೀವನದ ಎಲ್ಲ ರಂಗಗಳಲ್ಲಿಯೂ ತನ್ನದೇ ಆದ ಪ್ರಭಾವವನ್ನು ಬೀರುತ್ತಿದೆ. ನಾವು ದಿನನಿತ್ಯ ಉಪಯೋಗಿಸುವ ಹಲವಾರು ಸಾಮಾನು ಸರಂಜಾಮುಗಳನ್ನು ಲಾರಿಗಳಲ್ಲಿ ಬೇರೆ ಬೇರೆ ಪ್ರಾಂತ್ಯಗಳಿಂದ ತೆಗೆದುಕೊಂಡು ಬರಲಾಗುತ್ತಿದೆ. ಹೀಗಾಗಿ ಡೀಸೆಲ್ ಬೆಲೆ ಜಾಸ್ತಿಯಾದರೆ ಸಾಗಾಣಿಕೆ ವೆಚ್ಚವೂ ಜಾಸ್ತಿಯಾಗಿ ತತ್ಪರಿಣಾಮವಾಗಿ ಬಳಕೆ ವಸ್ತುಗಳ ಬೆಲೆಯಲ್ಲಿ ಏರಿಕೆಯುಂಟಾಗಿದೆ. ಎಣ್ಣೆಯನ್ನು ಉತ್ಪತ್ತಿ ಮಾಡತಕ್ಕ ರಾಷ್ಟ್ರಗಳು ಅನುಸರಿಸುತ್ತಿರುವ ನೀತಿಯಿಂದಾಗಿ ಕೇವಲ ಭಾರತದಲ್ಲಷ್ಟೇ ಅಲ್ಲ ಇಡೀ ಜಗತ್ತಿನಲ್ಲೇ ಅಲ್ಲೋಲಕಲ್ಲೋಲವುಂಟಾಗತಕ್ಕ ರೀತಿಯಲ್ಲಿ ಬೆಲೆ ಏರಿಕೆಯಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಇನ್ನು, ಬಡಜನರಿಗಾಗಿ ಕಟ್ಟುತ್ತಿರುವ ಜನತಾ ಗೃಹಗಳ ಮೇಲೆ ಐನೂರು ರೂಪಾಯಿಗಳ ಸಹಾಯಧನವನ್ನು ಹೆಚ್ಚು ಮಾಡಿದೆ. ನಿಜವಾಗಿಯೂ ಇದು ಒಳ್ಳೆಯ ನಿರ್ಧಾರವೆಂದು ಹೇಳುತ್ತೇನೆ. ಏಕೆಂದರೆ, ಯಾವುದೇ ಒಂದು ಮನೆ ಕಟ್ಟಬೇಕಾದರೆ, ಕೇವಲ ಮೂರು ಸಾವಿರ ರೂಪಾಯಿಗಳಲ್ಲಿ

ಕಟ್ಟುವುದಕ್ಕಾಗುವುದಿಲ್ಲ. ಆದುದರಿಂದ, ಐನೂರು ರೂಪಾಯಿಗಳ ಸಹಾಯಧನವನ್ನು ಹೆಚ್ಚು ಮಾಡಿರುವುದು ಒಳ್ಳೆಯ ನಿರ್ಧಾರ ವೆಂದು ಹೇಳುತ್ತೇನೆ.

ಇನ್ನು. ೨೦ ಅಂಶಗಳ ಕಾರ್ಯಕ್ರಮ. ಮಾನ್ಯ ಜೆ. ಹೆಚ್. ಪಟೇಲರು ಮಾತನಾಡುತ್ತಾ ೨೦ ಅಂಶಗಳ ಕಾರ್ಯಕ್ರಮ ಕಾರ್ಯಗತವಾಗುತ್ತಿಲ್ಲವೆಂದು ಹೇಳಿದರು. ೨೦ ಅಂಶಗಳ ಕಾರ್ಯಕ್ರಮವೆಂದರೇನು? ಬಡವರನ್ನು ಮೇಲಕ್ಕೆ ತರತಕ್ಕ ಕಾಲದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡು ಅವುಗಳನ್ನು ಪ್ರಾಮಾಣಿಕವಾಗಿ ಜಾರಿಗೆ ಕೊಡುವ ಕಾರ್ಯವೇ ೨೦ಅಂಶಗಳ ಕಾರ್ಯಕ್ರಮವೆಂದು ನನ್ನ ವೈಯಕ್ತಿಕ ಭಾವನೆ ಮನೆ ಇಲ್ಲದವರಿಗೆ ಮನೆ,ನಿವೇಶನ ಇಲ್ಲದವರಿಗೆ ನಿವೇಶನ,ಭೂಮಿ ಇಲ್ಲದವರಿಗೆ ಭೂಮಿ ಬಟ್ಟೆ ಇಲ್ಲದವರಿಗೆ ಬಟ್ಟೆ ಹೀಗೆ ನಾನಾ ಕಾರ್ಯಕ್ರಮಗಳು ಇದರಲ್ಲಿ ಅಡಕವಾಗಿದೆ. ಇವುಗಳನ್ನು ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತರುವುದಾದರೆ, ಮಹಾತ್ಮ ಗಾಂಧೀಜಿಯವರು ಕಾಣುತ್ತಿದ್ದ ರಾಮರಾಜ್ಯದ ಕನಸನ್ನು ನನಸು ಮಾಡುವಲ್ಲಿ ಇದೇ ಮೊದಲನೆಯ ಹಂತವಾಗುತ್ತದೆಂದು ನನ್ನ ಅಭಿಪ್ರಾಯ. "Where does India lie. India lies in the Villages." To-day the villages are suffering from poverty, insanitation and ignorance. We have to remove that and then only we can establish Ram Rajya, otherwise. it is only a dream and it will not be a reality. So, in order to bring that dream into reality, Smt. Indira Gandhi thought out a Plan called "20 Point Economic Programme". If you take this 20 point economic programme to the villages, to the masses of this nation, certainly we will be in the direction of establishing Ram Rajya. On account of this measure only, Smt. Indira Gandhi got the massive mandate in the country apart from the misdeeds of the opposition party. Now, they have to fulfil the oath they have taken after coming to power. If we honestly implement the 20 Point Economic Programme, we will be in the direction of establishing Ram Rajya which was the dream of Mahatma Gandhi.

ಇನ್ನು, ರಾಜ್ಯದ ವನ ಸಂಪತ್ತನ್ನು ಕಾಪಾಡುವಲ್ಲಿ ನಮ್ಮ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಿದೆ. ತಮಿಳುನಾಡು ಮತ್ತು ಕೇರಳ ಗಡಿ ಪ್ರದೇಶಗಳಲ್ಲಿ ನಡೆಯುತ್ತಿದ್ದ ಗಂಧದ ಮರಗಳ ಕಳ್ಳಸಾಗಾಣಿಕೆಯನ್ನು ತಡೆಗಟ್ಟಲು ನಮ್ಮ ಸರ್ಕಾರ ಕೆಲವು ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಂಡಿದೆ. ಮಾನ್ಯ ಲಕ್ಷ್ಮೀಸಾಗರ್ ಅವರು ಮಾತನಾಡುತ್ತಾ, ನಾವು ಬರೀ "ಮಾಡುತ್ತೇವೆ, ನೋಡುತ್ತೇವೆ..." ಎಂದು ಹೇಳಿರುವುದಾಗಿ ತಿಳಿಸಿದರು. ಆದರೆ, ಇಲ್ಲಿ "ಮಾಡಿದ್ದೇವೆ ಎಂದು ಇರುವುದನ್ನು ಅವರು ನೋಡಬೇಕೆಂದು ಹೇಳುತ್ತೇನೆ. ಅರಣ್ಯ ಉತ್ಪನ್ನಗಳ ಕಳ್ಳಸಾಗಾಣಿಕೆಯನ್ನು ತಡೆಗಟ್ಟುವ ಸಲುವಾಗಿ ಕೊಡಗು, ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹತ್ತೊಂಬತ್ತು ಪೋಲೀಸ್ ಕಾವಲು ದಳಗಳನ್ನು ಮತ್ತು ಐದು ಸಂಚಾರಿ ದಳಗಳನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಪೋಲೀಸ್ ದಳವನ್ನು ನೇಮಿಸಿರುವುದು ಮುಖ್ಯವಲ್ಲ, ಕಳ್ಳಸಾಗಾಣಿಕೆ ನಿಜವಾಗಿಯೂ ತಪ್ಪಿದೆಯೇ ?

ಒಬ್ಬ ಸದಸ್ಯರು.—ಬರೀ ಪೋಲೀಸ್ ರಾಜ್ಯವಾಗಿದೆ.

ಶ್ರೀ ಡಿ.ಟಿ. ರಾಮು.—ದಂಗೆಗಳು ನಡೆದ ಸಂದರ್ಭದಲ್ಲಿ ಪೋಲೀಸರನ್ನು ಉಪಯೋಗಿಸದಿದ್ದರೆ ಪೋಲೀಸರು ಕೈಕಟ್ಟಿಕೊಂಡು ನೋಡುತ್ತಾ ನಿಂತಿದ್ದರು ಎಂದು ಆಪಾದನೆ ಮಾಡುತ್ತಾರೆ. ರಾಜ್ಯದಲ್ಲಿ ಸುವ್ಯವಸ್ಥೆಯನ್ನು ಕಾಪಾಡಬೇಕು, ಕಾನೂನು ವ್ಯವಸ್ಥೆಯನ್ನು ನೋಡಿಕೊಳ್ಳಬೇಕು ಮತ್ತು ಜನರ ಜೀವನ ನೆಮ್ಮದಿಯಿಂದಿರುವಂತೆ ಮಾಡುವ ಸಂದರ್ಭದಲ್ಲಿ ಪೋಲೀಸರು ಸ್ವಲ್ಪ ಕ್ರಮ ಕೈಗೊಂಡರೆ ಅದನ್ನು ಪೋಲೀಸ್ ಅತಿರೇಕವೆಂದು ಆಪಾದನೆ ಮಾಡುತ್ತಾರೆ. ಇದು ಸರಿಯಾದುದಲ್ಲ. ಕಾರ್ಮಿಕರು ಇಂದು ಚಳುವಳಿ ಹೂಡಿದ್ದಾರೆ. ರಕ್ಷಣಾ ಉಪಕರಣಗಳನ್ನು ತಯಾರಿಸುವ ಕಾರ್ಖಾನೆ ನಮ್ಮ ರಾಜ್ಯದಲ್ಲಿದೆ. ಮಾನ್ಯ ಪಂಪಾಪತಿಯವರು ಕೈಯಲ್ಲಿ ಹಿಡಿದಿರುವ ಕಿವಿಗೆ ಹಾಕಿಕೊಳ್ಳುವ ಉಪಕರಣವನ್ನು

ತಯಾರು ಮಾಡುವ ಕಾರ್ಖಾನೆಯೂ ಸಹ ನಮ್ಮ ರಾಜ್ಯದಲ್ಲಿದೆ. ನೀವು ಕಟ್ಟಿಕೊಂಡಿರತಕ ವಾಚಿನ ಹೆಚ್. ಎಂ. ಟಿ. ಕಾರ್ಖಾನೆ, ಬಿ. ಇ. ಎಲ್. ಕಾರ್ಖಾನೆ ಕೇಂದ್ರ ಸರ್ಕಾರಕ್ಕೆ ಸೇರಿದ ಉದ್ದಿಮೆಗಳು ಇವತ್ತು ನಮ್ಮ ರಾಜ್ಯದಲ್ಲಿವೆ. ಏಕದಂ ನೆಗೋಷಿಯೇಷನ್ ಟೇಬಲ್‌ಗೆ ಬನ್ನಿರಿ ಎಂದರೆ ಬರುವುದಕ್ಕೆ ಆಗುವುದಿಲ್ಲ. ಕಾರ್ಮಿಕರು ಶಾಂತಿ ಭಂಗ ಮಾಡುತ್ತೇವೆಂದು ಹೊರಟರೆ ಸರ್ಕಾರ ಜನತೆಯ ಹಿತದೃಷ್ಟಿಯಿಂದ ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಶಾಂತಿಪಾಲನೆ ದೃಷ್ಟಿಯಿಂದ ಪೋಲಿಸಿನವರನ್ನು ಉಪಯೋಗಿಸಿಕೊಳ್ಳಬೇಕಾಗುತ್ತದೆ. ಇವತ್ತು ರಾಜ್ಯದಲ್ಲಿ ವಿದ್ಯಾರ್ಥಿಗಳ ಚಳುವಳಿ ಇದೆ, ವಿದ್ಯಾರ್ಥಿಗಳ ಚಳುವಳಿಯ ಗುರಿಯಾದರೂ ಏನು ? ಎರಡು ಜನಾಂಗದವರಿಗೆ ಮೆಡಿಕಲ್ ಕಾಲೇಜುಗಳನ್ನು ಕೊಟ್ಟಿದ್ದಕ್ಕಾಗಿ, ಹೊಸದಾಗಿ ಮೆಡಿಕಲ್ ಕಾಲೇಜುಗಳನ್ನು ಕೊಡಕೂಡದೆಂದು ಚಳುವಳಿ ಹೂಡಿದ್ದಾರೆ. ಹಿಂದೆ ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭ ಮಾಡಿದಾಗ ಏತಕ್ಕೆ ಸುಮ್ಮನಿದ್ದರು? ಶತಶತಮಾನಗಳಿಂದ ತುಳಿತಕ್ಕೆ ಸಿಕ್ಕಿದಂತ ಒಂದು ಕೋಮಿನವರಿಗೆ ಮೆಡಿಕಲ್ ಕಾಲೇಜು ಕೊಡುವುದು ಬೇಡ ಅಂತ ಹೇಳುವುದಾದರೆ, ನಾವು ನಾಳೆ ಫಸ್ಟ್ ಗ್ರೇಡ್ ಕಾಲೇಜುಗಳು ಬೇಡ, ಇಂಜಿನಿಯರಿಂಗ್ ಕಾಲೇಜುಗಳು ಬೇಡ, ತಾಂತ್ರಿಕ ಶಾಲೆಗಳು ಬೇಡ ಎಂದು ಚಳುವಳಿ ಮಾಡಬೇಕಾಗುತ್ತದೆ ಇವರಲ್ಲಿ ಕಂಟ್ರಾಕ್ಟರುಗಳು, ಡಾಕ್ಟರುಗಳು ಆದರೆ, ಅವರ ಜೀವನವನ್ನು ನಡೆಸಿಕೊಂಡು ಹೋಗುತ್ತಾರೆ. ನಮ್ಮ ಊರಿನಲ್ಲಿ ಒಬ್ಬ ಡಾಕ್ಟರು ಬಂದು ನೆಲಸಿದರೆ ದಿನಕ್ಕೆ ೨೫–೩೦ ರೂಪಾಯಿ ಸಂಪಾದನೆ ಮಾಡುತ್ತಾನೆ, ಇದರಿಂದ ಅವನ ಜೀವನಕ್ಕೆ ಒಳ್ಳೆಯದಾಗುತ್ತದೆಯೋ ಹೊರತು ಕೆಟ್ಟದಾಗುವುದಿಲ್ಲ ಇದರ ಮೇಲೆ ಚಳುವಳಿ ಅಂದರೆ ಏನು ? ಇವತ್ತು ಚಳುವಳಿ ಮಾಡುವ ಉದ್ದೇಶ ಏನೆಂದರೆ, ಗುಂಡೂರಾಯರ ಸರ್ಕಾರದಲ್ಲಿ ಶಿಸ್ತು ಇಲ್ಲ, ಕಾನೂನು ಪಾಲನೆ ಇಲ್ಲ ಆದ್ದರಿಂದ ರಾಷ್ಟ್ರಪತಿಯವರ ಆಳ್ವಿಕೆಯನ್ನು ತಂದು ಹಾಕಿ ಉರುಳಿಸಬೇಕೆಂಬುದೇ ಆಗಿದೆ, ಇದೆಲ್ಲಾ ನಡೆಯುವುದಿಲ್ಲ ? ನಾವು ಎಲ್ಲಿಯವರೆಗೆ ಭದ್ರವಾಗಿರುತ್ತೇವೆ ಅಲ್ಲಿಯವರೆಗೆ ಏನೂ ಆಗುವುದಿಲ್ಲ. ನೀವು ಹೇಳತಕ್ಕ ವಿಚಾರಗಳು ರಚನಾತ್ಮಕವಾಗಿರಲಿ, ಒಳ್ಳೆಯ ಕೆಲಸ ಮಾಡಿದನ್ನು ಹೊಗಳಿ, ವಿರೋಧ ಪಕ್ಷದವರು ಎಲ್ಲದನ್ನೂ ವಿರೋಧ ಮಾಡುತ್ತವೆಂದು ಹೇಳುವುದಾದರೆ ಈ ದೇಶದ ಗತಿ ಏನು ? ರಾಷ್ಟ್ರದ ಗತಿ ಏನು ? ಸ್ವಾಮಿ, ನಾನು ಇನ್ನೂ ಮಾತನಾಡುವುದು ಇತ್ತು, ಕಾಲಮಿತಿ ಕಡಿಮೆ ಇರುವುದರಿಂದ ತಾವು ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ ಈ ಸಂದರ್ಭದಲ್ಲಿ ತಮಗೆ ನನ್ನ ಶುಭಾಶಯಗಳನ್ನು ಸಲ್ಲಿಸುವುದಕ್ಕೆ ಸಂತೋಷಪಡುತ್ತೇನೆ. ಅದೇ ರೀತಿ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ರಾಜ್ಯಪಾಲರಿಗೆ ನನ್ನ ವೈಯಕ್ತಿಕ ಶುಭಾಶಯಗಳನ್ನು ಕಳುಹಿಸುವುದಕ್ಕೆ ಇಷ್ಟಪಡುತ್ತೇನೆ. ಕೊನೆಯದಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ಜೈ ಹಿಂದ್.

SRI. A. LAKSHMISAGAR.—Sir, I must bring to your kind notice the callous attitude and indifference that is shown by the officers by their absence in the officers' gallery which is empty. What are we hert for ? Are we going to speak about Governor's address and point out the acts of omission and commisson to the hon'ble Members presne here and also to bring to the notice of the Government through the officers who, I should believe must be present in the House when the discussion is on an important subject like discussion on Governor's address ? I do not know which of the several ministers present here is taking notes and passing on that notes to the Hon'ble Minister who ultimately chooses to reply. They do not seem to have any noticeable symptoms of seriousness about what is going on here.

ಶ್ರೀ ಮಳ್ಳೂರು ಆನಂದರಾವ್.—೬ ಜನ ಮಂತ್ರಿಗಳು ಇದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದ್ದಾರೆ ಸ್ವಾಮಿ, ಅವರುಗಳು ಮಂತ್ರಾಲಯದ ಕಾರ್ಯಾಚರಣೆಯ ಬಿಸಿಯನ್ನು ಇಲ್ಲಿ ಮಾಡುತ್ತಿದ್ದಾರೆ,

ಶ್ರೀ ಮಳ್ಳೂರು ಆನಂದರಾವ್.—ನಾವುಗಳೆಲ್ಲಾ ತಮ್ಮ ಭಾಷಣವನ್ನು ಕೇಳುತ್ತೇವೆ. ತಾವು ಮಾತನಾಡಿ.

ಶ್ರೀ ಎ. ಲಕ್ಷ್ಮೀಸಾಗರ್ (ಚಿಕ್ಕಪೇಟೆ).—ಮಾನ್ಯ ಉಪಾಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ಈ ಸಭೆಯ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದರ ಮೂಲಕ ಸರ್ಕಾರದ ಒಂದು ವರ್ಷದ ಅವಧಿಯಲ್ಲಿ ಸಾಧಿಸಿರತಕ್ಕ ಸಾಧನೆಗಳ ಬಗ್ಗೆ ಮತ್ತು ಅವರು ಮಾಡದೇ ಇರತಕ್ಕ ಕಾರ್ಯಗಳ ಬಗ್ಗೆ, ಮಾಡಿರುವುದರಲ್ಲಿ ಕಂಡಿರತಕ್ಕ ಲೋಪದೋಷಗಳ ಬಗ್ಗೆ ವ್ಯಾಖ್ಯಾನ ಮಾಡುವುದಕ್ಕೆ ಇದು ಒಂದು ಒಳ್ಳೆಯ ಅವಕಾಶವೆಂದು ನಾನು ತಿಳಿದುಕೊಂಡಿದ್ದೇನೆ. ಇದು ಪ್ರತಿ ವರ್ಷವೂ ನಡೆಯತಕ್ಕಂಥ ಒಂದು ಪದ್ಧತಿ. ''ವರ್ಷೇ ವರ್ಷೇ ಕರ್ತವ್ಯ'' ಅಂದ ಹಾಗೆ ಅವರು ಭಾಷಣ ಮಾಡಿದ್ದಾರೆ. ಇದರಲ್ಲಿ ಸರ್ಕಾರದ ನೀತಿ ನಿಯಮಗಳ, ಧೋರಣೆಗಳ ನಿರೂಪಣೆ ಇದೆಯೆ ? ಇದು ರಾಜ್ಯಪಾಲರ ಸ್ವಂತ ಭಾಷಣವೆ ಎಂದು ನೋಡಿದರೆ, ಇದು ಸ್ವಂತ ಭಾಷಣವಾಗಿ ಕಾಣುವುದಿಲ್ಲ. ಆದ್ದರಿಂದ ನಾನು ಬಹಳ ಗುರುತರವಾಗಿ ಗುಂಡೂರಾಯರ ಸರ್ಕಾರದ ಒಂದು ವರ್ಷದ ಸಾಧನೆಗಳ ಬಗ್ಗೆ ವಸ್ತುನಿಷ್ಠೆಯಿಂದ ಪರೀಕ್ಷೆ ಮಾಡಬೇಕು ವುದಕ್ಕೆ ಪ್ರಯತ್ನ ಪಟ್ಟಿದ್ದೇನೆ. ನಾನು ಮಾತನಾಡುವುದರಲ್ಲಿ ರಾಜಕೀಯದ ನಿಲುವು ಬಹಳ ಕಡಿಮೆ ಯಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ವಸ್ತುನಿಷ್ಠೆಯಿಂದ ಎಂದು ಹೇಳುವಾಗ ಸರ್ಕಾರದ ಸಾಧನೆಗಳ ಬಗ್ಗೆ ಒಂದು ವಿಮರ್ಶಾತ್ಮಕವಾಗಿ ಹಾಗೂ ಸೂಚನಾತ್ಮಕವಾಗಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಾನು ಏನು ಹೇಳಬೇಕು ಎನ್ನುವುದೇ ತೋಚು ವುದಿಲ್ಲ. ಗುಂಡೂರಾಯರ ಸರ್ಕಾರ ಅಧಿಕಾರ ವಹಿಸಕೊಂಡ ಮೇಲೆ ಬಂದಿರತಕ್ಕ ಬರವಣಿಗೆಗಳು, ಲೇಖನಗಳು, ಹೊಗಳಿಕೆಗಳು, ಪತ್ರಿಕೆಗಳ ಪ್ರಕಟಣೆಗಳು, ಪತ್ರಿಕೆಗಳಲ್ಲಿ ಬಂದಿರತಕ್ಕ ಶ್ಲಾಘನೆ, ತಿರಸ್ಕಾರ ಇವರನ್ನು ಕುರಿತು ಹೊಗಳಿದಂತಹ ಮಾತುಗಳು ಎಲ್ಲವನ್ನೂ ಕಷ್ಟಪಟ್ಟು ನನ್ನ ಹಳೆಯ ವಿದ್ಯಾರ್ಥಿಗಳು ಮತ್ತು ಈಗಿನ ವಿದ್ಯಾರ್ಥಿಗಳು ಶೇಖರಣೆ ಮಾಡಿ ಕೊಟ್ಟಿದ್ದಾರೆ.

ಶ್ರೀ ಡಿ. ಟಿ. ರಾಮು.—ತಾವೂ ಕೂಡ ಕಾನೂನು ಪಂಡಿತರು.

ಶ್ರೀ ಎ. ಲಕ್ಷ್ಮೀಸಾಗರ್.—ತಾವು ಪಂಡಿತ ಪುತ್ರರು. ಮುಂದಿನ ಸಂದರ್ಭದಲ್ಲಿ ಮುಂದಿನ ಮಾತು ಹೇಳುತ್ತೇನೆ. ನಮ್ಮ ತಂದೆ ಪಂಡಿತರಲ್ಲ. ಹೆಬ್ಬೆಟ್ಟು ಹಾಕುತ್ತಿದ್ದರು. ದುರಾದೃಷ್ಟವಶಾತ, ನಾನು ಉಪಾಧ್ಯಾಯನಾಗಿ ೧೮ ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ.

ಶ್ರೀ ಮಳ್ಳೂರು ಆನಂದರಾವ್.—ನಿಮ್ಮ ಮಕ್ಕಳಿಗೆ ಆ ಯೋಗ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಬೇರೆಯವರ ಮಕ್ಕಳಿಗೆ ನಿಷ್ಠೆಯಿಂದ ಗುರುವಾಗಿ ಕೆಲಸ ಮಾಡಿ ಋಣ ತೀರಿಸಿದ್ದೇನೆ. ಉಳಿದಿದ್ದರೆ ತೀರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

೪–೦೦ ಪಿ.ಎಂ.

ಆದ್ದರಿಂದ ವಸ್ತುನಿಷ್ಟೆ ರೀತಿಯಲ್ಲಿ ಪರೀಕ್ಷೆ ಮಾಡಿ ನೋಡಿದ್ದೇನೆ. ನಾನು ಎಷ್ಟು ಹುಡುಕಿದರೂ, ಎಷ್ಟು ಪ್ರಯತ್ನ ಮಾಡಿದರೂ ಸಾಧನೆಗಳ ಅಂಶಗಳು ಕಣ್ಣಿಗೆ ಕಾಣಿಸತಕ್ಕದ್ದು ಕಷ್ಟವಾಗಿದೆ. ಗುಂಡೂ ರಾಯಣದ ಪರಿಯು ಹೇಗಿದೆ. ಈ ವರ್ಷದ ಪರಿಯಂ ಹೇಗಿದೆ ಎಂದು ಶ್ರಮಪಟ್ಟು ನೋಡಿದ್ದೇನೆ. ಕೆಲವು ವಿಚಾರಗಳನ್ನು ಮಾತ್ರ ಸೂಚನಾತ್ಮವಾಗಿ ನಾನು ತಮ್ಮಲ್ಲಿ ಪ್ರಸ್ತಾಪ ಮಾಡಲಿಕ್ಕೆ ಇಷ್ಟಪಡುತ್ತೇನೆ. ಗುಂಡೂರಾಯರ ಮಂತ್ರಿ ಮಂಡಲ ಮೂರರಿಂದ ಪ್ರಾರಂಭವಾಗಿ ನಿಧಾನವಾಗಿ ಮೂರು ಕಂತುಗಳಲ್ಲಿ ವಿಸ್ತಾರ ನಡದಿದೆ. ೨೬ ಇದ್ದುದು ೨೫ಕ್ಕೆ ಇಳಿದಿದೆ. ಇನ್ನೂ ವಿಸ್ತರಣೆ ಮಾಡುತ್ತೇನೆಂದು ಗುಂಡೂ ರಾಯರು ಘೋಷಣೆ ಮಾಡಿದ್ದಾರೆ. ಈ ವಿಸ್ತರಣೆಗೆ ಕೊನೆ ಇರುವುದಿಲ್ಲ. ಈ ಶಾಸನ ಸಭೆಗೆ ಎರಡು ವರ್ಷಗಳ ಕಾಲ ಅವಧಿ ಉಳಿದಿದೆ. ಅಷ್ಟು ವರ್ಷವೂ ವಿಸ್ತರಣೆ ಮಾಡುತ್ತಾ ಇರುತ್ತಾರೆ, ತೆಗೆಯುತ್ತಾ ಇರುತ್ತಾರೆ. ಈ ವಿಚಾರದಲ್ಲಿ ಯಾವ ಒಂದು ಆಧಾರಾತ್ಮಕವಾದ ಸರ್ಕಾರದ ನಿಲುವು ಕಾಣುತ್ತಿಲ್ಲ. ಈಗ ನಿಮ್ಮಲ್ಲಿ ಏನು ನಡೆಯುತ್ತಿದೆ, ಅದರ ಪರಿಣಾಮ ಆಡಳಿತದ ಮೇಲೆ ಬೀಳುತ್ತದೆ. ಮತ್ತು ರಾಜ್ಯದ ಜನಗಳ ಮೇಲೆ ಬೀಳುತ್ತದೆ. ಆದ್ದರಿಂದ, ತಾವು ಇದನ್ನು ಅಷ್ಟೊಂದು ಲಘುವಾಗಿ ತೆಗೆದುಕೊಳ್ಳ ತಕ್ಕದ್ದು ಸರಿಯಲ್ಲ. ಈಗ ಏನಾಗಿದೆ ಎಂದರೆ, ಒಬ್ಬ ಮಂತ್ರಿಯನ್ನು ತೆಗೆಯಬೇಕು ಎಂದರೆ ಬೆಂಗಳೂರಿ ನಿಂದ ಡೆಲ್ಲಿಗೆ ಓಡಿಹೋಗಬೇಕು. ಒಬ್ಬ ಮಂತ್ರಿಯನ್ನು ಸೇರಿಸಬೇಕಾದರೂ ಬೆಂಗಳೂರಿನಿಂದ ಡೆಲ್ಲಿಗೆ ಹೋಗಬೇಕು. ಈಗ ಬೆಂಗಳೂರಿನಿಂದ ಡೆಲ್ಲಿಗೆ ಓಡಾಟ, ಪಡದಾಟ, ಕಿತ್ತಾಟ, ತಿಕ್ಕಾಟ, ನಡೆಯುತ್ತಿರು

ವುದನ್ನು ನೋಡಿದರೆ ಮಂತ್ರಿ ಮಂಡಲವನ್ನು ಒಂದು ಸುವ್ಯವಸ್ಥಿತ ರೀತಿಯಲ್ಲಿ ರಚಿಸತಕ್ಕ ಒಂದು ಶಕ್ತಿ ನಿಮ್ಮ ಪಕ್ಷಕ್ಕೆ ಇಲ್ಲ. ಇದನ್ನು ಶ್ರೀಮಾನ್ ಗುಂಡೂರಾವ್ ಅವರು ತಮ್ಮ ನಡವಳಿಕೆಯಿಂದ ತೋರಿಸಿ ಕೊಂಡಿದ್ದಾರೆ. ನಮ್ಮ ಪೂಜ್ಯ ಗುರುಗಳಾದ ಡಿ.ವಿ.ಜಿ. ಅವರು ಒಂದು ಪದ್ಯವನ್ನು ಹೇಳಿದ್ದಾರೆ, ಅದು ಈ ರೀತಿ ಇದೆ.

''ಈ ಹೊತ್ತಿನ ಧಣಿ ನಾಳೆ ಪರಾರಿ
ನಾಳೆಯ ಧಣಿ ಈ ಹೊತ್ತು ಭಿಕಾರಿ
ದೊಂಬಿಯು ರಾಜ್ಯ ದೊಂಬರ ಭೋಜ್ಯ
ಗಂಭೀರ ಕತ್ತೆಗೆ ದೊಣ್ಣೆಯೆ ಪೂಜ್ಯ
ರಂಪು ರಗಳೆ ಸಂಪಿನ ಮೊಂಡಾಟ
ಗುಂಪು ಕಟ್ಟಿದರೆ ಮಂತ್ರಿಯ ಪೀಠ"

ಇದು ವಿಚಾರ. ಈ ಮಂತ್ರಿಮಂಡಲಕ್ಕೆ ಸಂಬಂಧಪಟ್ಟಂತಹ ವ್ಯವಸ್ಥೆಯನ್ನು ಕುರಿತು ಇದು ಪ್ರತಿ ಬಿಂಬಿಸುತ್ತದೆ.

ಶ್ರೀ ಪಿ. ಕೆ. ಕಳ್ಳಿಗುಡ್ಡ.—ಇದನ್ನು ಯಾರು ಬರೆದಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಕೀರ್ತಿ ಶ್ರೇಷ್ಠರಾದ ಪೂಜ್ಯ ಡಿ. ವಿ. ಗುಂಡಪ್ಪನವರ ಪದ್ಯ ಇದು.

ಶ್ರೀ ಜೆ. ಹೆಚ್. ಪಟೇಲ್.—ಈ ಪದ್ಯದ ನಾಲ್ಕನೇ ಸಾಲಿನಲ್ಲಿ ಗಂಭೀರ ಕತ್ತೆಗೆ ದೊಣ್ಣೆಯೇ ಪೂಜ್ಯ ಎಂದು ಏನು ಬರೆದಿದ್ದಾರೆ ಅದು ತಮ್ಮಗಳಿಗೆ ಅನ್ವಯಿಸುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ೨೨೫ ಜನ ಸದಸ್ಯರು ಇರತಕ್ಕ ಈ ಸಭೆಯಲ್ಲಿ ಸುಮಾರು ೧೬೫ ಜನ ಆಳುವ ಪಕ್ಷದಲ್ಲಿ ಇದ್ದಾರೆ. ಅಪಾಯದಲ್ಲಿರ ತಕ್ಕ ಜನ ಹೇಗೆ ಇರುತ್ತಾರೆ ಹಾಗೆ ನಡೆದುಕೊಳ್ಳತಕ್ಕ ರೀತಿಯಲ್ಲಿ ಇದ್ದಾರೆ. ಮಾನ್ಯ ಬೊಮ್ಮಾಯಿ ಯವರು ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳ ಕೈಕಟ್ಟಿದ್ದಾರೆಂದು ತಿಳಿಸಿದ್ದಾರೆ. ಉಪಾಧ್ಯಕ್ಷರ ಸ್ಥಾನವನ್ನು ವಿರೋಧ ಪಕ್ಷದವರಿಗೆ ಕೊಡುತ್ತೇವೆಂದು ಹಿಂದೆ ಒಂದು ರೀತಿಯ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದರು. ಅದನ್ನು ಕೊಡಲಿಕ್ಕೆ ಮುಖ್ಯ ಮಂತ್ರಿಗಳ ಕೈ ಕಟ್ಟಿದ್ದಾರೆ. ಆ ಕೆಲಸವನ್ನು ಮಾಡಲಿಕ್ಕೆ ಅವರ ಕೈಯಲ್ಲಿ ಆಗಲಿಲ್ಲ, ಆಡಳಿತ ಪಕ್ಷದಲ್ಲಿ ೧೬೫ ಜನ ಸದಸ್ಯರಿದ್ದಾರೆ. ಆದರೂ ದಂಗುಬಡಿದು ಹೋಗುತ್ತಿದ್ದಾರೆ ಆ ಪಕ್ಷದಲ್ಲಿ ಹೊಂದಾಣಿಕೆ ಇಲ್ಲದೇ ಇರುವ ಕಾರಣದಿಂದ ಎಷ್ಟು ಬಿಗಿ ಇರಬೇಕೋ ಅಷ್ಟು ಕಾಣಿಸುತ್ತಿಲ್ಲ. ಇದು ಗುಂಡೂರಾಯರ ಮಂತ್ರಿ ಮಂಡಲದ ವಿಸ್ತರಣೆ. ಇದು ಕಡಿಮೆ ಮತ್ತು ಜಾಸ್ತಿ ಮಾಡಬೇಕಾದ ವಿಚಾರ. ಇನ್ನು ಗುಂಡೂರಾಯರ ಆಡಳಿತದ ಅವ್ಯಕ್ತ ಅಸ್ಥಿರತೆ, ನೀರಸ ವಾತಾವರಣ, ಗೊತ್ತುಗುರಿ ಇಲ್ಲದ ಆಡಳಿತ ಹೇಗೆ ನಡೆದಿದೆ ಎಂದರೆ ಅದನ್ನು ಹೇಳಲಿಕ್ಕೆ ಶಬ್ದಗಳೇ ಸಿಕ್ಕುವುದಿಲ್ಲ. ಪ್ರಜಾಪ್ರಭುತ್ವದ ಮುಸುಕಿನಲ್ಲಿ ಏಕ ವ್ಯಕ್ತಿ ಆಡಳಿತ ನಡೆಯುತ್ತಿದೆ. ಈಗ ಮಂತ್ರಿ ಮಂಡಲ ಇದೆ, ದೊಡ್ಡ ಮಂತ್ರಿಗಳು ಇದ್ದಾರೆ ಸಣ್ಣ ಮಂತ್ರಿಗಳು ಇದ್ದಾರೆ. ಆದರೆ ಎಲ್ಲಾ ವಿಚಾರ ಗಳಲ್ಲೂ ಕೂಡ ಮಂತ್ರಿ ಮಂಡಲವನ್ನು ಅವರು ಕರೆಸಿ ಅವರೊಡನೆ ಸಮಾಲೋಚನೆ ನಡೆಸಿ ಸರ್ಕಾರದ ನಿರ್ಧಾರಗಳನ್ನು ಮಾಡುತ್ತಾರೋ ಅಥವಾ ಇವರೇ ಏಕಾಏಕಿಯಾಗಿ ಹಠಾತ್ತನೆ ತಮ್ಮ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾರೋ ಎನ್ನುವುದು ನಮ್ಮ ಮುಂದೆ ಇದೆ, ಎಲ್ಲವನ್ನೂ ಇವರೇ ಮಾಡುವ ಹಾಗೆ ಕಾಣಿಸುತ್ತಿದೆ. ಅವರ ಘೋಷಣೆಗಳು ತೀರ್ಮಾನಗಳು ನಿಂತು ನಿಂತಲ್ಲೇ ಸರ್ಕಾರದ ಸುಗ್ರೀವಾಜ್ಞೆಗಳು ಇವೆಲ್ಲಾ ನಡೆಯುತ್ತಿರುವುದು ಪ್ರಜಾಪ್ರಭುತ್ವದ ಮುಸುಕಿನಲ್ಲಿ ಆಗುತ್ತಿರುವ ಏಕ ವ್ಯಕ್ತಿಯ ಆಡಳಿತ ಎಂದು ಕಾಣಿಸುತ್ತದೆ. ಮೊಗಲರು ನಮ್ಮ ದೇಶದಲ್ಲಿ ಹೇಗೆ ಆಡಳಿತ ನಡೆಸುತ್ತಿದ್ದರು. ಅಲ್ಲಿ ಬಹಮನಿ ಸಾಮ್ರಾಜ್ಯ, ಅಲ್ಲಿದ್ದವರು ಸಾಮ್ರಾಜ್ಯ ಬಲಿಷ್ಟರು. ಈಗ ಇಲ್ಲಿ ಇವರ ಆಡಳಿತದ ವೈಖರಿ ಹೇಗಿದೆ ಎಂದರೆ ಮೊಗಲ್ ದರ್ಬಾರಿನ ರೀತಿಯಲ್ಲಿ ಆಡಳಿತ ನಡೆಯುತ್ತಿದೆ. ಇದು ನನ್ನ ಆಪಾದನೆಯಲ್ಲ, ಬೆಳಗಾಂ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಏನು ಹೇಳಿದರು. "I am the Chief Minister. I am the Government, my pronouncement, my order" ಎಂದು ಹೇಳಿದ್ದಾರೆ. ಇದನ್ನು ನೋಡಿದರೆ ನನಗೆ ಫ್ರಾನ್ಸಿನ ಹದಿನಾಲ್ಕನೇ ಲೂಯಿಯ ಹೆಸರು ಜ್ಞಾಪಕಕ್ಕೆ ಬರುತ್ತದೆ. ಈ ಸಂದರ್ಭದಲ್ಲಿ ಒಂದು ಮಾತು ಹೇಳಬೇಕು ಎಂದರೆ, ''ನಾ ವಿಷ್ಣು; ಪೃಥ್ವಿಪತಿ:'' ನಾನ ವಿಷ್ಣು, ಈ

ಭೂಮಿಗೆ ರಾಜ ಅಂದ ಹಾಗೆ ಗುಂಡೂರಾಯರು ತಮ್ಮ ಮಾತಿನಲ್ಲಿ ಹೇಳಿದ್ದಾರೆ. ನಾನು ಇದರ ಬಗ್ಗೆ ವ್ಯಾಖ್ಯಾನ ಮಾಡಲಿಕ್ಕೆ ಹೋಗುವುದಿಲ್ಲ. ಶ್ರೀಮಾನ್ ಗುಂಡೂರಾಯರೇ ಹೇಳಿದ್ದಾರೆ. ಇನ್ನೊಂದು ಕಡೆ ಏನು ಹೇಳಿದ್ದಾರೆ? ''ಇಂದಿರಾ ಕೃಪಾಪೋಷಿತ ನಾಟಕ ಮಂಡಳಿ'' ಎಂದು ಅವರೇ ಹೇಳಿಕೊಂಡಿದ್ದಾರೆ. ಅದರಲ್ಲಿ ಇವರು ಯಾವ ಪಾತ್ರವನ್ನು ತೆಗೆದುಕೊಂಡಿದ್ದಾರೋ ಗೊತ್ತಿಲ್ಲ. ಖಳನಾಯಕನು ಪಾತ್ರ ವಹಿಸಿಕೊಂಡಿದ್ದಾರೋ ಅಥವಾ ಬೇರೆ ಯಾವ ಪಾತ್ರವನ್ನು ವಹಿಸಿಕೊಂಡಿದ್ದಾರೋ ಗೊತ್ತಿಲ್ಲ. ಪ್ರಶ್ನೆ ಹಾಕಿದರೂ ಉತ್ತರ ಸಿಕ್ಕುವುದಿಲ್ಲ. ಮಂತ್ರಿಮಂಡಲದ ನಾಯಕರು, ಸಭೆಯ ನಾಯಕರು, ಇವರ ಸರ್ಕಾರದ ನೀತಿ ನಿಯಮ ಯಾವ ಇಸಮ್‌ಗೂ ಸಿಕ್ಕುವುದಿಲ್ಲ. ಯಾವ ತತ್ವಕ್ಕೂ ಬದ್ಧನಾಗಿರುವಂತೆ ಕಾಣುತ್ತಿಲ್ಲ. ಮಾನ್ಯ ಸದಸ್ಯರಾದ ರಾಮು ಅವರು ಹೇಳಿದ ಹಾಗೆ ಎಲ್ಲಾದಕ್ಕೂ ೨೦ ಅಂಶಗಳ ಕಾರ್ಯಕ್ರಮ. ನೀರು ಬೇಕು, ಸ್ಕೂಲು ಬೇಕು ಜೈಲಿನಲ್ಲಿ ಸುಧಾರಣೆಯಾಗಬೇಕು, ಯಾವುದು ಹೇಳಿದರು ೨೦ ಅಂಶಗಳ ಕಾರ್ಯಕ್ರಮ ಎಲ್ಲದಕ್ಕೂ ೨೦ ಅಂಶಗಳ ಕಾರ್ಯಕ್ರಮ ಸಿದ್ಧೌಷಧ. ಈ ಸಂದರ್ಭದಲ್ಲಿ ನನಗೆ ಒಂದು ಮಾತು ಜ್ಞಾಪಕಕ್ಕೆ ಬರುತ್ತದೆ. ಸರ್ವ ರೋಗಾಲುಕು ಸಾರಾಯಿ ಮಂದು ಎಂದು ಹೇಳಿದ ಹಾಗೆ ಎಲ್ಲದ್ದಕ್ಕೂ ಒಂದೇ ಉತ್ತರ ೨೦ ಅಂಶಗಳ ಕಾರ್ಯಕ್ರಮ. ಇದನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಸ್ವಾಮಿ, ಸರ್ಕಾರ ನಡೆಸುವುದು ಅಷ್ಟೊಂದು ಸುಲಭವಲ್ಲ. ಈಗ ತಮ್ಮಲ್ಲಿ ಸಾಕಷ್ಟು ಬಹುಮತ ಇದೆ, ಆದರೆ ಅದು ಸರ್ಕಾರದಲ್ಲಿ, ಕಾಣಿಸುತ್ತಿಲ್ಲ. ಇದರಿಂದ ಸರ್ಕಾರ ಇದೆಯೋ ಇಲ್ಲವೋ ಎನ್ನುವ ಅನುಮಾನ ಬಂದಿದೆ. ನೆನ್ನೆಯ ದಿವಸ ಮಾನ್ಯ ಪಟೇಲ್‌ರು ಒಂದು ಮಾತನ್ನು ಹೇಳಿದರು. ೧೬೩ ಜನ ಸದಸ್ಯರು ಇರತಕ್ಕ ಆಡಳಿತ ಪಕ್ಷದಲ್ಲಿ ಅದರ ಫಲ ಸರ್ಕಾರದಲ್ಲಿ ಕಾಣಿಸುತ್ತಿಲ್ಲ. ಸರ್ಕಾರದ ಯಂತ್ರದಲ್ಲಿ ಕಾಣಿಸುತ್ತಿಲ್ಲ. ಇದನ್ನು ಎಲ್ಲರೂ ಗಮನಿಸಬೇಕು. ನಿಮ್ಮ ಮೇಲೆ ನಾನು ದೋಷಾರೋಪಣೆ ಮಾಡುತ್ತಿಲ್ಲ. ಮುಂದಿನ ಚುನಾವಣೆಯಲ್ಲಿ ನೀವೇ ಗೆದ್ದು ಬನ್ನಿ. ನಿಮ್ಮನ್ನು ನೋಡಿದ ಮೇಲೆ ನಾನು ಮಂತ್ರಿ ಆಗಬೇಕು ಎನ್ನುವ ಆಸೆ ಹೊರಟುಹೋಗಿದೆ. ನನಗೆ ಭವಿಷ್ಯದಲ್ಲಿ ನಂಬಿಕೆ ಇಲ್ಲ. ಈಗ ಬಂದಿರತಕ್ಕ ಮಂತ್ರಿಗಳನ್ನು ನೋಡಿ ಅವರ ಸಂತೋಷ ನೋಡಿ, ಈ ಕೆಲಸ ಬೇಡ ಎಂದು ನಾನು ದೇವರಲ್ಲಿ ಮೊರೆಹಾಕಿಬಿಟ್ಟಿದ್ದೇನೆ. ಆದರೆ ಸರ್ಕಾರವನ್ನು ನಡೆಸುವುದು ಅಷ್ಟು ಸುಲಭವಲ್ಲ. ಮಾನ್ಯ ಡಿ.ವಿ.ಜಿ.ಯವರು ಹೇಳಿರುವ ಒಂದು ಕವನ ನನಗೆ ಜ್ಞಾಪಕಕ್ಕೆ ಬರುತ್ತದೆ. ಅದೇನೆಂದರೆ :

''ಸರಕಾರ ಹರಿಗೋಲು, ತೆರೆಸುಳಿಗಳತ್ತಿತ್ತ,
ಸೆರೆ ಕುಡಿದವರು ಕೆಲರು ಹುಟ್ಟು ಹಾಕುವರು,
ಬಿರುಗಾಳಿ ಬೀಸುವುದು ಜನವೆದ್ದು ಕುಣಿಯುವುದು,
ಉರುಳದಿಹುದಚ್ಚರಿಯೋ—ಮಂಕುತಿಮ್ಮ..'' ಎಂದು

ನಾನು ಒಂದೇ ಸಾರಿ ನೇರವಾಗಿ ಈ ವಿಧಾನ ಸಭೆಗೆ ಆರಿಸಿ ಬರಲಿಲ್ಲ. ನನ್ನ ಗುರುಗಳಾದ ಡಿ.ವಿ.ಜಿ. ಯವರು ಹೇಳಿರುವ ಮಾತುಗಳು ನನ್ನ ಜ್ಞಾಪಕದಲ್ಲಿ ಇದ್ದೇ ಇರುತ್ತವೆ. ನಾನು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿದ್ದೇನೆ.

ಮಾನ್ಯ ಸಭಾಧ್ಯಕ್ಷರೆ.—ನಮ್ಮ ಸನ್ಮಾನ ದುರಂಧರರಾದ ಗುಂಡೂರಾಯರ ವಿಚಾರದಲ್ಲಿ ಹೇಳುವುದಾದರೆ, ಇವರ ಸರ್ಕಾರದಲ್ಲಿ ಜನತೆಯ ಕಣ್ಣಿಗೆ ಕುಕ್ಕುವಂತೆ ಕಾಣುತ್ತಿರುವುದು ಎಂದರೆ, ಒಂದು ವರ್ಷದಲ್ಲಿ ಸುಮಾರು ೧೨೭ ಸನ್ಮಾನಗಳನ್ನು ಮಾಡಿಸಿಕೊಂಡು ಒಂದು ವಿಶ್ವದಾಖಲೆಯನ್ನೇ ಸ್ಥಾಪನೆ ಮಾಡಿರುವುದು.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಜನರು ಪ್ರೀತಿಯಿಂದ ಸನ್ಮಾನ ಮಾಡಿರುವುದೇ ಹೊರತು ಇವರು ಮಾಡಿಸಿಕೊಂಡಿದ್ದಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ಮೊನ್ನೆ ದಿವಸ ಯಾರೋ ಒಬ್ಬ ಸದಸ್ಯರು ''ನೀನು ಇಂಗ್ಲೀಷ್ ನಲ್ಲಿ ಏತಕ್ಕೆ ಬೊಗುಳುತ್ತೀಯೋ, ಕನ್ನಡದಲ್ಲೇ ಬೊಗುಳೋ ಎಂದು ಹೇಳಿದರು. ಆದ್ದರಿಂದ ನಾನು ಇವತ್ತು ಕನ್ನಡದಲ್ಲೇ ಬೊಗುಳುತ್ತಿದ್ದೇನೆ. ನಮ್ಮ ಮಾನ್ಯ ಮುಖ್ಯ ಮಂತ್ರಿಯವರು ಏತಕ್ಕೆ ಸನ್ಮಾನ ಮಾಡಿಸಿಕೊಳ್ಳುತ್ತಿದ್ದಾರೆಂಬುದು ನನಗೆ ಅರ್ಥವಾಗುತ್ತಿಲ್ಲ,

ಶ್ರೀ ಬಿ. ಭಾಸ್ಕರ ಶೆಟ್ಟಿ.—ನಾನು ನಿಮಗೆ ಆಗಲೇ ಹೇಳಿದೆ, ಮುಖ್ಯ ಮಂತ್ರಿಯವರನ್ನು ಜನಗಳೇ ಕರೆದು ಸನ್ಮಾನ ಮಾಡುತ್ತಿದ್ದಾರೆಯೇ ಹೊರತು, ಇವರೇ ಹೋಗಿ ನನಗೆ ಸನ್ಮಾನ ಮಾಡಿ ಎಂದು ಮಾಡಿಸಿಕೊಳ್ಳುತ್ತಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ ಯಾರಿಗೆ ಮಾಡುತ್ತಾರೆ, ಯಾವಾಗ ಮಾಡುತ್ತಾರೆ ಎಂಬುದು ನನಗೂ ಗೊತ್ತಿದೆ. ಯಾರಾದರೂ ಒಬ್ಬ ವ್ಯಕ್ತಿ ತನ್ನ ಅಧಿಕಾರಾವಧಿಯಲ್ಲಿ ಜನಗಳಿಗೆ ಒಳ್ಳೆಯದನ್ನು ಮಾಡಿದರೆ, ಅವನು ನಿವೃತ್ತನಾದ ಮೇಲೆ ನೀನು ಒಳ್ಳೆಯ ಕೆಲಸಮಾಡಿದ್ದೀ ಎಂದು ಕರೆದು ಸನ್ಮಾನ ಮಾಡುತ್ತಾರೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮುಖ್ಯ ಮಂತ್ರಿಯವರೂ ಒಳ್ಳೆಯ ಕೆಲಸ ಮಾಡಿರುವುದರಿಂದ ಜನಗಳೇ ಸನ್ಮಾನ ಮಾಡಿದ್ದಾರೆ.

SRI M.C. NANAIAH.—As Chief Whip, you should not forget For the second time he has become Chief Whip.

ಶ್ರೀ ಗಟ್ಟಿ ಚಂದ್ರಶೇಖರ್.—ಸ್ವಾಮಿ, ಸನ್ಮಾನ ಮಾಡಿದವರು ಯಾರೋ ಮಾಡಿಸಿಕೊಂಡವರ್ರಿ ಯಾರೋ ನೀವೇಕೆ ಹೀಗೆ ಕಿತ್ತಾಡುತ್ತೀರಿ.

ಶ್ರೀ ಎ. ಲಕ್ಷ್ಮೀಸಾಗರ್.—ನಾವು ಹಳೇ ಮೈಸೂರಿನ ಜನ. ನಮ್ಮಲ್ಲಿ ಒಂದು ಪರಂಪರೆ, ಒಂದು ಸಂಸ್ಕೃತಿ ಏನಿದೆ ಎಂದರೆ, ನಾನು ಆಗಲೇಹೇಳಿದಂತೆ ಒಬ್ಬವ್ಯಕ್ತಿ ಅಧಿಕಾರದಲ್ಲಿರುವವರೆಗೆ ಯಾರೂ ಅವನ ಹತ್ತಿರ ಹೋಗುವುದಿಲ್ಲ. ಅವನು ತನ್ನ ಅಧಿಕಾರಾವಧಿಯಲ್ಲಿ ಒಳ್ಳೆಯದನ್ನು ಮಾಡಿದ್ದರೆ, ಅವನು ನಿವೃತ್ತನಾದಮೇಲೆ ಕರೆದು ಸನ್ಮಾನ ಮಾಡುತ್ತಾರೆ. ಆದರೆ ಈ ಮುಖ್ಯ ಮಂತ್ರಿಯವರು ಇನ್ನೂ ಮುಖ್ಯ ಮಂತ್ರಿಯವರ ಕುರ್ಚಿಯ ಮೇಲೆ ಕೂತುಕೊಳ್ಳುವುದಕ್ಕೆ ಮೊದಲೇ ಸನ್ಮಾನ ಮಾಡಿಸಿಕೊಂಡಿದ್ದಾರೆ. ಇವರ ಸನ್ಮಾನ ಸಮಿತಿಗೆ ಅಧ್ಯಕ್ಷರು ಮಂತ್ರಿಗಳು. ಸ್ವಾಮಿ, ಇವತ್ತು 'ಲೋಕೋಪಯೋಗಿ ಇಲಾಖೆಯ ಅಸಿಸ್ಟೆಂಟ್ ಇಂಜಿನಿಯರ್‌ಗಳ ಸಂಘದ ಆಶ್ರಯದಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಸನ್ಮಾನ' ಎಂದು ಕಣ್ಣಿಗೆ ಕುಕ್ಕುವಂಥ ರೀತಿಯಲ್ಲಿ ಪ್ರಚಾರ ಕಾರ್ಯ ನಡೆದಿದೆ. ಇದರಲ್ಲಿ ಯಾರ್ಯಾರು ಇದ್ದಾರೆಂದರೆ, ಕಳ್ಳಭಟ್ಟಿ ಸಾರಾಯಿ ಮಾರುವವರು ಕಂಟ್ರಾಕ್ಟರ್‌ಗಳು ಬ್ಲಾಕ್ ಮಾರ್ಕೆಟ್‌ನವರು ಲಿಕ್ಕರ್ ಮ್ಯಾನುಫ್ಯಾಕ್ಚರರ್ಸ್ ಇವರುಗಳ ಹೆಸರುಗಳೆಲ್ಲಾ ಇವೆ. ಇದನ್ನು ನಾನೇನು ಉತ್ಪ್ರೇಕ್ಷೆ ಮಾಡಿ ಹೇಳುತ್ತಿಲ್ಲ. ಪ್ರಿಂಟ್ ಮಾಡಿಸಿಕೊಟ್ಟಿದ್ದಾರೆ. ಯಾರೇ ಆಗಲಿ ಸುಮ್ಮನೆ ಸನ್ಮಾನ ಮಾಡುತ್ತಾರೆಯೇ? ನಾನೂ ಕೂಡ ೨೦ ವರ್ಷಗಳಿಂದ ಉಪಾಧ್ಯಾಯನಾಗಿ ಕೆಲಸಮಾಡುತ್ತಿದ್ದೇನೆ. ನನಗೆ ಯಾರೂ ಒಂದು ಕಾಸೂ ಖರ್ಚು ಮಾಡಿ ಸನ್ಮಾನ ಮಾಡಿಲ್ಲ.

ಮಾನ್ಯ ಉಪಾಧ್ಯಕ್ಷರೆ, ನಾನು ತಮಗೆ ಒಂದು ಮಾತನ್ನು ಹೇಳಬೇಕೆಂದರೆ,

* * *

ಈ ಸನ್ಮಾನಕೋಸ್ಕರ ಎಷ್ಟು ದುಡ್ಡು ಖರ್ಚಾಗಿದೆ ಎಂದರೆ ಒಂದೊಂದು ಸನ್ಮಾನಕ್ಕೂ ಜುಜುಬಿ ಎಂದರೂ ೧ ಲಕ್ಷ ರೂಪಾಯಿ. ಅಂದರೆ ೧೩೦ ಸನ್ಮಾನ ಸಮಾರಂಭಗಳಿಗೂ ೧೩೦ ಲಕ್ಷ ರೂಪಾಯಿ ಆಯಿತು. ಇಷ್ಟು ಹಣವನ್ನು ಎಲ್ಲಿಂದ ತಂದು ಇವರು ಖರ್ಚು ಮಾಡಿದ್ದಾರೆ ಲಕ್ಷಗಟ್ಟಲೆ ಹಣ ಎಂದರೆ ಇದೇನೂ ಸಾಮಾನ್ಯವಲ್ಲ. ನಾನು ಮಾನ್ಯ ಅಜೀಜ್ ಸೇಠ್‌ರವರ ಜೊತೆ ದೆಹಲಿಗೆ ಹೋಗಿದ್ದಾಗ ಅವರು ಮಸೀದಿಗಳಿಗೆ ಕರೆದುಕೊಂಡು ಹೋದರು. ಅಲ್ಲಿ ಎಷ್ಟೋ ಗೋರಿಗಳು ಅರ್ಧ ಕಟ್ಟಿದ್ದವು ಮತ್ತೆ ಕೆಲವು ಪೂರ್ತಿ ಕಟ್ಟಿದ್ದುವು. ಇದು ನನಗೆ ಅರ್ಥವಾಗದೆ ಕೆಲವು ಏತಕ್ಕೆ ಹೀಗೆ ಅರ್ಧಕ್ಕೇ ನಿಲ್ಲಿಸಿದ್ದಾರೆಂದು ಕೇಳಿದೆ. ಆಗ ಅವರು ಹೇಳಿದ್ದು ಹಿಂದಿನ ರಾಜರುಗಳು ತಾವು ಅಧಿಕಾರದಲ್ಲಿದ್ದಾಗ ಮುಂದಿನವರು ತಮ್ಮ ಗೋರಿಗಳನ್ನು ಕಟ್ಟಿಸುತ್ತಾರೋ ಇಲ್ಲವೊ ಎಂಬ ಅನುಮಾನದಿಂದ ತಮ್ಮ ಗೋರಿಯನ್ನು ತಾವು ಬದುಕಿರುವಾಗಲೇ ಕಟ್ಟಿಸಿಕೊಳ್ಳುತ್ತಿದ್ದರು. ಯಾರು ಪೂರ್ತಿಕಾಲ ರಾಜರಾಗಿದ್ದರು ಅವರ ಗೋರಿ ಪೂರ್ತಿಯಾಗಿವೆ. ಯಾರು ಪೂರ್ತಿಯಾಗಿ ರಾಜ್ಯಭಾರಮಾಡದೆ ಮಧ್ಯದಲ್ಲೇ ಸತ್ತು ಹೋದರು ಅಂಥವರ ಗೋರಿಗಳು ಅರ್ಧದಲ್ಲೇ ನಿಂತಿವೆ ಎಂದು ಹೇಳಿದರು.

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ಮಾನ್ಯ ಸದಸ್ಯರು ಮಾತನಾಡುತ್ತಾ ಕೆಲವು ಆಕ್ಷೇಪಣೀಯ ಪದವನ್ನು ಉಪಯೋಗಿಸಿದ್ದಾರೆ. ಅದು ಸರಿಯಲ್ಲ. ಯಾವುದಾದರೂ ಒಂದು ನಿರ್ದಿಷ್ಟವಾದ ಪ್ರಕರಣವಿದ್ದು ಅವರಿಗೆ ಮಾನವಿಲ್ಲದೇ ಸನ್ಮಾನ ಮಾಡಿಸಿಕೊಂಡಿದ್ದರೆ, ಆಗ ಅಂಥಾ ವ್ಯಕ್ತಿಗೆ ಮಾನ

---

* As directed by the chair the words are expanged.

ಇಲ್ಲದೇ ಸನ್ಮಾನ ಮಾಡಿಸಿಕೊಂಡಿದ್ದಾರೆಂದು ಹೇಳಿದರೆ ಅದಕ್ಕೆ ನನ್ನ ವಿರೋಧವಿಲ್ಲ. ಆದರೆ ಇವರು ಆಡಿರುವ ಮಾತಿನಲ್ಲಿ ಸನ್ಮಾನ ಮಾಡಿಸಿಕೊಳ್ಳುವ ಯಾವ ಒಬ್ಬ ವ್ಯಕ್ತಿಗೂ ಮಾನ ಇಲ್ಲ ಎಂಬ ಅರ್ಥ ಬರುತ್ತದೆ. ನಾಳೆ ದಿವಸ ಪತ್ರಿಕೆಯವರೂ ಕೂಡ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಅವರು ಹೇಳಿದ್ದನ್ನು ಮುಖ ಪುಟದಲ್ಲಿ ಹಾಕುತ್ತಾರೆ. ಇವರು ಉಪಯೋಗಿಸಿರುವ ರೀತಿಯಲ್ಲೇ ನಾನೂ ಕೂಡ ಪದಗಳನ್ನು ಉಪಯೋಗಿಸುವುದಾದರೆ ಅನೇಕ ಪದಗಳನ್ನು ನಾನು ಬಳಸುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಉಪಾಧ್ಯಕ್ಷರೆ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಏನೆಂದರೆ ಸಂಸತ್ತಿನಲ್ಲಿ ಉಪಯೋಗಿಸಲು ಯೋಗ್ಯವಲ್ಲದ ಪದವನ್ನು ಮಾನ್ಯ ಸದಸ್ಯರು ಉಪಯೋಗಿಸಿದ್ದರೆ ಆಗ ಮಾತನಾಡಬೇಕು. ಈಗ ಲಕ್ಷ್ಮೀಸಾಗರ್‌ರವರು ಉಪಯೋಗಿಸಿರುವ ಪದಗಳಲ್ಲಿ ಅನ್ ಪಾರ್ಲಿಮೆಂಟರಿ ಪದ ಯಾವುದಾದರೂ ಇದೆಯೇ? ನೀವು ಏತಕ್ಕೆ ಅಷ್ಟು ಖಾರವಾಗಿ ಮಾತನಾಡುತ್ತೀರಿ ?

ಶ್ರೀ ಮಳ್ಳೂರು ಆನಂದರಾವ್.—ಪದಗಳನ್ನು ಉಪಯೋಗಿಸುವ ವಿಧಾನ ನನಗೂ ಗೊತ್ತು. ಆದರೆ ಮಾನ್ಯ ಸದಸ್ಯರು ಯಾವ ಸೆನ್ಸ್‌ನಲ್ಲಿ ಈ ಪದವನ್ನು ಉಪಯೋಗಿಸಿದ್ದಾರೆಂಬುದನ್ನು ತಾವು ಯೋಚನೆ ಮಾಡಬೇಕು. ಅವರು ಹೇಳಿದ ಪದಗಳ ಅರ್ಥ ಎಲ್ಲಿಗೆ ಹೋಗುತ್ತದೆಂದು ತಾವು ಯೋಚನೆ ಮಾಡಬೇಕು.

ಶ್ರೀ ಜೆ. ಹೆಚ್. ಪಟೇಲ್.—ಸ್ವಾಮಿ, ಹೌಸ್ ಆಫ್ ಕಾಮನ್ಸ್‌ನಲ್ಲಿ ನಡೆದಂತಹ ಒಂದು ಪ್ರಕರಣವನ್ನು ತಮಗೆ ಹೇಳಬಯಸುತ್ತೇನೆ. ಒಬ್ಬ ಸದಸ್ಯರು ಇನ್ನೊಬ್ಬ ಸದಸ್ಯರನ್ನು ಸಂಬೋಧಿಸಿ ಮಾತನಾಡುವಾಗ ಬಾಸ್ಟರ್ಡ್ ಎಂದು ಹೇಳಿದರು. ತಂದೆ ಸತ್ತಮೇಲೆ ಹುಟ್ಟಿದ ಮಕ್ಕಳಿಗೆ ಬಾಸ್ಟರ್ಡ್ ಎಂದು ಕರೆಯುತ್ತಾರೆ. ಆಗ ಇನ್ನೊಬ್ಬ ಸದಸ್ಯರು ಏನು ಹೀಗೆ ಅವರನ್ನು ಬಾಸ್ಟರ್ಡ್ ಎಂದು ಹೇಳುತ್ತೀರಿ ಎಂದರು. ಆಗ ಆ ಸದಸ್ಯ ಹೇಳಿದ್ದು, ಹೌದು ಇದು ವಾಸ್ತವಾಂಶ ಅವರ ತಂದೆ ಸತ್ತಮೇಲೆ ಇವರು ಹುಟ್ಟಿದ್ದರಿಂದ ಇವರಿಗೆ ಬಾಸ್ಟರ್ಡ್ ಎಂದು ಕರೆದೆ ಎಂದರು.

ಶ್ರೀ ಭಾಸ್ಕರಶೆಟ್ಟಿ.—ನಿರ್ದಿಷ್ಟವಾಗಿ ಹೇಳಲಿ. ದೇವರಾಜ ಅರಸ್‌ರವರು ಎಷ್ಟೊಂದು ಸನ್ಮಾನಗಳನ್ನು ಮಾಡಿಸಿಕೊಂಡಿಲ್ಲ. ಮಾನ್ಯ ದೇವರಾಜ ಅರಸ್‌ರವರು ಖಡ್ಗ, ಗದೆ ಇವೆಲ್ಲವನ್ನು ತೆಗೆದುಕೊಂಡು ಸನ್‌ಮಾನ ಮಾಡಿಸಿಕೊಳ್ಳಲಿಲ್ಲವೆ.

ಶ್ರೀ ಎಂ. ಸಿ. ನಾಸಯ್ಯ.—ಮಾನ್ಯ ಲಕ್ಷ್ಮೀಸಾಗರ್‌ರವರು ಮಾತನಾಡುತ್ತಿರ ಬೇಕಾದರೆ ಮಾನ್ಯ ಆನಂದರಾಯರು ಕ್ರಿಯಾಲೋಪವನ್ನು ಎತ್ತಿದರು ಅವರ ಕ್ರಿಯಾಲೋಪವೇನೆಂದರೆ ಶ್ರೀ ಲಕ್ಷ್ಮೀಸಾಗರ್‌ರವರು ಉಪಯೋಗಿಸಿದ ಪದಗಳು ಅನ್‌ಪಾರ್ಲಿಮೆಂಟರಿ ಎಂದು ಈ ರೀತಿಯಾಗಿ ಕ್ರಿಯಾಲೋಪವೆತ್ತಿ, ಕ್ರಿಯಾಲೋಪದ ಮುಸುಕಿನಲ್ಲಿ ಮಾತನಾಡುವುದಾದರೆ ನಾವು ಕೂಡ ಎಷ್ಟುಬೇಕಾದರೂ ಮಾತನಾಡಬಹುದಲ್ಲ.

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಮಳ್ಳೂರ್ ಆನಂದರಾವ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮಾತನಾಡುತ್ತಾ ಕೆಲವು ಆಕ್ಷೇಪಣೀಯ ಪದವನ್ನು ಬಳಸಿದ್ದಾರೆ. ಇದು ಅವರು ಉಪಯೋಗಿಸಿದ ಕಂಟೆಸ್ಟ್ ಅನ್ ಪಾರ್ಲಿಮೆಂಟ್ ಆಗುತ್ತದೆ. ಇದರ ಮೇಲೆ ನಾನು ಒಂದು ಕ್ರಿಯಾಲೋಪವನ್ನು ಎತ್ತಿ ಮಾತನಾಡುತ್ತಿದ್ದೆ. ಅದು ಇನ್ನೂ ಪೂರ್ತಿ ಮಾಡಿಲ್ಲ. ಮಾನ ಇಲ್ಲದವರು ಸನ್‌ಮಾನಗಳನ್ನು ಮಾಡಿಸಿಕೊಳ್ಳುತ್ತಾರೆಂದರೆ, ಈ ಮನೆಯ ಸದಸ್ಯರು ಯಾರೇ ಆಗಲಿ ಅವರ ಗೌರವಕ್ಕೆ ಚ್ಯುತಿ ಮಾಡಿದಂತಾಗುತ್ತದೆ. ಮಾನ್ಯ ಲಕ್ಷ್ಮೀಸಾಗರ್‌ರವರನ್ನೇ ಕರೆದರು ಹೋಗುತ್ತಾರೆ. ಮಾನ್ಯ ದೇವರಾಜ ಅರಸ್‌ರವರು ಮಾನ್ಯ ಗುಂಡೂರಾಯರಿಗಿಂತ ಹತ್ತುಪಟ್ಟು ಸನ್‌ಮಾನಗಳನ್ನು ಮಾಡಿಸಿಕೊಂಡಿರುತ್ತಾರೆ. ಆ ಸನ್‌ಮಾನಗಳಿಗೆ ರಾಮ್‌ದೇವ್‌ರವರು ಹೋಗಿರಬಹುದು ಮಾನ್ಯ ಪಟೇಲರು ಹೋಗಿರಬಹುದು. ಅವರೆಲ್ಲರಿಗೂ ಮಾನವಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ "ಮಾನ ಇಲ್ಲದವರು ಸನ್‌ಮಾನ ಮಾಡಿಸಿಕೊಳ್ಳುತ್ತಾರೆ" ಎನ್ನುವ ಪದವನ್ನು ದಯವಿಟ್ಟು ಕಡತದಿಂದ ತೆಗೆಸಬೇಕೆಂದು ಹೇಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್.—ಮಾನ ಎನ್ನುವುದಕ್ಕೆ ಕನ್ನಡದಲ್ಲಿ ಯಾವ ಅರ್ಥದಲ್ಲಿ ಉಪಯೋಗಿಸ ಬಹುದು ಎನ್ನುವುದಕ್ಕೆ ಉದಾಹರಣೆ ಹೇಳುತ್ತೇನೆ. ಮಾನ ಮತ್ತು ಮರ್ಯಾದೆ ಇವೆರಡನ್ನು ಜೊತೆ ಯಲ್ಲಿಯೇ ತೆಗೆದುಕೊಂಡು ರೆಸ್ಪೆಕ್ಟಬಲ್ ಎಂದು ಕರೆದಿದ್ದಾರೆ.

ಮಾನ ಎಂದರೆ ಅಳತೆಯಾಗುತ್ತದೆ ಮೆಷರ್ ಎಂದು ಅರ್ಥ ಶಬ್ದದ ಅರ್ಥವನ್ನು ಶಬ್ದಕೋಶವನ್ನು ನೋಡಿ ಹೇಳುತ್ತಿದ್ದೇನೆ.

ಶ್ರೀ ಮಳ್ಳೂರ್ ಆನಂದರಾವ್.—ತಾವು ಬಹಳ ಬುದ್ಧಿವಂತರು, ಅದರ ಅರ್ಥ ನಮಗೆ ಹೇಳ ಬೇಕಾಗಿಲ್ಲ.

ಶ್ರೀ ಜೆ.ಎಚ್. ಪಟೇಲ್.—ಮಾನ ಎನ್ನುವುದರ ಅರ್ಥ ಬಳ್ಳ, ಮೆಷರ್ ಆಫ್ ಆಕ್ಟ್. Act of measuring, act of meting measure in general, dimension, magnitude and amount.

ಶ್ರೀ ಮಳ್ಳೂರ್ ಆನಂದರಾವ್.—ಕನ್ನಡದಲ್ಲಿರತಕ್ಕಂಥ ಪ್ರಚಲಿತ ಶಬ್ದ ಏನು ಎಂಬುದನ್ನು ಹೇಳಿ. ಇಂಗ್ಲೀಷ್ ವಾಖ್ಯಾನ ನಮಗೆ ಬೇಡ.

SRI J.H. PATEL.—Opinion, conception, a good opinion, of oneself concede, self-reliance, arrogant, pride, all these things. ಆದ್ದರಿಂದ ಯಾವ ದೃಷ್ಟಿಯಲ್ಲಿ ನೋಡಿದರೂ ಕೂಡ ಮಾನ ಇಲ್ಲದವರು ಎನ್ನುವುದು ಅನ್‌ಪಾರ್ಲಿಮೆಂಟರಿಯಲ್ಲ ಎನ್ನುವುದು ನನ್ನ ವಾದ.

MR. SPEAKER.—I address you as hon Member though I concede that you have this. So also the others-every Member of this August House. ಮಾನ್ಯ ಸದಸ್ಯರಿಗೆ ನಾನು ಹೇಳುವುದೇನೆಂದರೆ, ಈ ರಾಜ್ಯದಲ್ಲಿ ಇರತಕ್ಕಂಥ ಪ್ರತಿಯೊಬ್ಬ ರಿಗೂ ಮಾನ ಇದೆ ಎಂದು ಭಾವಿಸಿಕೊಳ್ಳಬೇಕು. ಮಾನವಿಲ್ಲವೆಂದು ನಾವು ಯಾರಿಗೂ ಹೇಳುವುದಕ್ಕೆ ಸಾಧ್ಯವಿಲ್ಲ. ಆ ರೀತಿ ಹೇಳಬೇಕಾದರೆ ಯಾವ ಒಂದು ಕಾರಣಕ್ಕಾಗಿ ಮಾನವಿಲ್ಲವೆಂದು ಹೇಳುತ್ತಾರೆ. ಆ ಕಾರಣವನ್ನು ಹೇಳಿದಾಗ ಮಾತ್ರ ಆ ಪ್ರಶ್ನೆ ಬರುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ತಾವು ಅವರು ಹೇಳಿದ್ದನ್ನು ಕೇಳಿದಿರಿ. ನಾನು ಹೇಳುವುದನ್ನು ಸ್ವಲ್ಪ ಕೇಳಿ. ನಾನು ಉಪಯೋಗಿಸಿದ ಶಬ್ದಕ್ಕೆ ತಕರಾರು ಎತ್ತಿದವರು ಮಾನ್ಯ ಮಳ್ಳೂರು ಆನಂದರಾವ್ ಅವರು ಅದಕ್ಕೆ ಸಮಾಧಾನ ಹೇಳಿದವರು ಶ್ರೀ ಜೆ.ಎಚ್. ಪಟೇಲ್ ಅವರು Power of expunction of terms and expressions used...............

ಅಧ್ಯಕ್ಷರು.—ಮಾನ ಸನ್‌ಮಾನ ಎನ್ನುವ ಶಬ್ದಗಳು ಅನ್‌ಪಾರ್ಲಿಮೆಂಟರಿ ಆಗುವುದಿಲ್ಲ. ಆದರೆ ಮಾನ ಇಲ್ಲದವರು ಸನ್‌ಮಾನ ಮಾಡಿಸಿಕೊಳ್ಳುತ್ತಾರೆ ಎಂದರೆ ಏನು ಅರ್ಥ ಕೊಡುತ್ತದೆ ಎಂಬುದನ್ನು ತಾವೇ ತಿಳಿದುಕೊಳ್ಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಈಗಾಗಲೇ ಅದರ ಹಿನ್ನೆಲೆ ಕೊಟ್ಟಿದ್ದೇನೆ.

ಅಧ್ಯಕ್ಷರು.—ಸಾಮಾನ್ಯವಾಗಿ ತಮಗೆ ಗೊತ್ತಿದೆ, ಡೆಫ್‌ಮೆಟ್ರಿ ಶಬ್ದಗಳನ್ನು ಇಲ್ಲಿ ಬಳಸಬಾರದು. ತಾವು ಯಾವ ಸಂದರ್ಭದಲ್ಲಿ, ಯಾವ ಹಿನ್ನೆಲೆಯಲ್ಲಿ ಯಾವ ಅರ್ಥದಲ್ಲಿ ಬಳಸಿದ್ದೀರೋ, ಅದು ಏನೇ ಇರಲಿ ಆ ಪದ ಪ್ರಯೋಗ ಮಾಡಿದ್ದು ಸರಿಯಲ್ಲ. ಅದನ್ನು ಕಡತದಿಂದ ತೆಗೆದುಬಿಡುವುದು ಸೂಕ್ತ. ಈ ಸಭೆಯ ಸದಸ್ಯರೆಲ್ಲರಿಗೂ ಮಾನ ಇದೆ ಎಂದು ತಾವು ಭಾವಿಸಿಕೊಳ್ಳಬೇಕು. ಮಾನ ಇಲ್ಲದವರು ಯಾರೂ ಇಲ್ಲಿ ಇಲ್ಲ. ಮಾನವುಳ್ಳವರು ಒಳಗೂ ಇದ್ದಾರೆ, ಹೊರಗೂ ಇದ್ದಾರೆ. ಸ್ಪಷ್ಟವಾಗಿ, ನಿಖರ ವಾಗಿ ಅದು ಇಲ್ಲ ಎಂದು ಗೊತ್ತಾದಾಗ ಮಾತ್ರ ನಮಗೆ ಯಾರಿಗಾದರೂ ಆಗಲಿ ಹೇಳುವುದಕ್ಕೆ ಹಕ್ಕು ಬರುತ್ತದೆ.

೪–೩೦ ಪಿ. ಎಂ.

ಅಧ್ಯಕ್ಷರು.—ಆ ಶಬ್ಧವನ್ನು ಕಡತದಿಂದ ತೆಗೆಯೋಣ.

ಶ್ರೀ ಎ. ಲಕ್ಷ್ಮೀಸಾಗರ್.—ಆ ಶಬ್ಧವನ್ನು ಕಡತದಿಂದ ತೆಗೆಯುವುದು ಬೇಡ.

ಅಧ್ಯಕ್ಷರು.—ಈ ಸಭೆಯ ಸದಸ್ಯರೆಲ್ಲರಿಗೂ ಕೂಡ ಮಾನ ಇದೆಯೆಂದು ಭಾವಿಸಬೇಕಾಗುತ್ತದೆ. ಸ್ಪಷ್ಟವಾಗಿ, ನಿಖರವಾಗಿ ಅದು ಇಲ್ಲಾ ಎಂದು ಸಕಾರಣವಾಗಿ ಗೊತ್ತಾದಾಗ ಮಾತ್ರ ನಿಮಗಾಗಲೀ, ಮತ್ತೆ ಯಾರಿಗೇ ಆಗಲಿ ಆ ಬಗ್ಗೆ ಹೇಳುವ ಹಕ್ಕು ಇರುತ್ತದೆ.

SRI A. LAKSHMISAGAR.—I made a request to you, just before you gave your ruling, that the power of expuction of the Presiding Officer vis-a-vis the words that are used during the course of debate or discussion on any matter is very much limited. The power that has been exercised, that is being exercised is a matter which requires some consideration, some discussion and some thought. My submission is it cannot simply be said this is 'unparliamentary.'

MR. SPEAKER.—I never said it is 'unparliamentary.'

SRI A. LAKSHMISAGAR.—What is the effect of it ?

MR. SPEAKER.—That presumption everyone of us have... You cannot make use or take the privilege to say anything. You cannot say that unless you prove beyond doubt. The materials are in your hands. That is the position.

SRI A. LAKSHMISAGAR.—My submission is, you kindly bear with me and try to understand. The power of expunction should be exercised with great care and caution. Therefore, what I want to submit to you is, this must be properly discussed on a proper occasion. I am prepared to advance argument It should not be hastily resorted to. This is my submission.

MR. SPEAKER.—It is alright.

SRI A. LAKSHMISAGAR.—Therefore, my grievance against you is, without hearing me here is the man who made the accusation–you have heard only partly Sri Mallur Ananda Rao and Sri J. H. Patel, and pre-emptorily ordered. This is the second time, if I may say so that you have pre-emptorily came with a pronouncement. My submission is, it has been now done. Enough damage is done to me. I am prepared to bear it. Therefore, my submission is, whenever there is such an occasion kindly give me or any other member who wishes to say some thing about this and give your considered ruling, because...

ನಾನು ಒಂದು ಸಲ ಸಭೆಯಲ್ಲಿ "ಬುದ್ಧೀ" ಎಂದು ಹೇಳಿದೆ. ಹಿಂದಿದ್ದ ಅಧ್ಯಕ್ಷರು ಆ ಶಬ್ದವನ್ನು ಉಪಯೋಗಿಸಬಾರದು ಎಂದು ಹೇಳಿದರು. ನಾವು ಇನ್ನು ಮುಂದೆ ಯಾವ ಶಬ್ದಗಳಲ್ಲಿ ಉಚ್ಚರಿಸಬೇಕಾಗುತ್ತದೆಂದು ವಿಚಾರ ಮಾಡೋಣ.

ಅಧ್ಯಕ್ಷರು.—ತಾವು ಹೇಳಿ ಆಯಿತಲ್ಲಾ ? ಇನ್ನೂ ಏನಾದರೂ ಹೇಳುವುದು ಇದೆಯೋ ?

ಶ್ರೀ ಎ. ಲಕ್ಷ್ಮೀಸಾಗರ್.—ಈ ಬಗ್ಗೆ ನಾನು ಸಭೆಯ ಅಮೂಲ್ಯ ವೇಳೆಯನ್ನು ಹಾಳುಮಾಡು ವುದಕ್ಕೆ ಇಚ್ಛಿಪಡುವುದಿಲ್ಲ. ತಾವು ನಾನು ಹೇಳಿದ ಪದವನ್ನು ಪೂರ್ವಾಪರ ಯೋಚನೆ ಮಾಡದೇ ಕಡತ ದಿಂದ ತೆಗೆಯತಕ್ಕದ್ದು ಸರಿಯಲ್ಲವೆಂದು ತಮ್ಮಲ್ಲಿ ನಾನು ಹೇಳತಕ್ಕದ್ದು. ಇದರ ಮೇಲೆ ತಾವು ನಿರ್ಣಯ ವನ್ನು ಕೊಟ್ಟಿದ್ದೀರಿ. ಅದು ಜಾರಿಯಲ್ಲಿರಬೇಕು. ಇಷ್ಟನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ಸನ್ಮಾನಕ್ಕೆ ಹೋಗತಕ್ಕವರು ಮಾನ ಇಲ್ಲದವರು ಎಂದು ಒಂದು ಸ್ಟೇಟ್ ಮೆಂಟ್ ಮಾಡಿದರೆ ಅದು ಸರಿಹೋಗುತ್ತದೆಯೇ ?

SRI A. LAKSHMI SAGAR.—I only said that you were hasty in giving the decision. I am not questioning your ruling. This is happening for the second day in succession. ಮಾನ್ಯ ಗುಂಡೂರಾಯರ ರಾಜ್ಯ ಭಾರದ ಬಗ್ಗೆ ಇನ್ನೊಂದು ಮಾತನ್ನು ಹೇಳಿದರೆ ತಪ್ಪಾಗಲಾರದು. ಹಿಂದಿನ ಕಾಲದಲ್ಲಿ ತಾವು ಸತ್ತಮೇಲೆ ಶ್ರಾದ್ಧ ಮಾಡುವವರು ಯಾರು ಇಲ್ಲವೆಂದು ತಿಳಿದುಕೊಂಡು ಅವರು ಘಟಶ್ರಾದ್ಧ ಮಾಡಿಸಿಕೊಳ್ಳು ತ್ತಿದ್ದರು. ಬದುಕಿರುವಾಗಲೇ ಶ್ರಾದ್ಧ ಮಾಡಿಸಿಕೊಳ್ಳುವುದು. ಈ ರೀತಿಯ ಸನ್ಮಾನಗಳನ್ನು ಮಂತ್ರಿ ಮಂಡಲದಲ್ಲಿರುವವರು ಮಾಡಿಸಿಕೊಳ್ಳುತ್ತಿದ್ದಾರೆ. ಇದರಿಂದ ಸಾರ್ವಜನಿಕರ ಹಣ ನಷ್ಟವಾಗಿದೆ. ಇವರು ಸಾರ್ವಜನಿಕರ ಆಸ್ತಿಯನ್ನು ಉಪಯೋಗಿಸಿಕೊಂಡಿದ್ದಾರೆ. ಸಾರ್ವಜನಿಕ ವಾಹನಗಳನ್ನು ಉಪಯೋಗಿಸಿ ಕೊಂಡಿದ್ದಾರೆ. ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಂಡಿದ್ದಾರೆ. ತಮ್ಮ ಅಧಿಕಾರವನ್ನು ಉಪಯೋಗಿಸಿ ಕೊಂಡು ಅಧಿಕಾರ ಪ್ರಭಾವದಿಂದ ಹಣವನ್ನು ವಸೂಲು ಮಾಡಿದ್ದಾರೆ. ಇದು ಪ್ರೀತಿಯಿಂದ ಮಾಡಿರ ತಕ್ಕದ್ದಲ್ಲ. ಪ್ರೀತಿಯಿಂದ ಮಾಡಿರತಕ್ಕಂತಹ ಸನ್ಮಾನಗಳೂ ಇವೆ. ಆದರೆ ಇದರಲ್ಲಿ ಬಹುತೇಕವಾಗಿ ಅಧಿಕಾರ ಸ್ಥಾನದಲ್ಲಿರತಕ್ಕವರು, ಕ್ಯಾಬಿನೆಟ್ ದರ್ಜೆಯ ಮಂತ್ರಿಗಳಾಗಿರುವವರು.

ಒಬ್ಬ ಸದಸ್ಯರು.— ಪ್ರೀತಿಯಿಂದ ಸನ್ಮಾನ ಮಾಡಿದಂತಹ ಸ್ಥಳಕ್ಕೆ ಯಾರು ಯಾರು ಹೋಗಿದ್ದರು ಸ್ವಾಮಿ ?

ಶ್ರೀ ಎ. ಲಕ್ಷ್ಮೀಸಾಗರ್.—ಇದು ನಮ್ಮ ಸಂಸ್ಕೃತಿಗೆ ವಿರುದ್ಧವಾದುದು. ಹೇಯವಾದ ಅಭಿಪ್ರಾಯಗಳನ್ನು ತಂದಿದ್ದಾರೆಂದು ನಾನು ಹೇಳುತ್ತೇನೆ. ಮಾನ್ಯ ಗುಂಡೂರಾಯರ ಸರ್ಕಾರದ ಟೊಳ್ಳು ಘೋಷಣೆಗಳು ಅನೇಕವಿವೆ. ಅವುಗಳಲ್ಲಿ ನಾನು ಈಗ ಕೇವಲ ಎರಡರ ಬಗ್ಗೆ ಮಾತ್ರ ಪ್ರಸ್ತಾಪ ಮಾಡಲು ಇಷ್ಟಪಡುತ್ತೇನೆ. ಕಾಸರಗೋಡು ಕರ್ನಾಟಕಕ್ಕೆ ಸೇರಿಸುವ ವಿಚಾರದ ಬಗ್ಗೆ ಭಾಷಣ ಮಾಡಿದರು. ಮಣ್ಣಿನ ಮಕ್ಕಳಿಗೇ ಕೆಲಸ ಎನ್ನುವ ನೀತಿ ಬಗ್ಗೆ ಮಾತನಾಡಿದರು. ಒಂದು ವಾರದ ನಂತರ ಇವರು ಕೇರಳದಲ್ಲಿ ಭಾಷಣ ಮಾಡುವಾಗ ಶ್ರೀ ಸ್ಟೀಫನ್‌ರವರ ಸಮ್ಮುಖದಲ್ಲಿ ಮೇಲಿನ ಅಭಿಪ್ರಾಯಗಳಿಗೆ ತಿರುವುಕೊಟ್ಟು ತಿಲಾಂಜಲಿ ಹಚ್ಚುವ ರೀತಿಯಲ್ಲಿ ಮಾತನಾಡಿ ಬಂದರು. ಇದು "ಆರಂಭ ಶೂರಾ: ಖಲ ದಾಕ್ಷಿಣಾತ್ಯಾ :" ಎಂಬಂತೆ ಆಯಿತು. ಸನ್ಮಾನ ಸಮಾರಂಭಗಳಲ್ಲಿ ಹೇಳಿರುವ ಮಾತುಗಳ ವೈಖರಿ, ನೀಡಿರತಕ್ಕ ಭಾಷೆ ಮತ್ತು ಅವರ ವಾಚಾಮ ಗೋಚರವಾದ ಬೈಗುಳಗಳು ಪತ್ರಿಕೆಗಳಲ್ಲಿ ಅಚ್ಚಾಗಿವೆ. ಅವುಗಳನ್ನು ಇವರು ಕಡತಗಳಿಂದ ತೆಗೆಯುವುದಕ್ಕಾಗಲಿಲ್ಲ. ಇದೆಲ್ಲಾ ನಡೆದಿದೆ. ಇವರ ವೈಖರಿ ಬರೀ ಘೋಷಣೆಗಳಲ್ಲಿಯೇ ನಡೆದಿದೆ. ಇನ್ನೊಂದು ವಿಷಯ ಸ್ವಾಮಿ. ನಮ್ಮ ರಾಜ್ಯಪಾಲರು ತಮ್ಮ ಭಾಷಣ ದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದು ಬೆಲೆಗಳ ವಿಚಾರವಾಗಿ ಸೂಕ್ಷ್ಮವಾಗಿ ಹೇಳಿದ್ದಾರೆ. This is from the Governor's Address dated 23rd January, 1980. It reads as follows :

> "My Government have accorded the highest priority to bringing down the prices of essential commodities like food grains, sugar, vegetable oil and kerosene, which during the last few months, unfortunately, showed a sudden rise. They are also committed to seeing that essential commodities are available to people throughout the State, whether they live in cities, towns or villages."

ರಾಜ್ಯದಲ್ಲಿ ಇವರು ಬೆಲೆಗಳನ್ನು ನಿಯಂತ್ರಿಸಿಲ್ಲ. ಇವರು ಮೇಲೇರುತ್ತಿರತಕ್ಕಂತಹ ಬೆಲೆಗಳನ್ನು ತಡೆಯುವುದಕ್ಕೆ ಪ್ರಯತ್ನ ಪಟ್ಟಿಲ್ಲ. ಆಹಾರವಸ್ತುಗಳ ಬೆಲೆ ಮಧ್ಯಮಜನರ ಕೈಗೆ ನಿಲುಕದ ರೀತಿಯಲ್ಲಿ ಏರುತ್ತಾ ಇವೆ. ಇದನ್ನು ತಡೆಯುವುದಕ್ಕೆ ಪ್ರಯತ್ನ ಪಟ್ಟಿದ್ದಾರೆಯೇ ? ಮಾನ್ಯ ಗುಂಡೂರಾಯರು ಬೆಲೆ ಏರಿಕೆ ವಿಚಾರದಲ್ಲಿ ಒಂದು ಸಿದ್ಧೌಷಧವನ್ನು ಒದಗಿಸಿಕೊಟ್ಟಿದ್ದಾರೆ. ನಮ್ಮ ಮೈಸೂರ್ ಸ್ಟೇಟ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನವರು ಒಂದು ದೊಡ್ಡದಾಗಿ ಭಿತ್ತಿಪತ್ರವನ್ನು ಬರೆದು ತಗುಲಿ ಹಾಕಿದ್ದಾರೆ. ''ಪದಾರ್ಥಗಳ ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ನಿಮಗೆ ಒಂದು ಖುಷಿ ಖಬರ್ !! ಹಬ್ಬಗ ಬಂಪರ್ ಈ ಸಾರಿಯ ವಿಶೇಷ ಆಕರ್ಷಣೆ, ನಿಮ್ಮ ಅದೃಷ್ಟ ಪರೀಕ್ಷೆ ಇಂದೇ ನಡೆಯಲಿ : ಎಂದು ಆ ಭಿತ್ತಿಪತ್ರದಲ್ಲಿ ಇದೆ. ಇದು ಸಿದ್ಧೌಷಧಿ. ''ಸರ್ವರೋಗಾಲಿಕು ಸರಾಯಿ ಮಂದು'' ಎಂಬಂತೆ. ನಾನು ದುಡ್ಡು ಖರ್ಚು ಮಾಡಿ ಈ ಫೋಟೋವನ್ನು ತೆಗೆಸಿದೆ, ಇದನ್ನು ಜಾಹೀರಾತು ಮಾಡಲು ಪೇಪರ್‌ನವರಿಗೆ ಕೊಟ್ಟೆ. ಅವರು ಈ ಬೆಲೆ ಏರಿಕೆಯನ್ನು ತಡೆಗಟ್ಟಬೇಕಾದರೆ ಲಾಟರಿ ಟಿಕೆಟ್ ಅನ್ನು ತೆಗೆದುಕೊಳ್ಳಿ ಎಂದು ದೊಡ್ಡದಾಗಿ ಹೇಳಿದ್ದಾರೆ. ಇಷ್ಟೆ ಅಲ್ಲ ಮಾನ್ಯ ಗುಂಡೂರಾಯರು ಏನು ದೊಡ್ಡ ಭಾಷಣ ಮಾಡಿದ್ದಾರೆ ಅದರಲ್ಲಿ ಕೆಲವು ಭಾಷಣಗಳನ್ನು ಕಟಿಂಗ್ ಮಾಡಿ ನಾನು ತೆಗೆದುಕೊಂಡು ಬಂದಿದ್ದೇನೆ. ಅದರಲ್ಲಿ ಎಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಕೆಲವು ಮಾತ್ರ ಹೇಳುತ್ತೇನೆ. ಮೊದಲನೆಯದಾಗಿ, ಅವರು ಈ ಭ್ರಷ್ಟಾಚಾರಿ ಬಗ್ಗೆ ಏನು ಹೇಳಿದ್ದಾರೆ ಅದನ್ನು ಹೇಳುತ್ತೇನೆ. ೧೭–೧೦–೧೯೮೦ ರಂದು ಕನ್ನಡ ಪ್ರಭ ದಿನಪತ್ರಿಕೆಯಲ್ಲಿ ಇದರ ಬಗ್ಗೆ ಏನು ಬಂದಿದೆ ಅನ್ನುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ ಹೆಡ್ಡಿಂಗ್ಸ್ ಈ ರೀತಿ ಇದೆ :— ಸರ್ಕಾರದ ಭ್ರಷ್ಟಾಚಾರಿಗಳ ಚಿತ್ರ ತೆಗೆಯುವುದಾಗಿ ಮುಖ್ಯಮಂತ್ರಿ ಬೆದರಿಕೆ ಅಂತ ಇದೆ. ಮತ್ತೇನು ಹೇಳಿದ್ದಾರೆ ಎಂದರೆ, ಸರ್ಕಾರದ ಇಲಾಖೆಗಳಲ್ಲಿ ಹಣ ದುರುಪಯೋಗ ಮಾಡಿರುವವರನ್ನು ಕುರಿತು ಇನ್ನೆರಡು ತಿಂಗಳೊಳಗಾಗಿ (ಅವರನ್ನು ಕುರಿತು) ಚಲನಚಿತ್ರ ಹಾಗೂ ಪುಸ್ತಕಗಳನ್ನು ಪ್ರಕಟಿಸಲಾಗುವುದೆಂದು ಹೇಳಿದ್ದಾರೆ ''ಇದಕ್ಕಾಗಿ ೫೦ ಲಕ್ಷ ರೂಪಾಯಿಗಳಾದರೂ ಚಿಂತೆಯಿಲ್ಲ'' ಎಂದು ಹೇಳಿದ್ದಾರೆ. ಮತ್ತು ಮುಗ್ಧ ಜನತೆಯ ಹಣವನ್ನು ಲೂಟಿ ಮಾಡಿ ಮನೆ ಕಟ್ಟಿಸಿಕೊಂಡು ಕಾರಿನಲ್ಲಿ ಓಡಾಡುತ್ತಿರುವ ಜನರನ್ನು ನಾನು ಖಂಡಿತ ಬಿಡುವುದಿಲ್ಲ, ಇವರ ಬಣ್ಣ ರಾಷ್ಟ್ರಕ್ಕೇ ಗೊತ್ತಾಗಬೇಕು ಅವರ ಬಗ್ಗೆ ಮನೆ ಮನೆಗೆ ಕರಪತ್ರ ಹಂಚಿಸುತ್ತೇವೆ ಎಂದು ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳ ಭಾಷಣ ಆರೀತಿ ಇದೆ. ಈ ಬಗ್ಗೆ ನಾನು ತಮ್ಮನ್ನು ಕೇಳುವುದು ಇಷ್ಟೆ. ಇದುವರೆಗೆ ಎಷ್ಟು ಜನ ಬ್ಲಾಕ್ ಮಾರ್ಕೆಟೀರ್ಸನ್ನು ಹಿಡಿದು ಫೋಟೋ ತೆಗೆಸಿ ಅವರ ಬಗ್ಗೆ ಭಿತ್ತಿ ಪತ್ರಗಳನ್ನು, ಕರಪತ್ರಗಳನ್ನು ಹಂಚಿದ್ದೀರಿ ? ರಾಷ್ಟ್ರೀಯ ಭದ್ರತಾ ಕಾನೂನಿನ ಪ್ರಕಾರ ಇದುವರೆಗೆ ಎಷ್ಟು ಜನರನ್ನು ಹಿಡಿದು ಕಾರಾಗೃಹಕ್ಕೆ ಕಳುಹಿಸಿದ್ದೀರಿ ? ಎಲ್ಲೋ ಸಣ್ಣಪುಟ್ಟ ಮೀನು ಹಿಡಿಯುವವರನ್ನು ಹಿಡಿದಿದ್ದೀರೇ ವಿನಃ ನ್ಯಾಯವಾಗಿ ಈ ಬೆಲೆ ಏರಿಕೆಗೆ ಕಾರಣರಾದ ಸಮಾಜ ಘಾತುಕ ತಿಮಿಂಗಿಲಗಳನ್ನು ಎಷ್ಟು ಹಿಡಿದಿದ್ದೀರಿ ? ಈ ಬಗ್ಗೆ ಅವರನ್ನು ಹಿಡಿಯುವುದಕ್ಕೆ ಅಧಿಕಾರ ಬೇಕು ಎಂದು ತೆಗೆದುಕೊಂಡರಲ್ಲಾ ಇದುವರೆಗೆ ಎಷ್ಟು ಜನರನ್ನು ಹಿಡಿದು, ಅವರ ಮೇಲೆ ಏನೇನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಅನ್ನುವುದನ್ನು ಹೇಳುತ್ತೀರಾ? ತಾವು ಮಾಡಿಕೊಂಡಂಥಾ ಕಾನೂನಿಂದ ಏನಾದರೂ ಈ ಬೆಲೆಗಳು ಹತೋಟಿಗೆ ಬಂದಿದೆಯೋ ಅನ್ನುವುದನ್ನು ನಾನು ಈ ಸಂದರ್ಭದಲ್ಲಿ ತಮ್ಮನ್ನು ಪ್ರಶ್ನೆ ಮಾಡುತ್ತೇನೆ.

ಅಧ್ಯಕ್ಷರು.—ತಮಗೆ ಮಾತನಾಡಲು ಇನ್ನು ಎಷ್ಟು ಕಾಲಾವಕಾಶ ಬೇಕು ?

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಭಾಷಣ ಶುರು ಮಾಡಿದ್ದೇ ೪ ಗಂಟೆಗೆ ನಾನು, ಈ ಬಗ್ಗೆ ಎಲ್ಲ ವಿಷಯವನ್ನೂ ಕೂಡ ಸಂಗ್ರಹ ಮಾಡಿಕೊಂಡು ಬಂದಿದ್ದೇನೆ, ಅಭ್ಯಾಸ ಮಾಡಿಕೊಂಡು ಬಂದಿದ್ದೇನೆ, ಬರೆದುಕೊಂಡು ಬಂದಿದ್ದೇನೆ, ಹೆಚ್ಚು ಕಾಲಾವಕಾಶ ತೆಗೆದುಕೊಳ್ಳದೇ ಆದಷ್ಟು ಬೇಗ ಮುಗಿಸುತ್ತೇನೆ.

ಅಧ್ಯಕ್ಷರು.—ಆದಷ್ಟು ಬೇಗನೆ ಮುಗಿಸಿ.

ಶ್ರೀ ಎ. ಲಕ್ಷ್ಮೀಸಾಗರ್.—ಇನ್ನು ಭೂ ನ್ಯಾಯ ಮಂಡಳಿಗಳ ಪುನರ್ರಚನೆ ವಿಷಯ. ಹಿಂದೆ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ದೇವರಾಜ ಅರಸ್‌ರವರು ಒಂದು ಎಕ್ಸರ್‌ಸೈಜ್ ಮಾಡಿದರು. ಈಗ ಮುಖ್ಯ ಮಂತ್ರಿಗಳಾಗಿರುವ ಗುಂಡೂರಾಯರು ಪ್ರಾಮಾಣಿಕವಾಗಿ ಮಾಡುತ್ತೇನೆಂದು ಹೇಳಿ ೧೬ ಜಿಲ್ಲೆಗಳಲ್ಲಿ ಭೂನ್ಯಾಯ ಮಂಡಲಿಗಳನ್ನು ಪುನರ್ರಚನೆ ಮಾಡಿದರು, ಇದಕ್ಕೆ ೬ ತಿಂಗಳು ವಿಳಂಬವಾಯಿತು. ಇನ್ನು ಉಳಿದ ೪ ಜಿಲ್ಲೆಗಳಲ್ಲಿ ಭೂನ್ಯಾಯ ಮಂಡಳಿಗಳನ್ನು ಪುನರ್ರಚನೆ ಮಾಡುವುದಕೆ

೯ ತಿಂಗಳು ವಿಳಂಬವಾಗಿದೆ. ಇದನ್ನು ಪುನರ್ರಚನೆ ಮಾಡುವುದಕ್ಕೆ ಒಂದು ವರ್ಷ ಹಿಡಿಯಿತು. ಭೂ ನ್ಯಾಯ ಮಂಡಳಿಗಳಿಗೆ ಸದಸ್ಯರನ್ನು ಆರಿಸುವ ವಿಚಾರದಲ್ಲಿ ಶ್ರೀಮಾನ್ ಬಂಗಾರಪ್ಪನವರಿಗೂ ಮತ್ತು ಶ್ರೀಮಾನ್ ಗುಂಡೂರಾಯರಿಗೂ ಸ್ವಲ್ಪ ಭೇದ ಬಂತು. ನಂತರ ಈ ವಿಷಯದಲ್ಲಿ ಶ್ರೀಮಾನ್ ಬಂಗಾರಪ್ಪನವರಿಗೂ ಮತ್ತು ಮುಖ್ಯಮಂತ್ರಿಗಳಿಗೂ ವಿರಸವಾಯಿತು. ಅವರ ರಾಜೀನಾಮೆಗೆ ಇದು ಒಂದು ಕಾರಣವಾಯಿತು ಎಂದು ಹೇಳಿದ್ದಾರೆ. ಇದರಲ್ಲಿ ಸಮಾಜ ದ್ರೋಹಿ ಶಕ್ತಿಗಳು ಸೇರಿಕೊಂಡಿದ್ದಾರೆ, ಈ ಭೂಹಿಡುವಳಿಯನ್ನು ತಿಳಿಯದೇ ಇರತಕ್ಕಂಥಾ ಜನರು ಇಲ್ಲಿ ಇದ್ದಾರೆ ಇದರಲ್ಲಿ ಚೆನ್ನಾಗಿ ಅನುಭವ ಇರತಕ್ಕಂಥಾ, ಚೆನ್ನಾಗಿ ತಿಳಿದಿರತಕ್ಕಂಥಾ ಜನರು ಸೇರಿಲ್ಲ, ಅವರಿಗೆ ಇದರಲ್ಲಿ ಅವಕಾಶ ಕೊಟ್ಟಿಲ್ಲಾ, ನನ್ನ ಮಾತಿಗೆ ಅವರು ಗೌರವ ಕೊಟ್ಟಿಲ್ಲಾ ಎಂದು ಹೇಳಿದ್ದಾರೆ. ಈ ಭೂನ್ಯಾಯ ಮಂಡಳಿಗಳ ಪುನರ್ರಚನೆಗೆ ಏತಕ್ಕೆ ಇಷ್ಟು ವಿಳಂಬವಾಯಿತು, ಇದರಲ್ಲಿ ನಿಜವಾದ ಆಸಕ್ತಿ ಏನು ಇದೆ ಅನ್ನುವುದನ್ನು ತಿಳಿಯಬೇಕಾಗುತ್ತದೆ. ನಿಮ್ಮ ಅಭಿಪ್ರಾಯದಲ್ಲಿ ನಾನು ಹೇಳಬೇಕಾದರೆ, ಆದಷ್ಟು ಪ್ರಯತ್ನ ಮಾಡಿ ಇದನ್ನು ವಿಳಂಬ ಮಾಡಿ, ಮುಂದಿನ ಚುನಾವಣೆಯ ಹೊತ್ತಿಗೆ ಇದನ್ನು ಬಳಸಿಕೊಳ್ಳೋಣ ಅಂತ ಮಾಡಿದಿರಿ ಎಂದು ಹೇಳಬೇಕಾಗುತ್ತದೆ.

ಇನ್ನು ಭೂ ವಿತರಣಾ ಮಂಡಳಿಗಳ (ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಕಮಿಟಿ) ಬಗ್ಗೆ ಹೇಳಬೇಕಾದರೆ, ಒಂದು ವರ್ಷವಾದರೂ ಕೂಡ ಇವು ಇನ್ನೂ ಪುನರ್ರಚನೆಯಾಗಿಲ್ಲ. ಹರಿಜನ–ಗಿರಿಜನರಿಗೆ ಜಮೀನು ಕೊಡಬೇಕು ಹಿಂದುಳಿದ ವರ್ಗದವರಿಗೆ ಜಮೀನು ಕೊಡಬೇಕು ಎಂದು ಪದೇ ಪದೇ ಘೋಷಣೆಗಳನ್ನು ಮಾಡುತ್ತಿದ್ದೀರಿ. ನಮಗೂ ಕೂಡ ಕೇಳಿ ಕೇಳಿ ಸಾಕಾಗಿದೆ. ಒಂದು ವರ್ಷವಾದರೂ ಕೂಡ ಇದನ್ನು ಪುನರ್ರಚನೆ ಮಾಡಿಲ್ಲಾ ಏತಕ್ಕೆ ? ಈ ಬಗ್ಗೆ ಸರ್ಕಾರದ ಉದ್ದೇಶ ಏನು ? ಫಾರೆಸ್ಟ್‌ನಲ್ಲಿ ಮರ ಕಡಿಯುವವರನ್ನು ಎಷ್ಟು ಜನರನ್ನು ಹಿಡಿದಿದ್ದೀರಿ ? ಎಷ್ಟು ಜನ ಸಮಾಜ ದ್ರೋಹಿಗಳನ್ನು ಹಿಡಿದಿದ್ದೀರಿ ? ಅವರು ನಿಮ್ಮ ಪಕ್ಷದಲ್ಲಿ ಇದ್ದರೂ ಕೂಡ ಅವರು ನಿಮಗೆ ಬೆಂಬಲ ಕೊಡುತ್ತಾರೆಂದು ಅಂಥಾವರನ್ನು ನೆಪಮಾತ್ರಕ್ಕೆ ಹಿಡಿದು ಹಿಂಬಾಗಿಲ ಬಾಗಿಲಿನಿಂದ ಬಿಟ್ಟು ಬಿಡುತ್ತೀರಿ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಎಮರ್ಜೆನ್ಸಿ ಟೈಂನಲ್ಲಿ ಈ ರೀತಿಯಾಗಿಯೇ ನಡೆದಿದೆ, ನನಗೆ ಚೆನ್ನಾಗಿ ಗೊತ್ತು. ಆ ಸಮಾಜ ದ್ರೋಹಿಗಳನ್ನು, ಆ ಕಳ್ಳಕಾಕರನ್ನು ಹಿಡಿದುಕೊಂಡು ಹೋಗಿ ಸೆಂಟ್ರಲ್ ಜೈಲಿನಲ್ಲಿ ಹಾಕಿದಿರಿ. ನಂತರ ಅದರ ಪರಿಣಾಮ ಏನಾಯಿತು ಎಂದರೆ, ನಿಮ್ಮ ವ್ಯಾಪಾರ ಸ್ವಲ್ಪ ಕುದುರಿತು, ಆಗ ಕಾಫಿಪೋಸಾದ ಪ್ರಕಾರ ಅವರನ್ನೆಲ್ಲಾ ಸೆಂಟ್ರಲ್ ಜೈಲ್‌ನಿಂದ ಬಿಟ್ಟು ಬಿಟ್ಟಿರಿ, ಇದು ನನಗೆ ಚೆನ್ನಾಗಿ ಗೊತ್ತು. ಇನ್ನು ಭ್ರಷ್ಟಾಚಾರಿಗಳ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಒಂದು ಯುದ್ಧ ಘೋಷಣೆ ಮಾಡಿದ್ದಾರೆ. ಆ ಪ್ರಕಾರ ಎಷ್ಟು ಜನ ಸಮಾಜ ದ್ರೋಹಿಗಳ ಫೋಟೋವನ್ನು ತೆಗೆಸಿ ಜಾಹೀರಾತು ಮಾಡಿದ್ದೀರಾ ? ಅವರ ಮೇಲೆ ಕೈಗೊಂಡಿರುವ ಕ್ರಮಗಳೇನು ? ಅವರ ಫೋಟೋಗಳನ್ನು ಎಷ್ಟು ಊರುಗಳಲ್ಲಿ ಹಂಚಿದ್ದೀರಾ ? ನಿಮ್ಮ ಒಂದು ವರ್ಷದ ಅವಧಿಯಲ್ಲಿ ಎಷ್ಟು ಜನರ ಫೋಟೋವನ್ನು ತೆಗೆಸಿ, ಎಷ್ಟು ಊರುಗಳಲ್ಲಿ ಹಂಚಿದ್ದೀರಾ ? ಯಾವುದನ್ನು ಘೋಷಣೆ ಮಾಡಬೇಕಾದರೂ ಒಂದು ಅರ್ಥ ಬೇಡವೇ, ಅಂಥಾ ಪೊಳ್ಳು ಘೋಷಣೆಗಳನ್ನು ಏತಕ್ಕೆ ಮಾಡಬೇಕಾಗಿತ್ತು ? ಏತಕ್ಕೆ ಇಂತಹ ಭಾಷಣಗಳನ್ನು ಮಾಡಬೇಕಾಗಿತ್ತು ? ಇಂಥಾ ಸಮಾಜ ದ್ರೋಹಿಗಳಾದಂಥ ಅನೇಕ ನಾಯಕರು ನಿಮ್ಮ ಪಕ್ಷಕ್ಕೆ ಬೆಂಬಲ ಕೊಡುತ್ತಾರೆ ಅಂತ ನೀವು ಅವರ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡಿಲ್ಲವೇ ? ಬೇಕಾದರೆ ತಾವೇ ನೋಡಿ. ಪ್ರತಿ ದಿವಸ ಸಾಯಂಕಾಲ ಅವರುಗಳು ನಿಮ್ಮ ಸನ್ಮಾನ ಸಮಾರಂಭಗಳಲ್ಲಿ ಪ್ರತಿಷ್ಠಿತ ಆಹ್ವಾನಿತರಾಗಿ ಬಂದು ಕೂತುಕೊಂಡಿರುತ್ತಾರೆ, ಈ ಬಗ್ಗೆ ಏನಾದರೂ ಒಂದು ಸಿನಿಮಾ ತೆಗೆದಿದ್ದಾರೆಯೇ ಅಥವಾ ಪಬ್ಲಿಷ್ ಮಾಡಿದ್ದಾರೆಯೇ ? ಅವರುಗಳು ನಿಮ್ಮ ಜೊತೆಯಲ್ಲಿ ಬಂದು ಕೂತುಕೊಳ್ಳುವುದರಿಂದ ನೀವು ಅವರುಗಳ ಫೋಟೋವನ್ನು ತೆಗೆಸಿಲ್ಲಾ ಎಂದು ನನ್ನ ಭಾವನೆ.

ಶ್ರೀ ಜೆ.ಹೆಚ್. ಪಟೇಲ್.—ಮಾನ್ಯ ಸದಸ್ಯರು ಹೇಳುವ ಮಾತನ್ನು ನಾನು ಒಪ್ಪುವುದಿಲ್ಲ. ಅವರು ಫೋಟೋ ಪಬ್ಲಿಷ್ ಮಾಡಿಲ್ಲಾ ಎಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಫೋಟೋವನ್ನು ಪಬ್ಲಿಷ್ ಮಾಡಿದ್ದಾರೆ. ಸನ್ಮಾನ ಸಮಾರಂಭಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ಫೋಟೋವನ್ನು ಬಿಟ್ಟರೆ ಉಳಿದವರ ಫೋಟೋವೆಲ್ಲಾ ಬಂದಿದೆ, ನಾನು ನೋಡಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ತಮ್ಮ ವಾದವನ್ನು ನಾನು ಪುಷ್ಟೀಕರಿಸುತ್ತೇನೆ. ಮೊದಲು ನಮ್ಮ ಮನೆ ಸ್ವಚ್ಛವಾಗಿರಬೇಕಲ್ಲಾ. ಅದು ಇರಲಿ. ನೀವು ಇದರಲ್ಲಿ ಇನ್ನೊಂದು ಮಾತು ಹೇಳಿದ್ದೀರಿ. ನಾವು ದೇಶಕ್ಕೆ ಸ್ವಚ್ಛ ಆಡಳಿತವನ್ನು ಕೊಡುತ್ತೇವೆಂದು. ನಿಮ್ಮ ಮಂತ್ರಿಮಂಡಲದಲ್ಲಿ ಭ್ರಷ್ಟಾಚಾರಕ್ಕೆ ಒಳಗಾಗಿರುವ ೪ ಜನ ಮಂತ್ರಿಗಳು ಏನು ಇದ್ದಾರೆ, ಅವರ ಮೇಲೆ ಏನು ಆಪಾದನೆ ಇದೆ ಆ ಬಗ್ಗೆ ಏನು ಕಾರ್ಯಕ್ರಮ ಕೈಗೊಂಡಿದ್ದೀರಾ ? ೩೦ ಫ್ಲೋರ್ ಮಿಲ್‌ಗಳಿಗೆ ಲೈಸೆನ್ಸ್ ಕೊಡುವುದಕ್ಕೆ ರಾತ್ರೋ ರಾತ್ರಿ ಅದರ ವ್ಯವಹಾರ ನಡೆಯುವುದಕ್ಕೆ ಒಂದು ಫೈಲು ಇದ್ದುದು ಎರಡು ಫೈಲ್ ಆಯಿತಲ್ಲಾ, ಈ ಬಗ್ಗೆ ತನಿಖೆ ಮಾಡಬೇಕು ಎಂದು ಈ ಮನೆಯಲ್ಲಿ ಚರ್ಚೆಗೆ ಬಂದಾಗ ತನಿಖೆ ಮಾಡಿಸುತ್ತೇವೆ ಅಂತ ಹೇಳಿದರಲ್ಲಾ, ಆ ರೀತಿ ತನಿಖೆ ಮಾಡಿಸುವುದಕ್ಕೆ ಇನ್ನೂ ಎಷ್ಟು ದಿವಸ ತಮಗೆ ಬೇಕಾಗುತ್ತದೆ ಹೇಳಿ ? ಈ ಭ್ರಷ್ಟಾಚಾರಕ್ಕೆ ಒಳಗಾಗಿರುವ ಒಬ್ಬ ಮಂತ್ರಿಯನ್ನು ಕ್ಯಾಬಿನೆಟ್ ಮಂತ್ರಿಗಳ ಮಟ್ಟಕ್ಕೆ ಏರಿಸಿದ್ದೀರಿ. ಬೇರೆಯವರ ಮೇಲೆ ಕ್ರಮ ತೆಗೆದುಕೊಂಡಿದ್ದೀರಾ ? ಈ ಬಗ್ಗೆ ಸಿ.ಒ.ಡಿ. ರಿಕಾರ್ಡ್ ಏನಾಯಿತು ? ಸಿ.ಐ.ಡಿ. ರಿಪೋರ್ಟ್ ಏನಾಯಿತು ? ನೀವು ಈ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳುವುದಿಲ್ಲ ಎನ್ನುವುದು ನನಗೆ ಗೊತ್ತಿದೆ. ಏತಕ್ಕೆಂದರೆ, ನಿಮ್ಮ ಮಂತ್ರಿಗಳ ಮೇಲೆ ನೀವು ಕ್ರಮ ತೆಗೆದುಕೊಳ್ಳುವುದಕ್ಕೆ ಹೆದರಿಕೆ, ಆದುದರಿಂದ ನೀವು ಮಾಡುವುದಿಲ್ಲ. ಹೀಗಿರಬೇಕಾದರೆ, ಇನ್ನು ರಾಷ್ಟ್ರಕ್ಕೆ, ರಾಜ್ಯಕ್ಕೆ ಸ್ವಚ್ಛ ಮತ್ತು ದಕ್ಷ ಆಡಳಿತ ಒದಗಿಸಬೇಕಾದರೆ ಸರ್ಕಾರ ಎಲ್ಲಿದೆ ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ. ನಿಮ್ಮ ಮಂತ್ರಿಮಂಡಲದಲ್ಲೇ ಸರಿಯಾದವರಿಲ್ಲ. ಭ್ರಷ್ಟಾಚಾರಕ್ಕೆ ಒಳಗಾಗಿರುವ ಮಂತ್ರಿಗಳು ಏನು ಇದ್ದಾರೆ, ಮಂತ್ರಿ ಮಹೋದಯರು ಏನು ಇದ್ದಾರೆ ಅವರ ಮೇಲೆ ನೀವು ಘೋಷಿಸಿದ ಹಾಗೆ ಕ್ರಮ ತೆಗೆದುಕೊಳ್ಳದೇ ಹೋಗಿರುವ ಸರ್ಕಾರ ಇನ್ನು ರಾಷ್ಟ್ರಕ್ಕೆ, ರಾಜ್ಯಕ್ಕೆ ಹೇಗೆ ಸ್ವಚ್ಛ ಹಾಗೂ ದಕ್ಷ ಆಡಳಿತವನ್ನು ಕೊಡುವುದಕ್ಕಾಗುತ್ತದೆ ಎಂದು ನಾನು ಪ್ರಶ್ನೆ ಮಾಡುತ್ತೇನೆ.

ಇನ್ನು ಹಿಂದುಳಿದ ವರ್ಗಗಳ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗಳ ಬಗ್ಗೆ ಅವರ ಹಿತಾಸಕ್ತಿಗಳಿಗೆ ಧಕ್ಕೆ ಬಾರದಂತೆ ಕೆಲಸ ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಹಿಂದುಳಿದ ವರ್ಗದವರ, ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರ ಒಂದು ಮೀಸಲಾತಿ ಬಗ್ಗೆ ಹಿಂದೆ ಏನು ಒಂದು ರೋಸ್ಟರ್ ಇತ್ತೋ ಅದನ್ನು ಶ್ರೀಮಾನ್ ಗುಂಡೂರಾಯರ ಸರ್ಕಾರ ಬಂದಮೇಲೆ ಬದಲಾಯಿಸಿದರು ೧೯೭೯ರ ರೋಸ್ಟರ್ ಪದ್ಧತಿಯನ್ನು ಬದಲಾಯಿಸಿದರು ಲೋಕಸೇವಾ ಆಯೋಗದವರು ತಯಾರಿಸಿದಂತಹ ೧೬೦ ಜನರ ಹೆಸರನ್ನು ಈ ರೋಸ್ಟರ್ ಬದಲಾವಣೆ ಮಾಡಿದ್ದರಿಂದ ಅದನ್ನು ವಾಪಸ್ ತೆಗೆದುಕೊಂಡರು. ಆದ್ಯತೆ ಪ್ರಕಾರ ಕಾದಿರಿಸಿದ ಈ ಸರ್ಕಾರೀ ಹುದ್ದೆಗಳಿಗೆ ಅವರಿಗೆ ಅನ್ಯಾಯವಾಗಲಿಲ್ಲವೇ ? ಇನ್ನೂವರೆಗೂ ಅವರಿಗೆ ಆ ಜಾಗಗಳು ಸಿಕ್ಕೇ ಇಲ್ಲ. ಈಗ ಇದನ್ನು ಪುನರ್‌ಪರಿಶೀಲನೆ ಮಾಡುವುದಕ್ಕೆ ಮತ್ತೊಂದು ಕಮಿಟಿ ಮಾಡಿದ್ದೇವೆ ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿದ್ದೀರಿ. ಇದನ್ನು ಯಾವಾಗ ಮಾಡುವುದು ? ಒಟ್ಟಿನಲ್ಲಿ ಅವರಿಗೆ ಬರುವಂಥಾ ಛಾನ್ಸ್ ಹೋಯಿತಲ್ಲಾ. ಹಿಂದುಳಿದ ವರ್ಗದವರಿಗೆ, ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಏನು ಒಂದು ಸ್ಥಾನಮಾನ ದೊರೆಯಬೇಕಾಗಿತ್ತೋ ಅದು ಇನ್ನೂವರೆಗೂ ದೊರಕಿಲ್ಲ, ಅನ್ಯಾಯವಾಗಿದೆ ಎಂದು ಈ ಸಮಯದಲ್ಲಿ ಆಪಾದನೆ ಮಾಡಬೇಕಾಗಿದೆ.

ಇನ್ನು ಜಿಲ್ಲಾ ಮಟ್ಟದ ನೇಮಕ ಸಮಿತಿಗಳನ್ನು ರದ್ದುಮಾಡಿದ್ದೀರಿ ? ಲಂಚ ತೆಗೆದುಕೊಳ್ಳುತ್ತಾರೆ ಎಂಬ ಉದ್ದೇಶದಿಂದ ಸಮಿತಿಗಳನ್ನು ರದ್ದುಮಾಡಿದ್ದೀರಿ. ಲಂಚವನ್ನು ಯಾರು ತೆಗೆದುಕೊಳ್ಳುವುದಿಲ್ಲ. ಲಂಚ ತೆಗೆದುಕೊಳ್ಳುವವರ ಮೇಲೆ ಕ್ರಮ ತೆಗೆದುಕೊಂಡು ಸಮಿತಿಗಳನ್ನು ಮುಂದುವರಿಸಿಕೊಂಡು ಹೋಗಬಹುದಾಗಿತ್ತು. ಜಿಲ್ಲಾಮಟ್ಟದ ಸಮಿತಿಗಳಲ್ಲಿ ಸದಸ್ಯರುಗಳು ಯಾರು ಇದ್ದಾರೆ ? ನಿಮ್ಮ ಪಕ್ಷದವರೇ ಇದ್ದಾರೆ. ಅಲ್ಲೋ ಇಲ್ಲೋ ಒಬ್ಬರನ್ನು ನಮ್ಮ ಪಕ್ಷದವರನ್ನು ಒಗ್ಗರಣೆಗೆ ಹಾಕಿದ ಹಾಗೆ ಹಾಕಿದ್ದೀರಿ. ಟಿ.ಸಿ.ಎಚ್. ಪಾಸ್ ಮಾಡಿರುವವರನ್ನು ಯಾತಕ್ಕೆ ಇಂಟರ್‌ವ್ಯೂ ಮಾಡುತ್ತೀರಿ ? ಅಂತಹವರನ್ನು ನೇರವಾಗಿ ಉಪಾಧ್ಯಾಯರ ಕೆಲಸಕ್ಕೆ ಯಾಕೆ ನೇಮಕ ಮಾಡಬಾರದು. ಡಿ.ಎಲ್. ಆರ್.ಸಿ. ಏಕೆ ಬೇಕು ? ಅವರನ್ನು ಇಂಟರ್‌ವ್ಯೂ ಕರೆದು ಏನು ಪರಿಶೀಲನೆ ಮಾಡುತ್ತೀರಿ ? ಇನ್ನು ಸರ್ಕಾರಿ ಕೆಲಸಗಳಲ್ಲಿ ಹರಿಜನ ಗಿರಿಜನರಿಗೆ ಮತ್ತು ಹಿಂದುಳಿದ ವರ್ಗದವರಿಗೆ ಅನ್ಯಾಯವಾಗಿದೆ ಅನ್ನತಕ್ಕಂತಹದ್ದನ್ನು ನಾನು ಹೇಳುತ್ತೇನೆ. ಮಂಡಲಿಗಳು ಮತ್ತು ನಿಗಮಗಳನ್ನು ರದ್ದುಮಾಡಿದ್ದೀರಿ. ಈ ವಿಷಯವನ್ನು ಕಳೆದ ಸದನದಲ್ಲಿ ದೊಡ್ಡದಾಗಿ ಹೇಳಿದ್ದೀರಿ. ಇದರ ಬಗ್ಗೆ ವರದಿಯನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಯವರನ್ನು ಕೇಳಿದ್ದೇವೆ, ವರದಿ ಬಂದನಂತರ ಸರಿಯಾದ ಕ್ರಮವನ್ನು ತೆಗೆದು

ಕೊಳ್ಳುತ್ತೇವೆ ಎಂದು ಹೇಳಿದ್ದೀರಿ. ವರದಿ ಬಂದ ವಿಷಯವೇ ಗೊತ್ತಿಲ್ಲ. ಏನು ಕ್ರಮವನ್ನು ತೆಗೆದು ಕೊಂಡಿದ್ದೀರೋ ಅದು ಗೊತ್ತಿಲ್ಲ. ಒಬ್ಬ ಸರ್ಕಾರಿ ಅಧಿಕಾರಿ ಮೂರು ನಾಲ್ಕು ನಿಗಮ ಮತ್ತು ಮಂಡಲಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ನಿಗಮಗಳಲ್ಲಿ ಮಂಡಲಿಗಳಲ್ಲಿ ಹರಿಜನ-ಗಿರಿಜನರ ಮತ್ತು ಹಿಂದುಳಿದ ವರ್ಗದವರ ವಿಶಾಸಲಾತಿ ನೇಮಕಾತಿಗಳ ಅನುಕೂಲಗಳು ಹೊರಟುಹೋಗಿವೆಯೆಂದು ನನಗೆ ತಿಳಿದು ಬಂದಿದೆ. ಇದರಿಂದ ಅನೇಕ ತೊಂದರೆಗಳಾಗಿವೆ. ಅಧಿಕಾರಶಾಹಿ ನಿಗಮಗಳಲ್ಲಿ ಮತ್ತು ಮಂಡಲಿಗಳಲ್ಲಿ ತಾಂಡವವಾಡುತ್ತಿದೆ. ಸ್ವಾಮಿ, ಸರ್ಕಾರದವರು ಪದೇ ಪದೇ ಹೇಳುತ್ತಾ ಬಂದಿದ್ದಾರೆ ನೀರಾವರಿ ಮತ್ತು ಜಲವಿದ್ಯುತ್ ಯೋಜನೆಗಳಲ್ಲಿ ಸರ್ಕಾರ ಯಾವರೀತಿ ಖರ್ಚು ಮಾಡುತ್ತಾ ಬಂದಿದೆ ಎಂಬುದನ್ನು ಹೇಳಿದ್ದಾರೆ. ಹಿಂದಿನ ಸರ್ಕಾರದವರು ಇದೇರೀತಿ ಹೇಳಿದ್ದರು. ಈ ಸರ್ಕಾರ ಇದೇ ಮಾತನ್ನು ಹೇಳಿದೆ. ಆದರೆ ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಅನೇಕ ವಿವರಗಳನ್ನು ಹೇಳಿದ್ದಾರೆ. ಕೃಷ್ಣಾ ಮೇಲ್ದಂಡೆ ಯೋಜನೆಗೆ ೧೯೮೦-೮೧ಕ್ಕೆ ಸುಮಾರು ೪೪ ಕೋಟಿ ರೂಪಾಯಿಗಳು ಖರ್ಚಾಗಬೇಕಾಗಿತ್ತು. ಆದರೆ ೨೨ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಮಿಕ್ಕ ಹಣವನ್ನು ಏತಕ್ಕೆ ಖರ್ಚು ಮಾಡಲಿಲ್ಲ. ಇನ್ನು ಬರಗಾಲ ಪ್ರದೇಶದ ವಿಚಾರ, ಬರಗಾಲ ಪೀಡಿತ ಪ್ರದೇಶಗಳಲ್ಲಿ ಜನಗಳು ಕೆಲಸವಿಲ್ಲದೆ ವಲಸೆ ಹೋಗುತ್ತಿದ್ದಾರೆ. ಅಂತಹ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಕಾಮಗಾರಿ ಕೆಲಸಗಳನ್ನು ಕೈಗೊಂಡು ಹಣವನ್ನು ಖರ್ಚು ಮಾಡತಕ್ಕಂತಹ ಒಂದು ಸೌಜನ್ಯತೆ, ಯೋಗ್ಯತೆ ಈ ಸರ್ಕಾರಕ್ಕೆ ಇಲ್ಲ. ಹಣವಿದ್ದರೂ ಸಹ ಏತಕ್ಕೆ ಖರ್ಚು ಮಾಡಿಲ್ಲ. ಕಾಳೀ ನದಿ ವಿದ್ಯುತ್ ಯೋಜನೆ ಕೆಲಸ ಸ್ಥಗಿತಗೊಂಡಿದೆ. ಬಡ್ಜೆಟ್‌ನಲ್ಲಿ ಹಣವನ್ನು ತೆಗೆದಿಟ್ಟಿರುತ್ತೀರಿ, ಆ ಹಣವನ್ನು ೧೨ ತಿಂಗಳುಗಳಲ್ಲಿ ಖರ್ಚು ಮಾಡುವುದಕ್ಕಾಗುತ್ತದೆಯೋ ಇಲ್ಲವೋ ಎಂಬುದನ್ನು ಯೋಚನೆ ಮಾಡುವುದಿಲ್ಲ. ೧೨ ತಿಂಗಳುಗಳಲ್ಲಿ ಇಟ್ಟ ಹಣವನ್ನು ಖರ್ಚು ಮಾಡಲಿಕ್ಕೆ ಯೋಗ್ಯತೆ ಇಲ್ಲದಿದ್ದರೆ ಯಾತಕ್ಕೋಸ್ಕರ ಈ ರೀತಿ ಟೊಳ್ಳು ಆಶ್ವಾಸನೆಗಳನ್ನು ಈ ಸಭೆಗೆ ಮತ್ತು ಜನಗಳಿಗೆ ನೀಡುತ್ತೀರಿ ? ಹಳ್ಳಿಗಳಲ್ಲಿ ಕುಡಿಯುವ ನೀರಿನ ಯೋಜನೆಯ ಬಗ್ಗೆ ನಮ್ಮ ಹಣಕಾಸಿನ ಮಂತ್ರಿಗಳಾದ ಶ್ರೀ ವೀರಪ್ಪ ಮೊಯಿಲಿಯವರು ದೊಡ್ಡ ಭಾಷಣ ಮಾಡಿದರು. ಹಳ್ಳಿಗಳಲ್ಲಿ ಕುಡಿಯುವ ನೀರಿನ ಯೋಜನೆಯ ಬಗ್ಗೆ ಹೊಸ ಸರ್ಕಾರ ಪ್ರಾಮುಖ್ಯತೆ ಕೊಡುತ್ತದೆಂದು ಹೇಳಿದ್ದಾರೆ. ಸುಮಾರು ೧೯೯೬ ಹಳ್ಳಿಗಳಲ್ಲಿ ಬಾವಿಗಳು ಇಲ್ಲದೆ ಇರುವುದರಿಂದ ಈ ಹಳ್ಳಿಗಳಿಗೆ ಆದ್ಯತೆಯ ಮೇಲೆ ಬಾವಿಗಳನ್ನು ತೋಡಿಸಬೇಕಾಗಿದೆ. ಎಷ್ಟೋ ಹಳ್ಳಿಗಳಲ್ಲಿ ಇವತ್ತು ಕುಡಿಯುವ ನೀರಿನ ಬಾವಿಗಳೇ ಇಲ್ಲ. ಈ ವರ್ಷದ ರಾಜ್ಯಪಾಲರ ಭಾಷಣದಲ್ಲಿ ಇದರ ಬಗ್ಗೆ ಎಲ್ಲೂ ಪ್ರಸ್ತಾಪವಿಲ್ಲ. ಯಾತಕ್ಕೋಸ್ಕರ ಈ ರೀತಿ ಜಂಬ ಕೊಚ್ಚಿಕೊಳ್ಳುತ್ತೀರಿ ? ಬಡಾಯಿ ಕೊಚ್ಚಿಕೊಳ್ಳುತ್ತೀರಿ ? ನಿಮ್ಮ ಕೈಯಲ್ಲಿ ಆಗುವುದಿಲ್ಲ. ನೀವು ಯಾರಾದರೂ ಈ ರೀತಿಯ ಕೆಲಸಕಾರ್ಯಗಳನ್ನು ಮಾಡಿದ್ದರೆ ನನಗೆ ಲೆಕ್ಕ ಕೊಡಿ. ೧೯೯೬ ಹಳ್ಳಿಗಳಿಗೆ ಕೊಟ್ಟಿದ್ದೇವೆಂದು ಈ ಸಲ ವರದಿಯಲ್ಲಿ ಹೇಳಿದ್ದೀರಿ.

ಇನ್ನು ಶಿಕ್ಷಣದ ಬಗ್ಗೆ ಹೇಳುವುದಾದರೆ, ಎಲ್ಲಾ ಹಳ್ಳಿಗಳಿಗೂ ಈ ವರ್ಷದ ನವೆಂಬರ್ ಹೊತ್ತಿಗೆ ಶಾಲೆಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ, ಸಾಧ್ಯವೇ ಸ್ವಾಮಿ ? ನೀವು ಈ ರೀತಿ ಮಾತನಾಡುವುದು ಸರಿಯಲ್ಲ. ನಿಮ್ಮ ಮಾತಿನ ಮೇಲೆ ಬಿಗಿ ಇರಬೇಕು. ನಿಮ್ಮ ಕೈಯಲ್ಲಿ ಆಗುವುದಿಲ್ಲ. ಅನಾವೃಷ್ಟಿ ಪ್ರದೇಶಗಳಲ್ಲಿ ಸರ್ಕಾರ ಯಾವುದೇ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಅನಾವೃಷ್ಟಿಗೆ ಈಡಾಗಿರತಕ್ಕಂತಹ ಪ್ರದೇಶಗಳಾದ ಕೋಲಾರ, ಬಿಜಾಪುರ, ರಾಯಚೂರು, ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಜನಗಳು ಅನಾವೃಷ್ಟಿಯ ಸಂಕಷ್ಟಕ್ಕೆ ಸಿಲುಕಿದ್ದಾರೆ. ಜನರು ವಲಸೆ ಹೋಗುತ್ತಿದ್ದಾರೆ, ಜನಗಳು ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿಗೂ ಸಹ ಅಭಾವವಾಗಿದೆ. ಕೇಂದ್ರದಿಂದ ಈ ಬಾಬಿಗೆ ಎಷ್ಟು ಹಣವನ್ನು ತೆಗೆದುಕೊಂಡಿದ್ದೀರಿ ? ಕೇಂದ್ರದಿಂದ ಹಣವನ್ನು ಪಡೆಯುವುದರಲ್ಲಿ ವಿಫಲರಾಗಿದ್ದೀರಿ. ಈ ಬಾಬಿಗೋಸ್ಕರ ತಮಿಳುನಾಡು ಮತ್ತು ಆಂಧ್ರಪ್ರದೇಶ ಸರ್ಕಾರಗಳು ಎಷ್ಟು ಹಣವನ್ನು ತೆಗೆದುಕೊಂಡಿದೆ ಎಂಬುದು ನಿಮಗೆ ಗೊತ್ತಿದೆಯೋ ? ನೀವು ಎಷ್ಟು ತೆಗೆದುಕೊಂಡಿದ್ದೀರಿ ? ನಿಮ್ಮ ಮಂತ್ರಿ ಕೆಲಸ ಮಾಡುವುದಕ್ಕಾಗುವುದಿಲ್ಲ ನೀವು ಮಂತ್ರಿ ಕೆಲಸ ಯಾಕೆ ಇಟ್ಟುಕೊಂಡಿದ್ದೀರಿ; ಮೊದಲು ರಾಜೀನಾಮೆ ಕೊಡಿ. ಮಾನ್ಯ ಸದಸ್ಯರಾದ ಆರ್ಮುಗಂರವರು ಕುಡಿಯುವ ನೀರಿನ ಅಭಾವದ ಬಗ್ಗೆ ಹೇಳಿದರು. ಕುಡಿಯುವ ನೀರನ್ನು ಒದಗಿಸುವ ಮಂತ್ರಿಗಳಾದ ಮಾನ್ಯ ರಾಮಯ್ಯನವರು ಏನು ಮಾಡಿದ್ದಾರೋ ಗೊತ್ತಿಲ್ಲ.

ಶ್ರೀ ಬಿ. ರಾಮಯ್ಯ.—ಕೋಲಾರ ಜಿಲ್ಲೆಯಲ್ಲಿ ಮೊನ್ನೆ ನಮ್ಮ ಸಿಬ್ಬಂದಿ ಜೊತೆ ಹೋಗಿ ಸ್ಪಾಟ್ ಡಿಸಿಷನ್ ತೆಗೆದುಕೊಂಡು ಸಮಸ್ಯೆಯನ್ನು ಬಗೆಹರಿಸಿ ಬಂದಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಇನ್ನು ಗುಂಡೂರಾಯರ ಸರ್ಕಾರ ಒಂದು ವರ್ಷ ಅವಧಿ ಮುಗಿಸು ತ್ತಿದ್ದಂತೆ ವಾರ್ಷಿಕೋತ್ಸವವನ್ನು ಆಚರಿಸುವ ಸಂದರ್ಭದಲ್ಲಿ, ೨೫ ಸಾವಿರ ದೇವಸ್ಥಾನಗಳಲ್ಲಿ ಎರಡೂವರೆ ಲಕ್ಷ ಜನಗಳಿಗೆ ಅನ್ನ ಸಂತರ್ಪಣೆ ಮಾಡಿದ್ದಾರೆ. ಒಂದು ಊಟಕ್ಕೆ ಎಷ್ಟು ಖರ್ಚು ಬರುತ್ತದೆ ? ಈ ಬಾಬಿಗೋಸ್ಕರ ಲಕ್ಷಾಂತರಗಳಷ್ಟು ಸರ್ಕಾರದ ಹಣವನ್ನು ಖರ್ಚು ಮಾಡಿದ್ದಾರೆ. ಹಿಂದೆ ರಾಜಮಹಾ ರಾಜರುಗಳು ಅನ್ನ ಸಂತರ್ಪಣೆ ಮಾಡಿ "ಚಿರಯಭಿ ವರ್ಧತಾಂ ಯದು ಸಂತಾನ ಶ್ರೀ" ಎಂಬ ಬಿರುದು ಗಳನ್ನು ಪಡೆಯುತ್ತಿದ್ದರು. ಇದು ಪ್ರಜಾಪ್ರಭುತ್ವಕ್ಕೆ ವಿರೋಧ. ಈ ವಿಷಯದಲ್ಲಿ ಸರ್ಕಾರಿ ಯಂತ್ರದ ದುರುಪಯೋಗ. ನಮ್ಮದು ಜಾತ್ಯಾತೀತವಾದ ಸರ್ಕಾರವೆಂದು ಹೇಳುತ್ತೀರಿ. ಜಾತ್ಯಾ ತೀತ ತತ್ವದಲ್ಲಿ ನಿಮ್ಮ ಸರ್ಕಾರಕ್ಕೆ ನಂಬಿಕೆ ಇದೆಯೇ ? ನಿಮ್ಮ ಜಾತ್ಯಾತೀತ ನೀತಿ ಎಲ್ಲಿ ಹೋಯಿತು. ಅನ್ನಸಂತರ್ಪಣೆ ಮಾಡುವುದಕ್ಕಾಗಿ ಸರ್ಕಾರಿ ಸಮಯವನ್ನು ಮತ್ತು ತೆರಿಗೆ ಹಣವನ್ನು ಉಪಯೋಗಿಸಿದ್ದೀರಿ.

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಅಧ್ಯಕ್ಷರೇ, ಎಲ್ಲಿ ಊಟ ಹಾಕಿದ್ದಾರೆ, ಯಾರು ಊಟ ಮಾಡಿದ್ದಾರೆ ಎಂಬ ವಿಷಯ ಸದಸ್ಯರಿಗೆ ಗೊತ್ತಿದೆಯೆ ?

ಶ್ರೀ ಎಂ. ಸಿ. ನಾಣಯ್ಯ.—ಮಾನ್ಯ ಅಧ್ಯಕ್ಷರೇ, ಇದು ನಾವು ಹೇಳತಕ್ಕಂತಹದ್ದು ಅಲ್ಲ. ಈ ವಿಷಯವನ್ನು ಮುಜರಾಯಿ ಇಲಾಖೆ ಮಂತ್ರಿಗಳು ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಇನ್ನು ಕಡತಗಳ ವಿಲೇವಾರಿ ವಿಷಯ. I must move like a well oiled engine. The first and primary duty of any Government or any Minister is to see that all files are disposed of. If files are piled up, who is responsible ? I am not responsible. ಕಡತಗಳನ್ನು ಕೂಡಿಸುವುದಕ್ಕೆ ಕಾರಣ ಯಾರು ? ಶ್ರೀಮಾನ್ ಗುಂಡೂರಾಯರು ಹಿಂದೆ ಮಂತ್ರಿ ಮಂಡಲದಲ್ಲಿ ಇದ್ದರು. ಕಡತಗಳನ್ನು ವಿಲೇವಾರಿ ಮಾಡದೆ ಹೋದರೆ ಹೇಗೆ ? ಮಂತ್ರಿಗಳಾದ ಮೇಲೆ ನಿಮ್ಮ ಪರದಾಟ, ಓಡಾಟ ಮತ್ತು ಪರ್ಯಟನೆ ಜಾಸ್ತಿಯಾಗಿ ಕಡತಗಳು ಒಂದು ಕಡೆ ಸೇರಿ ಕೊಳ್ಳುತ್ತವೆ. ಕಡತಗಳನ್ನು ವಿಲೇವಾರಿ ಮಾಡತಕ್ಕಂತಹ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿಲ್ಲ; ಆದ್ದರಿಂದ ಕಡತಗಳು ಬೆಳೆಯುತ್ತವೆ. ಮಂತ್ರಿಗಳು ಕೆಲಸ ಮಾಡುವಾಗ it is something like creating a ghost and trying to kill it and becoming a hero in the process. ಇದನ್ನು ಮಾಡಿದ್ದಾರೆ. ಫೈಲ್ಸ್ ವಿಲೇವಾರಿ ಮಾಡುತ್ತೇವೆಂದು ಪತ್ರಿಕೆಗಳಲ್ಲಿ ಜಾಹೀರಾತು ಗಳನ್ನು ಕೊಟ್ಟಿದ್ದಾರೆ. ಇಂತಹ ಅನೇಕ ವಿಚಾರಗಳಲ್ಲಿ ಸರ್ಕಾರದ ಬೊಕ್ಕಸಕ್ಕೆ ಲಕ್ಷಾಂತರ ರೂಪಾಯಿ ಗಳು ಖರ್ಚು ಬರುವಂತೆ ಮಾಡಿದ್ದಾರೆ.

೫–೦೦ ಪಿ.ಎಂ.

ಸ್ವಾಮಿ ಈ ರಾಜ್ಯಪಾಲರ ಭಾಷಣವನ್ನು ಎಷ್ಟು ಸಲ ತಿರುಗುಮುರುಗು ಹಾಕಿ ನೋಡಿದರೂ ಸಹ ಸಾರವಾದಂಥ ಭಾಗ ಒಂದೂ ಸಿಗಲಿಲ್ಲ. ಎಲ್ಲ ಟೊಳ್ಳು ಘೋಷಣೆಗಳಾಗಿವೆ, ಅರ್ಧಂಬರ್ಧ ನಡೆದಿರುವ ಕೆಲಸಗಳನ್ನೇ ಒಳ್ಳೆಯ ರಂಜನೀಯವಾದ ಭಾಷೆಯಲ್ಲಿ ಪ್ರಶಂಸೆ ಮಾಡಿಕೊಂಡು ಹೇಳಿದ್ದಾರೆ. ಇವರು ಇಲ್ಲಿ ಉಲ್ಲೇಖ ಮಾಡಿರುವಂತಹ ಯಾವ ವಿಷಯವೂ ಸರಿಯಾಗಿ ಕಾರ್ಯಗತವಾಗಿಲ್ಲ. ಇವರ ಒಂದು ಆಡಳಿತ ಆಡಳಿತವಾಗಿಯೇ ಉಳಿದಿದೆ. ಮಾನ್ಯ ಗುಂಡೂರಾವ್ ಅವರ ಒಂದು ವರ್ಷದ ಆಡಳಿತದ ಸಮಗ್ರ ಚಿತ್ರ ಯಾವ ರೀತಿ ಕಾಣುತ್ತಿದೆಯೆಂದರೆ. ಜನರಲ್ಲಿ ನಿರಾಶಾಭಾವನೆ, ಗೊತ್ತುಗುರಿಯಿಲ್ಲದ ಆಡಳಿತ. ಎಲ್ಲೆಡೆ ಅಶಾಂತಿ ಕಾನೂನು ವ್ಯವಸ್ಥೆಯಲ್ಲಿ ಸ್ಥಗಿತ, ಕುಸಿತ, ಅಭದ್ರತೆ, ಮುಷ್ಕರಗಳು, ಬಂದ್‌ಗಳು, ತಡೆಯಲಾರದ ಬೆಲೆ ಏರಿಕೆ, ಭ್ರಷ್ಟಾಚಾರದ ಆರೋಪ. ರೈತರ ಆಂದೋಳನ, ವಿದ್ಯಾರ್ಥಿ ಗಳ ಮುಷ್ಕರ, ಉಪಾಧ್ಯಾಯರ ಮುಷ್ಕರದ ಬೆದರಿಕೆ. ಲಾಕೌಟ್, ಗೂಂಡಾಗಳ ದರ್ಬಾರು, ಜೊತೆಗೆ ಗುಂಡಿಟ್ಟು ಕೊಂದವರ ಸಂಖ್ಯೆಯಲ್ಲಿ ಮಾನ್ಯ ಗುಂಡೂರಾವ್ ಅವರು ದಾಖಲೆ ಸಾಧಿಸಿದ್ದಾರೆ.

ಅತಿವೃಷ್ಟಿ ಮತ್ತು ಅನಾವೃಷ್ಟಿ ಪ್ರದೇಶಗಳಲ್ಲಿ ಸರ್ಕಾರ ಸರಿಯಾದಂಥ ಕ್ರಮಗಳನ್ನು ಕೈಕೊಂಡಿಲ್ಲ. ಒಟ್ಟಿನಲ್ಲಿ ಮಾನ್ಯ ಗುಂಡೂರಾಯರ ಸರ್ಕಾರ ಎಲ್ಲ ರಂಗಗಳಲ್ಲಿಯೂ ಘೋರ ವಿಫಲತೆಯಿಂದ ಕೂಡಿದೆ ಮತ್ತು ವೈಫಲ್ಯಭರಿತ ಕ್ರೂರ ಸರ್ಕಾರ ಇದಾಗಿದೆ ಎಂದು ಹೇಳಬಹುದು. ಮಾನ್ಯ ಗುಂಡೂರಾಯರ ಸರ್ಕಾರ ಯಾವ ರೀತಿ ಇದೆ ಎಂದರೆ, "ಗಾಳಿ ಸೊಡರ್" ರೀತಿಯಲ್ಲಿದೆ. ಅಂದರೆ ಬಿರುಗಾಳಿಯ ಮಧ್ಯ ಇರುವ ದೀಪದಂತೆ ಇದೆ. ಅಂದರೆ ಈ ದೀಪ ಯಾವ ಘಳಿಗೆಯಲ್ಲಿ ಹಾರಿ ಹೋಗುತ್ತದೋ ಗೊತ್ತಿಲ್ಲ. ಸರ್ಕಾರ ಇದ್ದರೂ ಸಹ ಇಲ್ಲದಿರುವ ರೀತಿಯಲ್ಲಿದೆ. ಸರ್ಕಾರದ ಆಡಳಿತ ಕುಸಿದುಬೀಳುವ ರೀತಿಯಲ್ಲಿ ಆಡಳಿತ ನಡೆದಿದೆ. ಇದು ಗುಂಡೂರಾಯರ ವೈಫಲ್ಯಭರಿತ ಕ್ರೂರ ಸರ್ಕಾರದ ಪರಿ ಹೀಗಿದೆ. ಆದ ಕಾರಣ ರಾಜ್ಯಪಾಲರ ಭಾಷಣ ತಿರಸ್ಕರಿಸಲು ಯೋಗ್ಯವಾಗಿದೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಲ್ಲಿ ಅತಿವಿನಯದಿಂದ ಪುನ: ಪ್ರಾರ್ಥನೆ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಹನುಮೇಗೌಡ (ಹಾಸನ). – ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯವನ್ನು ಸ್ವಾಗತಿಸುತ್ತಾ ಕೆಲವು ವಿಚಾರಗಳನ್ನು ತಿಳಿಸುವುದಕ್ಕೆ ನಾನು ಇಚ್ಛೆಪಡುತ್ತೇನೆ. ಕಳೆದ ಎರಡೂ ದಿವಸಗಳಿಂದಲೂ ವಿರೋಧಪಕ್ಷದ ಮಾನ್ಯ ಸದಸ್ಯರುಗಳು ವಿಪುಲವಾಗಿ ಮಾತನಾಡಿದರು.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಅವರ ಮಾತುಗಳಿಗೆ ಯಾವ ಲಂಗೂಲಗಾಮು ಇದ್ದಂತೆ ಕಾಣಲಿಲ್ಲ. ತಮ್ಮ ಮನಸ್ಸಿಗೆ ತಿಳಿದಿದ್ದನ್ನು ಸ್ವೇಚ್ಛೆಯಾಗಿ ಗಟ್ಟಿ ಮಾತುಗಳಿಂದ ಹೇಳಿದರು ಎಂದರೆ ತಪ್ಪಾಗಲಾರದು. ಅವರ ಮಾತುಗಳನ್ನೆಲ್ಲಾ ನಾನು ನಿನ್ನೆಯಿಂದ ಕೇಳಿದೆ. ಅವರ ಮಾತುಗಳಿಂದ ನಮ್ಮ ರಾಜ್ಯಸರ್ಕಾರ ಯಾವ ಒಳ್ಳೆಯ ಕೆಲಸಗಳನ್ನೂ ಮಾಡಲಿಲ್ಲವೆಂದು ಅರ್ಥ ಬರುತ್ತದೆ. ಸರ್ಕಾರ ಮಾಡಿರುವಂತಹ ಒಳ್ಳೆಯ ಕೆಲಸಗಳು ಇವರ ಕಣ್ಣಿಗೆ ಕಾಣುವುದೂ ಇಲ್ಲ. ಈ ಸರ್ಕಾರ ಅದು ಮಾಡಿತು. ಇದು ಮಾಡಿತು, ಸರ್ಕಾರವೇ ಇಲ್ಲ, ಇದು ಬರೀ ಗುಂಡು ಹಾರಿಸುವ ಸರ್ಕಾರ ಎಂದೆಲ್ಲಾ ಮಾತನಾಡಿದರು. ಈ ಸರ್ಕಾರ ಮಾಡಿರುವಂತಹ ಒಳ್ಳೆಯ ಕೆಲಸಗಳು ಯಾವುವೂ ಇವರ ಕಣ್ಣಿಗೆ ಬೀಳದಿರುವುದು ದುರ್ದೈವದ ಸಂಗತಿ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈಗ ವಿರೋಧಪಕ್ಷ ಇದೆ. ಅದು ಇರಬೇಕು. ವಿರೋಧಪಕ್ಷದವರು ಸರ್ಕಾರದಲ್ಲಿ ಕಂಡ ನ್ಯೂನತೆಗಳನ್ನು ತಿದ್ದುವುದಕ್ಕೆ ಪ್ರಯತ್ನ ಮಾಡಬೇಕು. ಅದೇರೀತಿ ಸರ್ಕಾರ ಜನರ ಹಿತದೃಷ್ಟಿಯಿಂದ ಮಾಡಿರುವ ಒಳ್ಳೆಯ ಕೆಲಸಗಳ ಕಡೆಗೆ ಗಮನಹರಿಸಿ ಒಂದೆರಡು ಒಳ್ಳೆಯ ಮಾತುಗಳನ್ನು ಆಡಿದ್ದರೆ ಇವರು ಆತ್ಮಪೂರ್ವಕವಾಗಿ ಮಾತನಾಡಿದ್ದಾರೆಂದು ನಾನು ಹೇಳುತ್ತಿದ್ದೆ. ಆದರೆ ಅವರುಗಳು ಈ ರೀತಿ ಮಾಡಲಿಲ್ಲ. ಬರೀ ಸಣ್ಣಪುಟ್ಟ ನ್ಯೂನತೆಗಳನ್ನು ಎತ್ತಿತೋರಿಸಿ ತಮ್ಮ ಮನಸ್ಸ್ವೇಚ್ಛೆಯಾಗಿ ಮಾತನಾಡಿ ತಮ್ಮ ಪಾಲಿನ ಕರ್ತವ್ಯವನ್ನು ಮುಗಿಸಿದ್ದಾರೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನೆನ್ನೆದಿವಸ ಮಾನ್ಯ ಸುಬ್ಬಯ್ಯಶೆಟ್ಟರು ಒಂದು-ಒಂದೂವರೆ ಗಂಟೆಯ ಕಾಲ ಮಾತನಾಡಿದರು. ರೈತರ ಸಮಸ್ಯೆಗಳಿಗೆಲ್ಲಾ ಕಳೆದ ಒಂದು ವರ್ಷದಿಂದ ಅಧಿಕಾರದಲ್ಲಿರುವ ಸರ್ಕಾರವೇ ಜವಾಬ್ದಾರಿ ಎನ್ನುವ ರೀತಿಯಲ್ಲಿ ಮಾತನಾಡಿ, ಈ ಸರ್ಕಾರದಿಂದ ಯಾವ ಒಂದು ಉತ್ತಮವಾದ ಕೆಲಸವೂ ನಡೆದಿಲ್ಲ ಎನ್ನುವ ರೀತಿಯಲ್ಲಿ ಮಾತನಾಡಿದರು. ಅವರು ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ವಿದ್ಯುಚ್ಛಕ್ತಿ ದರವನ್ನು ೧೭ ಪೈಸೆಯಿಂದ ೨೬ ಪೈಸೆಗೆ ಹೆಚ್ಚಿಸಿದ್ದಾರೆಂದೂ ಸಹ ಹೇಳಿದರು. ಇದು ಸರಿಯಲ್ಲ. ಮಾನ್ಯ ಸುಬ್ಬಯ್ಯಶೆಟ್ಟರು ಅಧಿಕಾರದಲ್ಲಿದ್ದಾಗಲೇ ವಿದ್ಯುಚ್ಛಕ್ತಿಯ ದರ ಜಾಸ್ತಿಯಾಯಿತು. ಅವರು ಇನ್ನೂ ಒಂದು ವಿಚಾರ ತಿಳಿಸಿದರು. ಅದೇನೆಂದರೆ, ಶರಾವತಿಯಂತಹ ದೊಡ್ಡ ಯೋಜನೆಗಳನ್ನು ಕೈಕೊಂಡು, ಅದರಿಂದ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿಯನ್ನು ಇಡೀ ರಾಜ್ಯಕ್ಕೆ ಹಂಚುವಾಗ, ಬೆಟರ್ ಮೆಂಟ್ ಲೆವಿಯನ್ನು ಏತಕ್ಕೆ ಹಾಕಲಿಲ್ಲ ಎಂದು ಕೇಳಿದರು. ಈ ಮೊದಲು ಇವರೇ ವಿದ್ಯುಚ್ಛಕ್ತಿ ಮಂತ್ರಿಗಳಾಗಿದ್ದರು. ಆಗ ಇವರು ಈ ಕೆಲಸ ಏತಕ್ಕೆ ಮಾಡಲಿಲ್ಲ? ಆಗ ಇವರು ಏನು ಮಾಡುತ್ತಿದ್ದರು ಅಧಿಕಾರದಲ್ಲಿದ್ದಾಗ ಇವರಿಗೆ ಏನೂ ಮಾಡುವುದಕ್ಕೆ ಆಗಲಿಲ್ಲ. ಈಗ ಹೊರಗಡೆ ಬಂದಮೇಲೆ, ತಾವು ಹೇಳುವುದನ್ನೆಲ್ಲಾ ಜನರು ಕೇಳುತ್ತಾರೆಂದುಕೊಂಡು ಇದನ್ನೆಲ್ಲಾ ಹೇಳುತ್ತಿದ್ದಾರೆ. ಆದರೆ ಅವರು ಈ ರೀತಿಯೆಲ್ಲಾ ಮಾತನಾಡುವುದು ಅವರಿಗೆ ಶೋಭಾಯಮಾನವಲ್ಲವೆಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ನೀರಿನ ದರದ ಬಗ್ಗೆ ವಿರೋಧಪಕ್ಷದವರು ಬಹಳವಾಗಿ ಮಾತನಾಡಿದರು. ೧೯೭೭ರಲ್ಲಿ ನೀರಿನ ದರವನ್ನು ಆಗಿನ ಸರ್ಕಾರದವರು ಹೆಚ್ಚು ಮಾಡಿದ ಸಮಯದಲ್ಲಿ ನಾನು ವಿರೋಧಪಕ್ಷದಲ್ಲಿದ್ದೆ. ಆ ಸಮಯದಲ್ಲಿ

ನೀರಿನ ದರ ಜಾಸ್ತಿ ಮಾಡಬಾರದೆಂದು ಎರಡು ದಿವಸಗಳ ಕಾಲ ವಿಪುಲವಾದಂಥ ಚರ್ಚೆ ನಡೆಯಿತು, ಆಗ ನಾವು ನಾನಾ ರೀತಿಯಿಂದ ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಂಡೆವು. ನೀರಿನ ದರ ಜಾಸ್ತಿ ಮಾಡಿದರೆ ರೈತರ ಕಗ್ಗೊಲೆಯಾಗುತ್ತದೆ, ದೇಶದ ಸಂಪತ್ತನ್ನು ರೂಡಿಸುವಂತಹ ಜನರ ಮೇಲೆ ಇದು ಗಧಾ ಪ್ರಹಾರವಾಗುತ್ತದೆ, ಆದಕಾರಣ ಇದು ಬೇಡ ಎಂದು ವಿನಯವಾಗಿ ಪ್ರಾರ್ಥನೆ ಮಾಡಿಕೊಂಡೆವು. ಆದರೂ ಸರ್ಕಾರ ಒಪ್ಪಲಿಲ್ಲ. ಕೊನೆಗೆ ಇದನ್ನು ಅನೌನ್ಸ್ ಮಾಡುವ ಸಂದರ್ಭದಲ್ಲಿ ನಾವುಗಳು ಅಧ್ಯಕ್ಷರಿಗೆ ಘೆರಾವೋ ಮಾಡಿದೆವು. ಆದರೂ ಅವರು ಇದನ್ನು ಗಿಲಟ್‌ನ್‌ಗೆ ಹಾಕಿ ಪಾಸ್ ಮಾಡಿದರು ಈಗ ವಿರೋಧಪಕ್ಷದಲ್ಲಿ ಕುಳಿತಿರುವವರೇ ಆಗ ನೀರಿನ ದರವನ್ನು ಒಂದಕ್ಕೆ ಎರಡರಷ್ಟು ಹೆಚು ಮಾಡಿದರು. ಇದು ದೇಶದ ಜನತೆಗೆ ಗೊತ್ತು. ಆದರೂ ಸಹ ಇವೊತ್ತಿನದಿವಸ ಅವರೇ ವಿರೋಧಪಕ್ಷದ ಕಡೆ ಕುಳಿತುಕೊಂಡು ರೈತರಿಗೆ ಅನ್ಯಾಯವಾಯಿತು, ರೈತರ ಕಗ್ಗೊಲೆಯಾಯಿತು ಎಂದು ಹೇಳುತ್ತೀರುವುದು ಆತ್ಮವಂಚನೆಯ ಕೆಲಸವಲ್ಲವೇ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇಂತಹ ಅನೇಕ ನಿದರ್ಶನಗಳನ್ನು ಕೊಡಬಹುದು, ಇವರು ಅಧಿಕಾರದಲ್ಲಿದ್ದಾಗ......

ಶ್ರೀ ಎಚ್.ಡಿ, ದೇವೇಗೌಡ.—ರೈತರ ಜಾಥಾದ ಬಗ್ಗೆ ಸಹ ಹೇಳಿ.

ಶ್ರೀ ಕೆ. ಎಚ್. ಹನುಮೇಗೌಡ.—ರೈತರ ಜಾಥಾ ಬರುತ್ತಿರುವ ವಿಚಾರ ಪತ್ರಿಕೆಗಳಲ್ಲಿ ವರದಿಯಾಗಿದೆ ಮತ್ತು ಅವರ ಫೋಟೋ ಸಹ ಬಂದಿದೆ. ಕೆಲವರು ಬಾವುಟ ಹಿಡಿದಿದ್ದಾರೆ ಯಾರು ರೈತರ ಹಿತರಕ್ಷಣೆಗೋಸ್ಕರ ಹೋರಾಟ ಮಾಡಿದರೋ, ಯಾರು ರೈತರ ಕಷ್ಟಗಳನ್ನು ತಿಳಿದುಕೊಂಡು ಅವರ ಸಮಸ್ಯೆಗಳನ್ನು ಪರಿಹಾರ ಮಾಡಲು ಹೋರಾಟ ಮಾಡಿದರೊ, ಅಂತಹವರು ಈ ಭಾವುಟ ಹಿಡಿದುಕೊಂಡು ಮುಂದೆ ಬಂದಿದ್ದರೆ ನಾನು ಸಂತೋಷ ಪಡುತ್ತಿದ್ದೆ. ಆದರೆ ಅಧಿಕಾರದಲ್ಲಿದ್ದಾಗ ಯಾರು ರೈತರ ಸೊಂಟ ಮುರಿಯಲು ಕಾರಣ ಕರ್ತರಾಗಿದ್ದರೋ, ಅದೇ ಜನರು ರೈತರ ಜಾಥಾ ಮುಂದೆ ಬರುತ್ತಿದ್ದಾರೆ. ಇಂತಹ ಆತ್ಮವಂಚನೆ ಕೆಲಸ ಇನ್ನೊಂದು ಇಲ್ಲವೆಂದು ಹೇಳಿದರೆ ತಪ್ಪಾಗಲಾರದು. ಈ ಕೆಲಸ ಮಾಡಲು ಇವರಿಗೆ ನಾಚಿಕೆಯಾಗಬೇಕಾಗಿತ್ತು. ಅಧಿಕಾರದಲ್ಲಿದ್ದಾಗ ನಾನಾ ರೀತಿಯ ತೆರಿಗೆಗಳನ್ನು ಹಾಕುವುದರ ಮೂಲಕ ರೈತನನ್ನು ಕಷ್ಟಗಳ ಸಂಕೋಲೆಯಲ್ಲಿ ಸಿಕ್ಕಿಕೊಳ್ಳುವಂತೆ ಮಾಡಿ, ಈಗ ಅಧಿಕಾರ ಹೋದಮೇಲೆ ತಾವೇ ರೈತರ ಮುಖಂಡರು ಎಂದು ಹೇಳಿಕೊಂಡು ಮುಂದೆ ಬಂದರೆ ತಮ್ಮ ಆತ್ಮ ಒಪ್ಪುತ್ತದೆಯೇ ಎಂದು ಇವರು ಯೋಚನೆ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಅಥವಾ ಅಧಿಕಾರದಲ್ಲಿದ್ದಾಗ ನಾವು ನಿಮಗೆ ಅನ್ಯಾಯ ಮಾಡಿದೆವು. ದಯಮಾಡಿ ಕ್ಷಮಿಸಿ, ಇನ್ನು ಮುಂದೆ ಸರಿಯಾಗಿ ನಡೆದುಕೊಳ್ಳುತ್ತೇವೆಂದು ರೈತರ ಪರವಾಗಿ ಕ್ಷಮಾಪಣೆ ಕೇಳಿಕೊಂಡು ಅವರ ಜೊತೆಯಲ್ಲಿ ಜಾಥಾ ಬಂದಿದ್ದರೆ ನಾನು ಸಂತೋಷ ಪಡುತ್ತಿದ್ದೆ, ಇವೆರಡನ್ನೂ ಮಾಡದೇ ಮಾಡಬಾರದನ್ನೆಲ್ಲಾ ಮಾಡಿ ಈಗ ಹೊಸ ರೂಪವನ್ನು ತಾಳಿ ಭಾವುಟ ಹಿಡಿದುಕೊಂಡು ನಿಂತಿದ್ದಾರೆ. ವಿರೋಧ ಪಕ್ಷದವರಿಗೆ ಇದಕ್ಕಿಂತಲೂ ನಾಚಿಕೆಗೇಡಿನ ಕೆಲಸ ಇನ್ನೊಂದಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಮಾನ್ಯ ಸುಬ್ಬಯ್ಯಶೆಟ್ಟರು ಇಲ್ಲಿ ಇದ್ದಿದರೆ ಅವರನ್ನೇ ನಾನು ಕೇಳುತ್ತಾ ಇದ್ದೆ. ಆದರೆ ಈಗ ಇಲ್ಲಿಲ್ಲ. ಈ ಕಡೆಯ ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಾ ಹೇಳಿದರು. ಇದು ರೈತರ ಜಾಥವೋ ಅಥವಾ ಬೇರೆ ಯವರ ಜಾಥವೋ ಎಂದು. ಅದರಲ್ಲಿ ಯಾರ್ಯಾರು ಇದ್ದಾರೊ ಏನೋ ಗೊತ್ತಿಲ್ಲ. ಅವರೆಲ್ಲಾ ಸೇರಿಕೊಂಡು, ನಮಗೆ ಹೆಚ್ಚು ತೆರಿಗೆಯನ್ನು ಹಾಕಿ ನಮ್ಮ ಸೊಂಟ ಮುರಿದರು. ಎಂದು ಹೇಳುತ್ತಿದ್ದಾರೆ. ಅವರು ಏತಕ್ಕೆ ನಮ್ಮ ಮುಂದೆ ನಿಂತು ಕೇಳುತ್ತಾ ಇಲ್ಲ. ಅವರು ನಿಜವಾದ ರೈತರಾಗಿದ್ದರೆ ನಮ್ಮನ್ನು ಕೇಳುತ್ತಾ ಇದ್ದರು. ಅದರಲ್ಲಿ ಯಾರ್ಯಾರು ಇದ್ದಾರೋ ಏನೋ. ಆದರೆ ನಿಜವಾದ ರೈತರ ಬಗ್ಗೆ ನಾವು ಮಾತನಾಡಬೇಕಾದರೆ ಆ ರೈತರೇ ಈ ದೇಶದ ಬೆನ್ನೆಲಬು ನೇಗಿಲಯೋಗಿಗಳು ಎಂದು ನಾವು ಏನು ಹೇಳುತ್ತೇವೆ ಅವರು ಬಹಳ ಹಿಂದಿನಿಂದಲೂ ಸಂಪತ್ತನ್ನು ರೂಡಿಸಿಕೊಂಡು ಬಂದಿದ್ದಾರೆ. ಈ ದೇಶಕ್ಕೆ ಅನ್ನವನ್ನು ಕೊಟ್ಟಿದ್ದಾರೆ. ಅವರು ಉಪವಾಸ ಇದ್ದರೂ ಕೂಡ, ಅವರ ಮಕ್ಕಳು ಉಪವಾಸ ಇರಲಿ ಇಲ್ಲದಿರಲಿ, ಹೊದ್ದು ಕೊಳ್ಳುವುದಕ್ಕೆ ಬಟ್ಟೆ ಇರಲಿ ಇಲ್ಲದಿರಲಿ, ಈ ದೇಶಕ್ಕೆ ಅನ್ನ ಬೆಳೆದು ಕೊಡುತ್ತಿದ್ದಾರೆ. ಈ ದೇಶದಲ್ಲಿ ನಾವೆಲ್ಲಾ ಬಾಳಿ ಬದುಕಬೇಕಾದರೆ ಪೂರ್ಣವಾಗಿ ಬಡ ರೈತರ ಮೇಲೆ ಅವಲಂಬಿಸಬೇಕಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಇಂಥಹ ಜನರು ಒಗ್ಗಟ್ಟಾಗಿ ಸರ್ಕಾರದ ಮುಂದೆ ಬಂದು ನಮಗೆ ಇಂತಿಂತಹ ಕಷ್ಟ ಇದೆ, ಇದು ಪರಿಹಾರವಾಗಬೇಕು. ಎಂದು ಕೇಳಿಕೊಳ್ಳುವುದಾದರೆ ನಾವು ಅದನ್ನು ಸ್ವಾಗತ ಮಾಡುತ್ತೇವೆ. ಮಾನ್ಯ ಮುಖ್ಯಮಂತ್ರಿಯವರು ಈಗಾಗಲೇ ಅದನ್ನು ಸ್ವಾಗತ ಮಾಡಿದ್ದಾರೆ. ನಿಜವಾದ ರೈತರು ಒಗ್ಗಟ್ಟಾಗಿ ಸಂಘಸಂಸ್ಥೆ

ಗಳನ್ನು ಮಾಡಿಕೊಂಡು ಅವರ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಡುವುದಾದರೆ ನಾವು ಸಂತೋಷ ಪಡುತ್ತೇವೆ. ಸರ್ಕಾರ ಕೂಡ ಅದನ್ನು ಸ್ವಾಗತಿಸುತ್ತದೆ. ರೈತರ ಹೆಸರನ್ನು ಹೇಳಿಕೊಂಡು. ರೈತರ ಸೋಗಿನಲ್ಲಿ ಬಂದು ಸರ್ಕಾರವನ್ನು ಧಿಕ್ಕರಿಸಿ ಮಾತನಾಡತಕ್ಕಂಥ. ಹೆದರಿಸತಕ್ಕಂಥ ಜನರ ಬಗ್ಗೆ ಈ ದೇಶದ ಜನ ತಿಳಿದುಕೊಂಡಿದ್ದಾರೆ ಎಂದು ತಿಳಿಸುವುದಕ್ಕೆ ನಾನು ಇಷ್ಟಪಡುತ್ತೇನೆ. ಇನ್ನು ಈ ನಿಜ ವಾದ ರೈತರ ಬಗ್ಗೆ ಸರ್ಕಾರ ಮಾಡಿರತಕ್ಕಂಥ ಒಳ್ಳೆಯ ಕೆಲಸಗಳನ್ನು ನಾನು ಇಲ್ಲಿ ತಿಳಿಯಬಯಸುತ್ತೇನೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ರೈತರು ಗಾಡಿ ಹೊಡೆದುಕೊಂಡು ಹೋಗುವಾಗ ಬಸ್ಸೋ ಕಾರೋ ಅಡ್ಡಬಂದು ಆಕ್ಸಿಡೆಂಟ್ ಆಗಿ ಸತ್ತರೆ, ಬಾವಿ ತೆಗೆಯಬೇಕಾದರೆ ಕಾಲು ಜಾರಿ ಬಿದ್ದು ಸತ್ತರೆ ಮತ್ತು ರೈತರು ತೋಟಕ್ಕೆ ಹೋಗಿ ಕೆಲಸಮಾಡುವಾಗ ಹಾವು ಕಡಿದು ಸತ್ತರೆ. ಇಂತಹ ಅನಿರೀಕ್ಷಿತ ದುರ್ಘಟನೆಗಳಲ್ಲಿ ಸತ್ತಂಥ ರೈತರ ಸಂಸಾರಗಳಲ್ಲಿ ಯಾರೂ ದುಡಿಯುವರು ಇಲ್ಲದಿದ್ದರೆ. ಇರತಕ್ಕಂಥ ಆಸ್ತಿಪಾಸ್ತಿ ಸಾಲುಗಾರರ ಪಾಲಾಗುತ್ತದೆ, ಹೆಣ್ಣುಮಕ್ಕಳು ಪರರ ಪಾಲಾಗುತ್ತಾರೆ, ಗಂಡುಮಕ್ಕಳು ಗಾಳಿ ಪಾಲಾಗುತ್ತಾರೆ. ನಗುನಗುತ್ತ ಇದ್ದಂತಹ ಸಂಸಾರ ಕೆಲವೇ ದಿವಸಗಳಲ್ಲಿ ಪಡಬಾರದ ಪಾಡು ಪಡುತ್ತಾರೆ. ಅವರ ಮಕ್ಕಳು ಬೀದಿ ಪಾಲಾಗುತ್ತಾರೆ. ಇಂತಹ ಸಂಕಷ್ಟದಲ್ಲಿ ತೊಳಲಾಡುವಂಥ ದುರ್ದೈವೀ ರೈತರಿಗೆ ಸರ್ಕಾರಿ ನೌಕರರಿಗೆ ಕ್ಷೇಮನಿಧಿ ಇರುವಹಾಗೆ ಫ್ಯಾಕ್ಟರಿ ಕೆಲಸಗಾರರಿಗೆ ಕ್ಷೇಮನಿಧಿ ಇರುವಹಾಗೆ ಅವರಿಗೂ ಕ್ಷೇಮನಿಧಿಯನ್ನು ಏರ್ಪಾಡು ಮಾಡಬೇಕು. ಇಂತಹ ದುರ್ಘಟನೆಗೆ ಒಳಗಾದ ರೈತರ ಸಂಸಾರಗಳಿಗೆ ಪರಿಹಾರವನ್ನು ಕೂಡಲೇ ದೊರಕಿಸಿಕೊಡಬೇಕು ಎಂದು ನಾನು ಬಹಳ ಹಿಂದೆಯೇ ಇಲ್ಲಿ ೩-೪ ಸಾರಿ ಪ್ರಸ್ತಾಪ ಮಾಡಿದ್ದೆ. ಆಗ ಮಾನ್ಯ ಮುಖ್ಯಮಂತ್ರಿಗಳಾಗಿದ್ದಂಥ ಶ್ರೀ ದೇವರಾಜ ಅರಸ್‌ರವರು ಇದು ಬಹಳ ಒಳ್ಳೆಯ ಸಲಹೆ. ಈ ಬಗ್ಗೆ ನಾನು ಯೋಚನೆ ಮಾಡುತ್ತೇನೆ. ಎಂದು ಹೇಳಿದ್ದರು. ಅವರ ಅಧಿಕಾರಾವಧಿಯಲ್ಲಿ ಅವರು ಏನೂ ಮಾಡಲಿಲ್ಲ. ಈ ನಮ್ಮ ಸರ್ಕಾರದವರು ಅಧಿಕಾರಕ್ಕೆ ಬಂದತಕ್ಷಣ ರೈತರಿಗೆ ಕ್ಷೇಮನಿಧಿಯನ್ನು ಏರ್ಪಾಡು ಮಾಡಿ ದುರ್ಘಟನೆಗಳಲ್ಲಿ ಸತ್ತಂಥ ರೈತರ ಕುಟುಂಬಕ್ಕೆ ತಕ್ಷಣ ೫೦೦೦ ರೂಪಾಯಿಗಳನ್ನು ಕೊಡತಕ್ಕಂಥ ಯೋಜನೆಯನ್ನು ಹಾಕಿದ್ದಾರೆ. ಎಲ್ಲಕ್ಕಿಂತಲೂ ಹೆಚ್ಚಾಗಿ ದೇವರು ಮೆಚ್ಚತಕ್ಕಂಥ ಈ ಮಹದುಪಕಾರವನ್ನು ನಮ್ಮ ಮಾನ್ಯ ಗುಂಡೂರಾಯರ ಸರ್ಕಾರ ಅಧಿಕಾರಕ್ಕೆ ಬಂದತಕ್ಷಣ ಮಾಡಿದರು ಎಂದರೆ ಇದು ಇಡೀ ದೇಶವೇ ಮೆಚ್ಚ ತಕ್ಕಂತಹ ವಿಚಾರ. ಇದನ್ನು ಹಿಂದೆ ಅಧಿಕಾರದಲ್ಲಿದಂತಹ ವಿರೋಧಪಕ್ಷದವರು ಮಾಡಿದ್ದಾರೇನು? ನಮ್ಮ ಸರ್ಕಾರದವರು ಇಂತಹ ಉಪಕಾರವನ್ನು ಮಾಡಿದಾಗ ಇದು ವಿರೋಧಪಕ್ಷದವರ ಕಣ್ಣಿಗೆ ಏತಕ್ಕೆ ಕಾಣಲಿಲ್ಲವೋ ಗೊತ್ತಿಲ್ಲ. ಇದೊಂದು ಉದಾಹರಣೆ. ಹಾಗೆಯೇ ಇನ್ನೊಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ದೇಶದಲ್ಲಿ ಇರತಕ್ಕಂಥ ರೈತರಿಗೆ ಹೈನುಗಾರಿಕೆ ಬಹಳ ಮುಖ್ಯವಾದ ಕಸಬು. ದೇಶದಲ್ಲಿ ಮಳೆ ಬೆಳೆ ಹೋದರೆ ಕೊನೆಯಪಕ್ಷ ಒಂದೆರಡು ಹಸುಗಳನ್ನು ಕಟ್ಟಿ ಕೊಂಡು ಅದರಿಂದ ಬರತಕ್ಕಂಥ ಹಾಲನ್ನು ಮಾರಾಟ ಮಾಡಿ ಜೀವನವನ್ನು ನಡೆಸತಕ್ಕಂಥ ರೈತ ಜನರು ಇದ್ದಾರೆ. ಲಕ್ಷೋಪಲಕ್ಷ ಜನರು ಇಂತಹ ಉದ್ದಿಮೆಯಲ್ಲಿ ತೊಡಗಿದ್ದಾರೆ. ನಮ್ಮ ಕರ್ನಾಟಕರಾಜ್ಯ ದಲ್ಲಿ ಮಾನ್ಯ ಗುಂಡೂರಾಯರ ಸರ್ಕಾರ ಅಧಿಕಾರ ಬರುವುದಕ್ಕಿಂತ ಮುಂಚೆ ಹಾಲಿನ ರೇಟ್ ೧ ರೂಪಾಯಿ ೩೭ ಪೈಸೆ ಇತ್ತು. ಈಗ ಕಷ್ಟದಲ್ಲಿರತಕ್ಕಂಥ ಆ ಜನರ ಕಲ್ಯಾಣಕೋಸ್ಕರ ಕರ್ನಾಟಕ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಆಗಿದೆ, ಈಗ ಹಾಲಿನ ರೇಟ್ ಕೂಡ ಜಾಸ್ತಿಯಾಗಿದೆ. ಈ ಹಿಂದೆಯೇ ನಾನು ಇಲ್ಲಿ ೨–೩ ಸಾರಿ ಈ ಬಗ್ಗೆ ಹೇಳಿದ್ದೇನೆ. ಆಗ ಮಾನ್ಯ ರಾಮೇಗೌಡರು ಸಚಿವರಾಗಿ ದ್ದರು. ಈ ಹಾಲಿನ ರೇಟನ್ನು ಜಾಸ್ತಿ ಮಾಡಬೇಕೆಂದು ಅವರಲ್ಲಿ ಕಳಕಳಿಯಿಂದ ನಾನು ಕೇಳಿಕೊಂಡೆ, ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ದೇವರಾಜ ಅರಸ್‌ರವರಲ್ಲಿಯೂ ಕೇಳಿಕೊಂಡೆ, ಅವರು ಒಂದು ಪೈಸೆಯಷ್ಟು ಜಾಸ್ತಿ ಮಾಡಲಿಲ್ಲ. ಅದಕ್ಕೆ ಕಾರಣ ಏನು ಹೇಳಿದರು ಎಂದರೆ, ಬೆಂಗಳೂರಿನ ವಿರೋಧ ಪಕ್ಷದ ಶಾಸಕರು ಇದ್ದಾರೆ, ಅವರು ಕಾಲಿಂಗ್ ಅಟೆನ್‌ಷನ್ ನೋಟೀಸ್ ಹಾಕುತ್ತಾರೆ ಎನ್ನತಕ್ಕಂಥ ನೆಪ ಹೇಳಿದರು. ಮಳೆಯಿಲ್ಲದೆ ಬೆಳೆ ಹೋದಾಗ ಅವರ ಮಕ್ಕಳು ಮರಿಗಳನ್ನು ಎಮ್ಮೆ ದನಗಳನ್ನು ನೋಡಿಕೊಳ್ಳುವ ಕೆಲಸಕ್ಕೆ ತೊಡಗಿಸಿ ಕಷ್ಟಪಟ್ಟು ಉತ್ಪತ್ತಿ ಮಾಡಿದಂಥ ಹಾಲಿಗೆ ನ್ಯಾಯವಾದ ಬೆಲೆ ಯನ್ನು ಕೊಡತಕ್ಕಂಥ ದಿಟ್ಟತನ ಹಿಂದಿನ ಸರ್ಕಾರಕ್ಕೆ ಬರಲಿಲ್ಲ. ಈ ಬಗ್ಗೆ ನಾನು ಅವರನ್ನು ಖಂಡಿಸಿ ಮಾತನಾಡುತ್ತಿದ್ದೇನೆ ಅಂತ ಅಲ್ಲ, ಇರತಕ್ಕಂಥ ವಾಸ್ತವಾಂಶವನ್ನು ನಾನು ಇಲ್ಲಿ ಹೇಳುತ್ತಿದ್ದೇನೆ. ಇದು ಈ ದೇಶದ ಜನಕ್ಕೆ ಗೊತ್ತಾಗಲಿ ಎಂದು ಹೇಳುತ್ತಿದ್ದೇನೆ. ಶ್ರೀ ವೈ. ರಾಮಕೃಷ್ಣರವರು ಆಗ ಮಂತ್ರಿಗಳಾಗಿರಲಿಲ್ಲ. ನಾನು ನಮ್ಮ ಸ್ನೇಹಿತರು ಇಲ್ಲಿ ಕಾಲಿಂಗ್ ಅಟೆನ್‌ಷನ್ ತಂದು ಹಾಲಿನ ದರ ಕಡಿಮೆ ಇದೆ, ಇದರಿಂದ ರೈತರ ಉದ್ಧಾರವಾಗುವುದಿಲ್ಲ, ಆದ್ದರಿಂದ ಹಾಲಿನ ದರವನ್ನು ಜಾಸ್ತಿ

ಮಾಡಬೇಕೆಂದು ಹೇಳಿದೆವು. ಆದರೆ ಅಂದಿನ ಮಾನ್ಯ ಮಂತ್ರಿಯವರು ಅಂದು ಇದ್ದಂಥ ದರದಲ್ಲಿ ೨೦ ಪೈಸೆ ಜಾಸ್ತಿ ಮಾಡುವುದಕ್ಕೂ ಒಪ್ಪುವುದಿಲ್ಲವೆಂದು ಹೇಳಿದರು. ಈಗಿನ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಶ್ರೀ ವೈ. ರಾಮಕೃಷ ರವರ ಜೊತೆಯಲ್ಲಿ ಈ ಬಗ್ಗೆ ಮಾತನಾಡಿದಾಗ ಅವರು ಹೇಳಿದರು, ನಿಜ, ಹನುಮೇಗೌಡರೇ, ರೈತರು ಕಷ್ಟದಲ್ಲಿದ್ದಾರೆ. ಬಳಕೆದಾರರಿಗೆ ತೊಂದರೆಯಾದರೂ ಕೂಡ ರೈತರ ತಲೆ ಹೊಡೆಯುವುದಕ್ಕೆ ಆಗುವುದಿಲ್ಲ, ರೈತರು ಕೊಂಡುಕೊಳ್ಳು ತಕ್ಕಂಥ ಪದಾರ್ಥದ ಬೆಲೆಯೆಲ್ಲಾ ಜಾಸ್ತಿಯಾಗಿರುವುದರಿಂದ ಖಂಡಿತವಾಗಿ ಅವರಿಗೆ ಒಂದು ನ್ಯಾಯಬೆಲೆಯನ್ನು ಕೊಡದೇ ಹೋದರೆ ಅವರಿಗೆ ದ್ರೋಹ ಮಾಡಿದಂತಾಗುತ್ತದೆ ಎಂದು ಹೇಳಿದರು. ಅವರು ಮಾನ್ಯ ಮುಖ್ಯ ಮಂತ್ರಿಯವರ ಹತ್ತಿರ ಕರೆದುಕೊಂಡು ಹೋಗಿ ಈ ಬಗ್ಗೆ ಮಾತನಾಡಿದರು. ಮಾನ್ಯ ಮುಖ್ಯಮಂತ್ರಿಯವರು ಬಹಳ ಸಂತೋಷದಿಂದ ೨೫ ಪೈಸೆ ಜಾಸ್ತಿ ಕೊಡುವುದಾಗಿ ಅನೌನ್ಸ್ ಮಾಡುತ್ತೇವೆಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಗುಂಡೂರಾಯರಿಗೆ ರೈತರ ಬಗ್ಗೆ ಅನುಕಂಪ ಇದೆ ಎನ್ನುವುದಕ್ಕೆ ಇದೊಂದು ಉದಾಹರಣೆ ಸಾಕು. ಈ ರೀತಿ ರೈತರಿಗೆ ಅನುಕೂಲ ಮಾಡಿಕೊಟ್ಟ ಮೇಲೆ ರೈತರೆಲ್ಲಾ ಸಂತೋಷ ಪಟ್ಟು, ಶ್ರೀ ಗುಂಡೂರಾಯರ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಒಳ್ಳೆಯ ಕೆಲಸ ಮಾಡಿಕೊಟ್ಟರು ಎಂದು ಅವರು ಹೇಳಿದ್ದಾರೆ. ಈ ಬಗ್ಗೆ ಮಾನ್ಯ ವಿರೋಧಪಕ್ಷದವರು ಏತಕ್ಕೆ ಮಾತನಾಡಲಿಲ್ಲ ಇದು ಉತ್ತಮವಾದ ಕೆಲಸವಲ್ಲವೆ? ಲಕ್ಷಾವಧಿ ರೈತರಿಗೆ ಅನುಕೂಲವಾಗುವಂಥ ಕೆಲಸ ಅಲ್ಲವೇ ಇದು ಕಣ್ಣಿಗೆ ಗ್ಲಾಸ್ ಹಾಕಿಕೊಂಡು ಬಂದು ಇಲ್ಲಿ ಕುಳಿತುಕೊಂಡು ಒಂದೇ ಬಣ್ಣ ಕಾಣು ನಂತೆ ಒಂದೇ ತರಹ ಮಾತನಾಡುವುದು ಸಮಂಜಸವಲ್ಲ ಎಂದು ನಾನು ಮಾನ್ಯ ವಿರೋಧಪಕ್ಷದವರಿಗೆ ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಈ ಸಂದರ್ಭದಲ್ಲಿ ಇನ್ನೊಂದು ವಿಚಾರವನ್ನು ನಾನು ಸರ್ಕಾರದವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತಿನದಿವಸ ರೈತರ ಸಮಸ್ಯೆ ಅಗಾಧವಾಗಿದೆ. ರೈತರು ಸಾಮಾಜಿಕವಾಗಿ ಆರ್ಥಿಕವಾಗಿ, ಶೈಕ್ಷಣಿಕವಾಗಿ ಮುಂದೆ ಬರದೇಹೋದರೆ ಬಹುಶ: ಪ್ರಜಾಪ್ರಭುತ್ವ ಇಲ್ಲಿ ಬಹಳ ವರ್ಷ ಉಳಿಯುತ್ತದೆಯೆಂದು ಹೇಳುವುದಕ್ಕಾಗುವುದಿಲ್ಲ. ರೈತರು ಈ ದೇಶದಲ್ಲಿ ಸಮೃದ್ಧರಾಗಬೇಕಾದರೆ ಅವರ ಮಕ್ಕಳು ವಿದ್ಯಾವಂತರಾಗಿ ಸರ್ಕಾರದ ಆಗುಹೋಗುಗಳಲ್ಲಿ ಭಾಗಿಗಳಾಗ ಬೇಕು, ಆಗ ಮಾತ್ರ ಪ್ರಜಾಪ್ರಭುತ್ವ ಈ ದೇಶದಲ್ಲಿ ಹತ್ತಾರು ವರ್ಷಗಳ ಕಾಲ ಉಳಿಯುವುದಕ್ಕೆ ಸಾಧ್ಯವಾಗುತ್ತದೆ. ಒಂದು ದುರ್ದೈವದ ವಿಷಯ ಏನೆಂದರೆ, ರೈತರು ಬೆಳೆಯುತಕ್ಕಂಥ ಪದಾರ್ಥಕ್ಕೆ ಇವತ್ತಿನದಿವಸ ಒಂದು ನ್ಯಾಯವಾದ ಬೆಲೆ ಸಿಕ್ಕುತ್ತಾ ಇಲ್ಲ. ಮತ್ತೆ ಅವರು ಕೊಂಡುಕೊಳ್ಳ ತಕ್ಕಂಥ ಪದಾರ್ಥಗಳಿಗೂ ಮತ್ತು ಉತ್ಪತ್ತಿ ಮಾಡತಕ್ಕಂಥ ಪದಾರ್ಥಗಳಿಗೂ ಬೆಲೆಗಳಲ್ಲಿ ಹೊಂದಾಣಿಕೆ ಇರಬೇಕು. ರೈತ ಉತ್ಪತ್ತಿ ಮಾಡತಕ್ಕಂಥ ಪದಾರ್ಥಗಳ ಬೆಲೆಗೆ ಮತ್ತು ಕೊಂಡುಕೊಳ್ಳತಕ್ಕಂಥ ಪದಾರ್ಥದ ಬೆಲೆಗೆ ಹೊಂದಾಣಿಕೆ ಇಲ್ಲದೇ ಹೋದರೆ ಜೀವನ ಏರುಪೇರಾಗುವುದಕ್ಕೆ ಅದೇ ಮುಖ್ಯ ಕಾರಣವೆಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಉದಾಹರಣೆಗೆ ಹೇಳುವುದಾದರೆ; ೩ ವರ್ಷಗಳ ಹಿಂದೆ ನೆಲವನ್ನು ಅಗೆಯತಕ್ಕ ಗುದ್ದಲಿ ನಾಲ್ಕೂವರೆ ಅಥವಾ ಐದು ರೂಪಾಯಿ ಇತ್ತು; ಇವತ್ತು ಅದೇ ಗುದ್ದಲಿ ೨೦-೨೨ ರೂಪಾಯಿ ಆಗಿದೆ. ರಾಗಿ ಕೆ.ಜಿ.ಗೆ ೮೦–೯೦ ಪೈಸೆ ಇತ್ತು. ಇವತ್ತು ಒಂದು ರೂಪಾಯಿ ಇಪ್ಪತ್ತು ಪೈಸೆ ಆಗಿದೆ. ಇಷ್ಟು ಅಂತರದಲ್ಲಿ ಇಷ್ಟು ವ್ಯತ್ಯಾಸವಾಗಿದೆ. ನಾನು ಮೊನ್ನೆ ಸಿಲೋನ್‌ಗೆ ಹೋಗಿದ್ದೆ. ಅಲ್ಲಿ ಜಪಾನ್ ಮತ್ತು ಚೈನಾ ದೇಶದ ಕೊಲಾಬರೇಷನ್‌ವುಳ್ಳ ನೂರಾರು ಇಂಡಸ್ಟ್ರೀಸನ್ನು ಸ್ಟಾರ್ಟ್ ಮಾಡಿದ್ದಾರೆ. ಬಹುಶಃ ನಾವು ಅವರ ಜೀವನಮಟ್ಟಕ್ಕೆ ಹೋಗಬೇಕಾದರೆ ಇನ್ನೂ ೨೦ ವರ್ಷಗಳು ಭಾರತ ದೇಶಕ್ಕೆ ಬೇಕಾಗುತ್ತದೆ. ಅವರು ಸ್ಥಳೀಯ ಫ್ಯಾಕ್ಟರಿಗಳವರಿಗೆ ಅನುಮತಿ ಕೊಟ್ಟು ಶುರುಮಾಡಿ ಎಂದು ಹೇಳಿದ್ದಾರೆ. ಅವರಿಗೆ ಎಲ್ಲಾ ರೀತಿಯ ಪ್ರೊಟೆಕ್ಷನ್ ಕೊಟ್ಟಿದ್ದಾರೆ. ಹಾಗೆಯೇ ಹೊರದೇಶಗಳಿಂದ ಕಾಂಪಿಟೇಟೀವ್ ರೇಟ್‌ನಲ್ಲಿ ಪದಾರ್ಥಗಳು ಬರುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದಾರೆ. ಅಲ್ಲಿ ಹೋಂಡಾ ಮೋಟಾರ್ ಸೈಕಲ್ ೬,೦೦೦ ರೂಪಾಯಿ, ಸೋನಿ ಕ್ಯಾಸೆಟ್ಸ್ ೧೦ ರೂಪಾಯಿ, ಎಷ್ಟು ಬೇಕಾದರೂ ತೆಗೆದುಕೊಳ್ಳಬಹುದು. ಕೆಲವು ಐಟಂಗಳು ಇಲ್ಲಿ ಎಷ್ಟು ಕೊಟ್ಟರೂ ಸಿಕ್ಕುವುದಿಲ್ಲ. ನಮ್ಮ ದೇಶದಲ್ಲಿ ಕೆಲವೇ ಜನ ಅಂದರೆ ಟಾಟಾ, ಬಿರ್ಲಾರವರು ಕೋಟಿ ಕೋಟಿ ದುಡ್ಡನ್ನು ಹಾಕಿ ಮಂತ್ರ ಮಾಡಿದ್ದಾರೆ. ಪ್ರತಿವರ್ಷ ರೇಟು ಜಾಸ್ತಿ ಮಾಡುತ್ತಿದ್ದಾರೆ. ನಾನು ಆರೇಳು ವರ್ಷಗಳ ಹಿಂದೆ ಮೈಸೂರಿನ ಜಾವಾ ಮೋಟರ್ ಬೈಕನ್ನು ಬುಕ್ ಮಾಡಿದೆ. ಆಗ ಅದು ೩,೨೦೦ ರೂಪಾಯಿಗಳಿತ್ತು; ಇವತ್ತು ೧೨ ಸಾವಿರ ರೂಪಾಯಿಗಳಾಗಿದೆ. ಒಬ್ಬರಿಗೆ ಲೈಸನ್ಸ್ ಕೊಡುವುದು, ಅವರು ಪ್ರತಿ ವರ್ಷ ರೇಟನ್ನು ಏರಿಸುತ್ತಾ ಹೋದರೂ ಇವರು ಕೇಳುವುದಿಲ್ಲ.

ಫ್ಯಾಕ್ಟರಿಯಲ್ಲಿ ಉತ್ಪತ್ತಿ ಆಗತಕ್ಕ ಪದಾರ್ಥಗಳಿಗೆ ಕಂಟ್ರೋಲ್ ಇಲ್ಲ. ಲೈಸನ್ಸ್ ಕೊಟ್ಟು ಎಲ್ಲಾ ವ್ಯವಸ್ಥೆ ಮಾಡಿ ಹೊರದೇಶದಿಂದ ಪದಾರ್ಥಗಳು ಬರುವುದಕ್ಕೆ ಬಿಟ್ಟರೆ ಇವರಿಗೆ ಹೆದರಿಕೆ ಇರುತ್ತಿತ್ತು. ಕ್ವಾಲಿಟಿ ಇರಬೇಕು. ರೇಟೂ ಇರಬೇಕು ಎಂದು ಹೇಳಬೇಕು. ದೇಶದಲ್ಲಿ ಕೈಗಾರಿಕೆಗಳು ಬರಬೇಕು ಎಂಬ ತತ್ವವನ್ನಿಟ್ಟುಕೊಂಡು ಹೊರ ದೇಶದಿಂದ ಬರತಕ್ಕ ಮಾಲು ಬಾರದೆ ರಾಷ್ಟ್ರದಲ್ಲಿ ಉತ್ಪತ್ತಿಯಾಗತಕ್ಕ ಮಾಲಿಗೆ ಕಂಟ್ರೋಲ್ ಇಟ್ಟುಕೊಳ್ಳದೆ ಒಂದಕ್ಕೆ ನಾಲ್ಕರಷ್ಟು, ಐದರಷ್ಟು ಬೆಲೆಯನ್ನು ಹೆಚ್ಚಿಸುವುದಕ್ಕೆ ಕೇಂದ್ರ ಸರ್ಕಾರದವರು ಬಿಟ್ಟಿದ್ದಾರೆ. ಆದ್ದರಿಂದ ಉದ್ಭವಿಸಿದಂಥ ಪರಿಸ್ಥಿತಿ ಇದು, ಇದು ನಿಜವಾಗಿಯೂ ರೈತರ ಸಮಸ್ಯೆ ಎಂದು ಹೇಳಿದರೂ ತಪ್ಪಾಗಲಾರದು. ಈಗ ಕೇಂದ್ರಸರ್ಕಾರದ ಕೆಲವು ಎಂಪ್ಲಾಯೀಸ್ ಇದ್ದಾರೆ. ನಾನು ಮೊನ್ನೆ ನೋಡಿದೆ. ಒಬ್ಬ ೩ನೇ ದರ್ಜೆ ಗುಮಾಸ್ತನಿಗೆ ತಿಂಗಳಿಗೆ ೩೪೧೫ ರೂಪಾಯಿ ಬರುತ್ತದೆ. ಅವರು ಒಂದು ಪಾಯಿಂಟ್ ಇಟ್ಟುಕೊಂಡಿದ್ದಾರೆ. ಜೀವನಮಟ್ಟ ಆ ಪಾಯಿಂಟಿಗೆ ಏರಿಬಿಟ್ಟರೆ ಡಿ.ಎ. ಏರುತ್ತಾ ಹೋಗುತ್ತದೆ, ಹೇಳುವವರಿಲ್ಲ, ಕೇಳುವವರಿಲ್ಲ. ಆದರೂ ಅವರು ಸತ್ಯಾಗ್ರಹ ಮಾಡುತ್ತಾರೆ. ನಮ್ಮಲ್ಲಿ ೧೦೦ಕ್ಕೆ ೫೦ ಭಾಗ ಪಾವರ್ಟಿಲೈನ್ ಕೆಳಗೆ ಇದ್ದಾರೆ. ೧೦೦ಕ್ಕೆ ೫೦ ಜನ ದುಡಿಯುವವರಿಲ್ಲ, ಯೂನಿಯನ್ ಇಲ್ಲ, ಏನೂ ಇಲ್ಲ. ಲೈಫ್ ಇನ್ಶೂರೆನ್ಸ್ ಕಾರ್ಪೊರೇಷನ್‌ನಲ್ಲಿ ಪ್ಯೂನ್ ಸಾವಿರಾರು ರೂಪಾಯಿ ಸಂಬಳ ಪಡೆದುಕೊಂಡರೂ ಸ್ಟ್ರೈಕ್ ಮಾಡಿ ದೇಶದ ಮೇಲೆ, ಸರ್ಕಾರದ ಮೇಲೆ ಒತ್ತಡ ತರುತ್ತಾರೆ. ಈ ದೇಶದಲ್ಲಿ ನ್ಯಾಯ ಎಷ್ಟರಮಟ್ಟಿಗೆ ಇದೆ ನೋಡಿ. ಹುಚ್ಚು ಮುಂಡೆ ಮದುವೆಯಲ್ಲಿ ಉಂಡವನೇ ಜಾಣ ಎನ್ನುವ ವ್ಯವಹಾರ ನಡೆಯುತ್ತಾ ಇದೆ. ನಾವು ಕಠಿಣವಾಗಿ ಹೇಳುತ್ತೇವೆ. ಕೇಂದ್ರಸರ್ಕಾರದವರು ಕೆಲವರನ್ನೇ ಬೆಳೆಯುವುದಕ್ಕೆ ಬಿಟ್ಟಿದ್ದಾರೆ, ಅವರು ಮೇಲಕ್ಕೆ ಹೋಗಲಿ ಎಂದು ಬೆಳೆಸುತ್ತಾ ಇದ್ದಾರೆ. ೧೦ ಜನ ದೊಡ್ಡ ದೊಡ್ಡ ಕೈಗಾರಿಕೋದ್ಯಮಗಳನ್ನು ಬೆಳೆಸಿ ದೇಶಕ್ಕೆ ಮಾಡಬಾರದ ದ್ರೋಹ ಮಾಡಿ ದೇಶವನ್ನು ಈ ಸಂಕಷ್ಟಗಳಿಗೆ ಗುರಿ ಮಾಡಿರುವುದೇ ಇದಕ್ಕೆ ಕಾರಣ ಎಂದು ಹೇಳಿದರೂ ತಪ್ಪಾಗಲಾರದು. ಆದುದರಿಂದ ರಾಜ್ಯಸರ್ಕಾರ ಕೇಂದ್ರಸರ್ಕಾರವನ್ನು ಒತ್ತಾಯ ಮಾಡಬೇಕು. ದೊಡ್ಡ ದೊಡ್ಡ ಫ್ಯಾಕ್ಟರಿಗಳಲ್ಲಿ ಉತ್ಪತ್ತಿಯಾಗತಕ್ಕ ಮಾಲುಗಳ ಬೆಲೆಗಳನ್ನು ಹತೋಟಿಗೆ ತರಬೇಕು, ಮಿತಿಮೀರಿ ಏರಿಸುವುದಕ್ಕೆ ಅವಕಾಶ ಕೊಡಬಾರದು. ಹೊರದೇಶದಿಂದ ಅದೇ ಕ್ವಾಲಿಟಿ ಪದಾರ್ಥಗಳು ಬರುವುದಕ್ಕೆ ಅಲೋ ಮಾಡಬಾರದು. ನ್ಯಾಯವಾದ ರೇಟಿಗೆ ಮಾರಿ ಎಂದು ಹೇಳಬೇಕು; ಇಲ್ಲದೇಹೋದರೆ ಹೊರದೇಶದಿಂದ ಪದಾರ್ಥಗಳು ಬರುವುದಕ್ಕೆ ಅವಕಾಶ ಮಾಡಬೇಕು. ಹೀಗೆ ಪದಾರ್ಥಗಳು ಬಂದಾಗ ಕಾಂಪಿಟೀಷನ್ ಬರುತ್ತದೆ. ಇಲ್ಲಿರತಕ್ಕವರೂ ನೇಂ ಬರುತ್ತದೆ ಎಂದು ಕ್ವಾಲಿಟಿಯಾಗಿ ಮಾಡುತ್ತಾರೆ, ಜನ ಕೊಂಡುಕೊಳ್ಳದೇಹೋದರೆ ರೀಸನಬಲ್ ರೇಟ್ ಇಡುತ್ತಾರೆ. ಇಲ್ಲದೇಹೋದರೆ ಯಾರ್ಯಾರು ಎಷ್ಟೆಷ್ಟು ಬೇಕಾದರೂ ದರಗಳನ್ನು ಹೆಚ್ಚಿಸಬಹುದು, ಹೇಳುವವರಿಲ್ಲ, ಕೇಳುವವರಿಲ್ಲ. ಅವರು ಹೆಚ್ಚಿಸಿಕೊಂಡು ಹೋದರೆ ರೈತರ ತಪ್ಪೇನು. ೫ ರೂಪಾಯಿಗೆ ಸಿಗುತ್ತಿದ್ದ ಗುದ್ದಲಿ ಇವತ್ತು ೨೫ ರೂಪಾಯಿ ಏಕೆ ಮಾಡಬಾರದು. ಈ ದೃಷ್ಟಿಯಿಂದ ಇವರು ಏನು ಯೂನಿಯನ್ ಮಾಡಿಕೊಂಡಿದ್ದಾರೆ, ಇದನ್ನು ಖಂಡಿತವಾಗಿಯೂ ಸ್ವಾಗತಿಸುತ್ತೇನೆ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ರೈತರ ಕಡೆ ಗಮನಹರಿಸಬೇಕು. ರೈತರು ಕೊಂಡುಕೊಳ್ಳತಕ್ಕ ಪದಾರ್ಥಗಳ ದರಕ್ಕೂ ಮತ್ತು ಮಾರಾಟ ಮಾಡತಕ್ಕ ಪದಾರ್ಥಗಳ ದರಕ್ಕೂ ಹೊಂದಾಣಿಕೆ ತರಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಬರೀ ವ್ಯವಸಾಯದಿಂದಲೇ ಈ ಸಮಸ್ಯೆ ಪರಿಹಾರವಾಗುವುದಿಲ್ಲ. ದೇಶ ಸಂಪದ್ಭರಿತವಾಗಬೇಕಾದರೆ ಕೈಗಾರಿಕೆ ಮುಂದುವರಿಯಬೇಕು. ನೆದರ್‌ಲೆಂಡ್ ಸರ್ಕಾರದಿಂದ ರಾಜ್ಯಸರ್ಕಾರ ಸುಮಾರು ೧೮ ಕೋಟಿ ರೂಪಾಯಿಗಳ ಸಹಾಯ ಧನವನ್ನು ಪಡೆದು ಎಲ್ಲೆಲ್ಲಿ ಬ್ಯಾಕ್ ವರ್ಡ್ ತಾಲ್ಲೂಕುಗಳಿವೆ ಅಲ್ಲಿ ಇಂಡಸ್ಟ್ರಿಯಲ್ ಶೆಡ್‌ಗಳನ್ನು ಮತ್ತು ಕುಶಲಕರ್ಮಿಗಳಿಗೆ ವಾಸಕ್ಕೆ ಮನೆಗಳನ್ನು ಕಟ್ಟುವಂಥ ಒಂದು ಯೋಜನೆಯನ್ನು ಸರ್ಕಾರ ತೆಗೆದುಕೊಂಡಿದೆ. ಇದು ಬಹಳ ಮೆಚ್ಚತಕ್ಕ ಕಾರ್ಯಕ್ರಮ ಎಂದು ಹೇಳಿದರೂ ತಪ್ಪಾಗಲಾರದು. ಈ ದೇಶದಲ್ಲಿರತಕ್ಕ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಒದಗಿಸಿ, ಈ ದೇಶ ಸಂಪದ್ಭರಿತ ಆಗಬೇಕಾದರೆ ೧೦೦ಕ್ಕೆ ೮೦ ಭಾಗ ಇರತಕ್ಕ ಜನರನ್ನು, ನಿರುದ್ಯೋಗಿಗಳನ್ನು ಈ ಕೈಗಾರಿಕೆಯಲ್ಲಿ ಹಚ್ಚಬೇಕಾದುದು ಬಹಳ ಮುಖ್ಯವಾದುದು. ಈ ದಿಶೆಯಲ್ಲಿ ನಮ್ಮ ರಾಜ್ಯಸರ್ಕಾರ ಉತ್ತಮ ಕೆಲಸ ಮಾಡುತ್ತಿದೆ ಎಂದು ಹೇಳಿದರೂ ಕೂಡ ತಪ್ಪಾಗಲಾರದು. ಹಾಗೇನೇ ರಾಜ್ಯಸರ್ಕಾರದ ವಶದಲ್ಲಿರತಕ್ಕ ಅನೇಕ ಕೈಗಾರಿಕೆಗಳನ್ನು ವಿಸ್ತರಣೆ ಮಾಡತಕ್ಕ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ. ವರ್ಷಕ್ಕೆ ೬೦೦೦ ಟನ್ ಉತ್ಪಾದನೆ ಮಾಡುತ್ತಾ ಇದ್ದಂಥ ಸಾಬೂನು ಕಾರ್ಖಾನೆಯನ್ನು ವಿಸ್ತರಣೆ ಮಾಡಿ ಸುಮಾರು ೨೪,೦೦೦ ಟನ್ ಸಾಬೂನನ್ನು ಉತ್ಪಾದನೆ ಮಾಡ

ತಕ್ಕಂಥ ವ್ಯವಸ್ಥೆ ಮಾಡಿದ್ದಾರೆ. ಇದರಿಂದ ಅನೇಕ ಜನ ನಿರುದ್ಯೋಗಿಗಳಿಗೆ ಕೆಲಸ ಸಿಗುತ್ತದೆ ; ಟರ್ನ್ ಓವರ್ ಜಾಸ್ತಿಯಾಗುತ್ತದೆ, ಸರ್ಕಾರಕ್ಕೆ ತೆರಿಗೆ ವಗೈರೆ ಬರುವುದರಿಂದ ಉತ್ತಮವಾಗುತ್ತದೆ ಎಂದು ತಿಳಿಸುತ್ತೇನೆ.

ಇನ್ನು ವಿಜಯನಗರ ಸ್ಟೀಲ್ ಪ್ಲಾಂಟ್ ಬಗ್ಗೆ ವಿರೋಧಪಕ್ಷದವರು ಮಾತನಾಡಿದರು. ವಿಜಯನಗರ ಸ್ಟೀಲ್ ಪ್ಲಾಂಟ್ ಕರ್ನಾಟಕಕ್ಕೆ ಬರಬೇಕಾದರೆ ಈ ಟೈಮಿನಲ್ಲಿ, ಈ ಸರ್ಕಾರ ಇದ್ದಾಗ ಬರಬೇಕು, ಈಗ ಬರದೇಹೋದರೆ ಮುಂದೆ ಎಂದೂ ಬರುವುದಿಲ್ಲ ಎನ್ನುವ ಮಾತನ್ನು ಈ ಸಂಪರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಜನತಾ ಸರ್ಕಾರ ಕೂಡ ಕೇಂದ್ರದಲ್ಲಿತ್ತು. ಜನತಾ ಸರ್ಕಾರ ೨ ವರ್ಷಗಳ ಕಾಲ ಅಧಿಕಾರದಲ್ಲಿದ್ದಾಗ ಏನು ಮಾಡಿತು ? ಅವರು ವಿಜಯನಗರ ಸ್ಟೀಲ್ ಪ್ಲಾಂಟ್ ಬಗ್ಗೆ ಏನೂ ಮಾಡಲಿಲ್ಲ, ಅವರ ಪ್ರಯತ್ನವೆಲ್ಲಾ ಸೊನ್ನೆ. ಆದರೆ ಈಗ ಸುದೈವದಿಂದ ವಿಜಯನಗರ ಉಕ್ಕಿನ ಕಾರ್ಖಾನೆ ನಮ್ಮ ರಾಜ್ಯಕ್ಕೆ ಆದಷ್ಟು ಜಾಗ್ರತೆ ಬರುತ್ತದೆ ಎಂದು ದೃಢವಿಶ್ವಾಸದಿಂದ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಮಂಗಳೂರಿನಲ್ಲಿ ಕೈಗಾರಿಕೆಗಳು ಸ್ಥಾಪನೆಯಾಗುವಂಥ ಸೂಚನೆಗಳು ಕಂಡುಬಂದಿದೆ. ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರದ ಮೇಲೆ ವರ್ಚಸ್ಸು ಬೀರಿ ಮಂಗಳೂರಿನಲ್ಲಿ ಪೆಟ್ರೋ ಕೆಮಿಕಲ್ಸ್ ಕಾಂಪ್ಲೆಕ್ಸನ್ನು ತರುವುದಕ್ಕೆ ಪ್ರಯತ್ನ ಮಾಡಿದ್ದಾರೆ ; ಅದು ಬಂದೇ ಬರುತ್ತದೆ ಎನ್ನುವ ಮಾತನ್ನು ದೃಢವಾಗಿ ಹೇಳುತ್ತೇನೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಮಾನ್ಯ ಮುಖ್ಯ ಮಂತ್ರಿಗಳಿಗೆ ಹಾಗೂ ಪ್ರಧಾನ ಮಂತ್ರಿಗಳಿಗೆ ಇರತಕ್ಕ ಒಂದು ಬಾಂಧವ್ಯದ ಶಕ್ತಿಯ ಮೇಲೆ ಇದನ್ನು ಹೇಳುತ್ತಿದ್ದೇನೆ. ಆದ್ದರಿಂದ ರಾಜ್ಯಕ್ಕೆ ಕೈಗಾರಿಕೆಗಳು ಬಂದೇ ಬರುತ್ತವೆ ಎಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಹಾಗೇನೇ ರಾಜ್ಯದಲ್ಲಿ ನೀರಾವರಿ ಪ್ರದೇಶವನ್ನು ಹೆಚ್ಚಿಸಬೇಕು ಎಂದು ಪದೇ ಪದೇ ನಮ್ಮ ಕಡೆಯವರು ಹಾಗೂ ವಿರೋಧ ಪಕ್ಷದವರು ಹೇಳುತ್ತಿದ್ದಾರೆ, ೮೦ ಕೋಟಿ ರೂಪಾಯಿಗಳನ್ನು ರೈತರಿಗೆ ಪರಿಹಾರವಾಗಿ ಕೊಟ್ಟಿದ್ದರೂ ಕೂಡ ಈ ವರ್ಷದಲ್ಲಿ ದೇಶದಲ್ಲಿ ಬಹುಭಾಗ ಕ್ಷಾಮಢಾಮರಗಳು ಇದ್ದು ಹೆಚ್ಚಿನ ಹಣವನ್ನು ಕೊಟ್ಟು ಜನಗಳಿಗೆ ಕೆಲಸವನ್ನು ಒದಗಿಸುತ್ತಿದೆ. ಸರ್ಕಾರ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ರಾಜ್ಯದಲ್ಲಿ ನೀರಾವರಿ ಯೋಜನೆಗಳಿಗೆ ಆದ್ಯತೆಯನ್ನು ಕೊಟ್ಟಿರುವುದು ಮೆಚ್ಚತಕ್ಕ ವಿಚಾರ. ರಾಜ್ಯದಲ್ಲಿ ಹೆಚ್ಚು ಕೈಗಾರಿಕೆಗಳು ಬೆಳೆಯುವುದಕ್ಕೆ ವ್ಯವಸ್ಥೆ ಮಾಡಿದೆ. ಎಕ್ಸ್‌ಪಾನ್‌ಷನ್ ಸ್ಕೀಮುಗಳನ್ನು ರಾಜ್ಯ ಸರ್ಕಾರ ಹಾಕಿ ಆ ಕಾರ್ಯಕ್ರಮಗಳನ್ನು ತೆಗೆದುಕೊಂಡಿರುವುದರ ಜೊತೆಗೆ ಕೇಂದ್ರ ಸರ್ಕಾರದಿಂದಲೇ ಹೆಚ್ಚು ಹಣವನ್ನು ಪಡೆಯುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡುತ್ತಾ ಇದೆ. ಇದು ಒಂದು ಒಳ್ಳೆಯ ಶುಭಸೂಚನೆ ಎಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

೫-೩೦ : ಪಿ. ಎಂ.

ಇನ್ನು ಕಾವೇರಿ ಜಲಾನಯನ ವಿಚಾರದಲ್ಲಿ ವಿಪುಲವಾದ ಚರ್ಚೆಯಾಗಿದೆ, ಪತ್ರಿಕೆಯಲ್ಲೂ ಬಂದಿದೆ. ಮೊದಲಿನಿಂದಲೂ ಕರ್ನಾಟಕ ರಾಜ್ಯಕ್ಕೆ ಕಾವೇರಿ ಜಲಾನಯನದಿಂದ ಲಾಭವಾಗದೆ ತೊಂದರೆಯಾಗಿದೆ, ಅನ್ಯಾಯವಾಗಿದೆ ಎನ್ನುವ ಮಾತನ್ನು ಕೇಳುತ್ತಿದ್ದೇವೆ. ಆದರೆ ಶ್ರೀಮಾನ್ ಗುಂಡೂರಾಯರು ಅಧಿಕಾರಕ್ಕೆ ಬಂದ ಮೇಲೆ ಶ್ರೀಮಾನ್ ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿದ್ದಾರೆ, ಆ ಸಮಿತಿಯವರು ಇವತ್ತು ಕರ್ನಾಟಕ. ತಮಿಳು ನಾಡು, ಕೇರಳ ರಾಜ್ಯಗಳಲ್ಲಿ ಉಂಟಾಗಿರತಕ್ಕ ಭಿನ್ನಾಭಿಪ್ರಾಯಗಳನ್ನು ಕ್ರೋಢೀಕರಿಸಿ ೧೦ ಅಂಶಗಳ ಒಂದು ರೂಪುರೇಖೆಯನ್ನು ಕೊಟ್ಟಿದ್ದಾರೆ. ಅದನ್ನು ಕಾರ್ಯಗತ ಮಾಡಿದರೆ ಬಹುಶಃ ಅದರಿಂದ ನಮ್ಮ ಕರ್ನಾಟಕ ರಾಜ್ಯದಲ್ಲಿರತಕ್ಕ ಲಕ್ಷಾಂತರ ಎಕರೆ ಪ್ರದೇಶಕ್ಕೆ ನೀರು ದೊರೆತು ಬೆಂಗಾಡು ಆಗಿರತಕ್ಕಂಥ ಭೂಮಿ ಫಲಪ್ರದವಾಗುವುದಕ್ಕೆ ಅನುಕೂಲವಾಗುತ್ತದೆ. ಈ ವಿಚಾರದಲ್ಲೂ ಕೂಡ ಮಾನ್ಯ ಮುಖ್ಯ ಮಂತ್ರಿಗಳವರು ಅಭಿನಂದರ್ನಾಗಿದ್ದಾರೆ. ಹಾಗೆಯೇ ಗ್ರಾಮಾಂತರ ಪ್ರದೇಶಗಳಲ್ಲಿ ಆಗಲಿ. ಇಲ್ಲವೇ ಟೌನ್‌ಗಳಲ್ಲಿ ಆಗಲೀ ಇವತ್ತು ಒಲೆಗೆ ಉಪಯೋಗಿಸತಕ್ಕ ಸೌದೆಯ ಬೆಲೆ ೧೦ ಕೆ. ಜಿ. ಗೆ ಮೂರು ಅಥವಾ ಮೂರುವರೆ ರೂಪಾಯಿ ಆಗಿದೆ. ಇದರ ಬಗ್ಗೆ ನಾನು ಅನೇಕ ಸಂದರ್ಭಗಳಲ್ಲಿ ವಿರೋಧ ಪಕ್ಷದ ಸದಸ್ಯನಾಗಿದ್ದಾಗಲೂ ಕೂಡ ಅನೇಕ ಸಾರಿ ಪ್ರಸ್ತಾಪ ಮಾಡಿ ಹೇಳಿದ್ದೇನೆ. ಇದು ಬೃಹದಾಕಾರವಾದ ಸಮಸ್ಯೆಯಾಗಿ ಬೆಳೆಯುತ್ತಿದೆ. ಈ ಸೌದೆಗಾಗಿ ಏನಾದರೂ ಒಂದು ರೂಪುರೇಖೆಯನ್ನು ಕೊಟ್ಟು ವ್ಯವಸ್ಥೆ ಮಾಡದಿದ್ದರೆ ಮುಂದೆ ಇನ್ನೂ ಬರತಕ್ಕ ತೊಂದರೆಯನ್ನು ತಪ್ಪಿಸುವುದಕ್ಕೆ ಬಹಳ ಕಷ್ಟವಾಗುತ್ತದೆಂದು ಹೇಳಬಯಸುತ್ತೇನೆ. ಇವತ್ತು ಏನಾಗಿದೆ ಎಂದರೆ, ಪಶ್ಚಿಮ ಘಟ್ಟದಲ್ಲಿರತಕ್ಕ ಕಾಡನ್ನೆಲ್ಲಾ ಯದ್ವಾತದ್ವಾ ಕಡಿದು ಹಾಕಿರುವುದರಿಂದ

ಇವತ್ತು ಮಲೆನಾಡಿನಲ್ಲಿ ೫೦-೬೦ ಇಂಚು ಮಳೆ ಆಗತಕ್ಕಂಥಾದ್ದು ಕೇವಲ ೧೦-೧೫ ಇಂಚಿಗೆ ಇಳಿದಿದೆ. ಆದುದರಿಂದ ಇವತ್ತು ಎಲ್ಲೆಲ್ಲಿ ಸೌದೆಯ ಅವಶ್ಯಕತೆ ಹೆಚ್ಚಾಗಿದೆಯೋ ಅಂಥಾ ಕಡೆಗಳಲ್ಲೆಲ್ಲಾ ೧೦ ಸಾವಿರ ಹೆಕ್ಟಾರ್ ಕಾಡನ್ನು ಬೆಳೆಸುವುದಕೋಸ್ಕರವಾಗಿ ಯೋಜನೆಯನ್ನು ಹಾಕಿಕೊಂಡಿದ್ದಾರೆ, ಬಹುಶಃ ಇದಕ್ಕಿಂತಲೂ ಉತ್ತಮವಾದ ಯೋಜನೆ ಬೇರೊಂದಿಲ್ಲ ಈ ಕೆಲಸವನ್ನು ೦-೨೦ ವರ್ಷಗಳ ಹಿಂದೆಯೇ ಹಾಕಿಕೊಂಡಿದ್ದರೆ ಬಹುಶಃ ಇವತ್ತು ಏನು ಬರಗಾಲಕ್ಕಾಗಿ ನಾವು ವರ್ಷೇ ವರ್ಷೇ ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ, ಅದು ತಪ್ಪುತ್ತಿತ್ತು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಬಯೋ ಗ್ಯಾಸ್ ಪ್ಲಾಂಟ್‌ಗಳ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಉಲ್ಲೇಖಿವಿದೆ. ಇದಕ್ಕೆ ಸಂಬಂಧಪಟ್ಟ ಮಂತ್ರಿಗಳವರಿಗೂ ಕಾಗದ ಬರದಿದ್ದೇನೆ, ವಿಧಾನ ಸಭೆಯಲ್ಲೂ ಕೂಡ ಪ್ರಶ್ನೆಯನ್ನು ಹಾಕಿದ್ದೇನೆ. ಇದಕ್ಕಾಗಿ ಸರ್ಕಾರದವರು ಸಹಾಯಧನವನ್ನು ಕೊಡುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ –೧೦ ದನಗಳನ್ನು ಇಟ್ಟುಕೊಂಡಿರುವವರು ಈ ಗೋಬರ್ ಗ್ಯಾಸ್ ಪ್ಲಾಂಟ್‌ನ್ನು ಇಟ್ಟು ಕೊಳ್ಳಬಹುದಾಗಿದೆ. ಇದಕ್ಕೆ ೧೦-೧ ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಪುನಃ ೩ ವರ್ಷಕ್ಕೊಂದು ಸಾರಿ ಆ ಡ್ರಮ್ಮಿಗೆ ಬಣ್ಣ ಹೊಡೆಯುವುದಕ್ಕೆ ಖರ್ಚು ಮಾಡಬೇಕಾಗುತ್ತದೆ. ಆದರೆ ನಮ್ಮ ಕೃಷಿ ವಿಶ್ವವಿದ್ಯಾನಿಲಯದವರು ಗೋಬರ್ ಗ್ಯಾಸ್ ಅನಿಲವನ್ನು ತಯಾರಿಸಲು ಜಪಾನ್ ಟೈಪ್ ಮಾದರಿಯಲ್ಲಿ ಕೇವಲ ೩೩½ ಸಾವಿರ ರೂಪಾಯಿಗಳ ಖರ್ಚಿನಲ್ಲಿ ತಯಾರಾಗುವಂಥಾದ್ದನ್ನು ಕಂಡು ಹಿಡಿದಿದ್ದಾರೆ. ಅದು ಕಾಂಕ್ರೀಟ್ ಒಳಗಡೆ ಮಿಷನ್ ಬರುವುದರಿಂದ ೩ ವರ್ಷಕೊಂದು ಸಾರಿ ಡ್ರಮ್ಮಿಗೆ ಬಣ್ಣ ಹೊಡೆಯುವ ಹಾಗಿಲ್ಲ. ಇಂಥಾ ಉಪಯುಕ್ತವಾದುದಕ್ಕೆ ಯಾರಿಗೋ ಹೊಟ್ಟೆ ನೋವಿಗೋಸ್ಕರವಾಗಿ ಸೆಕ್ರಟರಿಯೇಟ್‌ನಲ್ಲಿರತಕ್ಕವರು ಇದಕ್ಕೆ ಸಹಾಯಧನವನ್ನು ಕೊಡುತ್ತಿಲ್ಲ, ಇಂಥಾ ಕಡಿಮೆ ದರದಲ್ಲಿ ದೊರೆಯುತಕ್ಕಂಥಾದಕ್ಕೆ ಏತಕ್ಕೆ ಸರ್ಕಾರದವರು ಸಹಾಯಧನವನ್ನು ಕೊಡಬಾರದು. ಅಂಥಾ ಹೊಟ್ಟೆ ನೋವು ಇರತಕ್ಕಂಥ ಅಧಿಕಾರಿಗಳನ್ನು ಮೊದಲು ಕಿತ್ತು ಹಾಕಿ, ಈ ರೀತಿ ಕಡಿಮೆ ದರದಲ್ಲಿ ಜನಗಳಿಗೆ ಸಿಗುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಸರ್ಕಾರದವರಲ್ಲಿ ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

ಉಪಾಧ್ಯಕ್ಷರೇ, ಇನ್ನೊಂದು ಮುಖ್ಯವಾದ ವಿಚಾರವೇನೆಂದರೆ, ಈ ಸ್ಟೈಫಂಡರಿ ಸ್ಕೀಂಗಾಗಿ ಸರ್ಕಾರದವರು ೧೫-೨೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಯುವಕರಿಗೆ ತಿಂಗಳಿಗೆ ೧೫೦ ರೂಪಾಯಿಗಳನ್ನು ಮೊದಲು ಕೊಡುತ್ತಿದ್ದರು, ಈಗ ೨೦೦ ರೂಪಾಯಿಗಳನ್ನು ಕೊಡುವುದಕ್ಕೆ ಶುರು ಮಾಡಿದ್ದಾರೆ. ೧೫,೨೦ ಸಾವಿರ ಜನಕ್ಕೆ ಈ ರೀತಿ ಕೊಡುತ್ತಿದ್ದಾರೆ. ಈ ರೀತಿ ೨೦೦ ರೂಪಾಯಿಗಳನ್ನು ಕೊಡುವುದಕ್ಕೆ ಶುರು ಮಾಡಿದ ಮೇಲೆ ಹುಡುಗರು ಊರು ಬಿಟ್ಟರು. ಕೊನೆಯ ಪಕ್ಷ ಓದುತ್ತಿರುವಾಗ ದುಡ್ಡಿಗೋಸ್ಕರವಾದರೂ ಹಳ್ಳಿಗಳಿಗೆ ಹುಡುಗರು ಹೋಗುತ್ತಿದ್ದರು. ದುಡ್ಡು ಸಿಕ್ಕಿದ ಮೇಲೆ ತಿರುಗಿ ಸಹ ನೋಡುತ್ತಿರಲಿಲ್ಲ ಇವತ್ತು ನೀವು ೨೦೦ ರೂಪಾಯಿಗಳನ್ನು ಕೊಡುವುದಕ್ಕೆ ಶುರು ಮಾಡಿದ ಮೇಲೆ ಯಾವ ಯುವಕರೂ ಸಹ ಇವತ್ತಿನ ದಿವಸ ಹಳ್ಳಿಗಳಲ್ಲಿ ಹೊಲದ ಕಡೆಗೆ ಹೋಗು ಎಂದರೆ ಹೋಗುವುದಕ್ಕೆ ಸಿದ್ಧರಿಲ್ಲ. ಆದುದಂದ ಇವತ್ತಿನ ದಿವಸ ನೀವು ಈ ಯೋಜನೆಯಿಂದ ಏನು ೨೦೦ ರೂಪಾಯಿಗಳನ್ನು ಕೊಡುತ್ತಿದ್ದೀರಿ ಆ ಹಣ ಇವತ್ತು ಸರಿಯಾಗಿ ಸದ್ವಿನಿಯೋಗವಾಗದೇ ದುರುಪಯೋಗವಾಗುತ್ತಿದೆಯೆಂದು ಹೇಳಿದರೆ ತಪ್ಪಾಗಲಾರದು. ಈ ರೀತಿ ೨೦೦ ರೂಪಾಯಿಗಳನ್ನು ಕೊಟ್ಟು ಹುಡುಗರು ಊರು ಬಿಟ್ಟು ಹೋಗುವಂತೆ ಮಾಡಿದ್ದೀರಿ, ಅದೂ ಅಲ್ಲದೆ ೧ ವರ್ಷ ೨ ವರ್ಷ ಹಣವನ್ನು ಕೊಟ್ಟು ನಿಲ್ಲಿಸಿ ಬಿಟ್ಟರೆ ಮುಂದೆ ಅವರು ಯಾವ ಕೆಲಸಕ್ಕೂ ಬಾರದ ಹಾಗೆ ನಿಷ್ಪ್ರಯೋಜಕರಾಗಿ ಬಿಡುತ್ತಿದ್ದಾರೆ. ಆದುದರಿಂದ ತಾವು ಈ ಪದ್ಧತಿಯನ್ನು ತಪ್ಪಿಸಿ ಇದರ ಬದಲು ೧೦ ಸಾವಿರ ರೂಪಾಯಿಗಳನ್ನು ಸಾಲವಾಗಿ ಕೊಡಿ ಅದಕ್ಕೆ ಬೇಕಾದರೆ ಸರ್ಕಾರದವರೇ ಗ್ಯಾರಂಟಿಯಾಗಿ ನಿಂತು ಆ ಸಾಲಕ್ಕೆ ಬೇಕಾದರೆ ಬಡ್ಡಿಯನ್ನು ಮಾಫಿ ಮಾಡಿ, ಅದರಿಂದ ಅವರು ಯಾವುದಾದರೂ ಸಣ್ಣ ಕೈಗಾರಿಕೆಯನ್ನೋ, ಇಲ್ಲವೇ ಮನೆಯಲ್ಲಿ ೪ ಹಸುಗಳನ್ನು ಕಟ್ಟಿಕೊಂಡು ಡೈರಿ ಉದ್ದಿಮೆಯನ್ನೋ ಪ್ರಾರಂಭ ಮಾಡಲಿ ಇಲ್ಲವೇ ಇವತ್ತು ಮಲ್ಬರಿ ಬಹಳ ಚೆನ್ನಾಗಿ ಎಲ್ಲಾ ಕಡೆಯೂ ಬರುತ್ತಿರುವುದರಿಂದ ಕೊನೆಯ ಪಕ್ಷ ಒಂದು ಸಿಲ್ಕ್ ರೀಲಿಂಗ್‌ನಾದರೂ ಇಟ್ಟುಕೊಳ್ಳಲಿ, ಇಲ್ಲವೇ ಬಹುಶಃ ಅವನಿಗೇನಾದರೂ ೨-೩ ಎಕರೆ ಜಮೀನು ಇದ್ದರೆ ಅವನು ಅದರಲ್ಲಿ ಬೋರ್ವೆಲ್ ಹಾಕಿಕೊಂಡು ವ್ಯವಸಾಯವನ್ನು ಮಾಡುವುದಕ್ಕೆ ವ್ಯವಸ್ಥೆ ಮಾಡಿ ಕೊಡಿ. ಇದರಿಂದ ದೇಶಕ್ಕೂ ಸಹ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಇಂಥಾ ಯುವಕರಿಂದ

ದೇಶಕ್ಕೂ ತಲೆ ನೋವಾಗುತ್ತದೆ. ಅವರ ಜೀವನವೂ ಸಹ ಹಾಳಾಗುತ್ತದೆ. ಆದುದರಿಂದ ಎಷ್ಟು ಜನಕ್ಕೆ ಪರ್ಮನೆಂಟ್ ಆಗಿ ಕೆಲಸ ಕೊಡುವುದಕ್ಕೆ ಸಾಧ್ಯವೋ ಅಷ್ಟು ಜನಕ್ಕೆ ಕೊಡಿ, ಮಿಕ್ಕವರಿಗೆ ಸರ್ಕಾರದವರೇ ಗ್ಯಾರಂಟಿ ನಿಂತು ಬ್ಯಾಂಕ್‌ಗಳ ಮೂಲಕ ಸುಲಭ ಬಡ್ಡಿದರದಲ್ಲಿ ಹಣವನ್ನು ಕೊಡಿಸಿ ಕೊಟ್ಟರೆ ನಮ್ಮ ದೇಶದಲ್ಲಿ ಕೈಗಾರಿಕೆಗಳೂ ಸಹ ಮುಂದುವರಿಯುವುದಕ್ಕೆ ಸಾಧ್ಯವಾಗುತ್ತದೆ. ಯಾವಾಗ ಯುವಕರು ಕೈಗಾರಿಕೆಗಳನ್ನು ತೆರೆಯಲು ಪ್ರಾರಂಭ ಮಾಡುತ್ತಾರೋ ಆಗ ಮುಂದಿನ ಪೀಳಿಗೆಯವರೂ ಸಹ ಇಂಥಾ ಹೊಸ ಹೊಸ ಉದ್ದಿಮೆಗಳನ್ನು ಪ್ರಾರಂಭಿಸಲು ಶುರು ಮಾಡುತ್ತಾರೆ. ಆದುದರಿಂದ ಇದರ ಕಡೆಗೆ ಸರ್ಕಾರದವರು ಹೆಚ್ಚಿನ ಗಮನವನ್ನು ಕೊಡಬೇಕೆಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಉಪಾಧ್ಯಕ್ಷರು.—ಆದಷ್ಟು ಬೇಗನೆ ಮುಗಿಸಿ ನಿಮ್ಮ ಟೈಮ್ ಆಗುತ್ತಾ ಬಂತು.

ಶ್ರೀ ಕೆ. ಎಚ್. ಹನುಮೇಗೌಡ.—ಮಾನ್ಯ ಉಪಾಧ್ಯಕ್ಷರೇ, ಕೊನೆಯದಾಗಿ ನಾನು ಸಲಹೆ ಮಾಡುವುದೇನೆಂದರೆ, ಇವತ್ತು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಡ್ಯಾಂಗಳನ್ನು ಕಟ್ಟುತ್ತಿದ್ದೇವೆ. ಡ್ಯಾಂನಿಂದ ನೀರು ಕೊಡುವುದರಿಂದ ವಾಟರ್ ರೇಟ್ ಹಾಕುವುದರಲ್ಲಿ ಅರ್ಥವಿದೆ. ಇವತ್ತಿನ ದಿವಸ ಡ್ಯಾಂಗಳನ್ನು ಕಟ್ಟಬೇಕಾದರೆ ಬೆಲೆಗಳೂ ಸಹ ಜಾಸ್ತಿಯಾಗಿದೆ. ಆದುದರಿಂದ ವಾಟರ್ ರೇಟ್ ಕೊಡಲಿ, ಬೇಡವೆಂದು ಹೇಳುವುದಿಲ್ಲ ಇವತ್ತು ಕಬ್ಬಿಗೂ ಸಹ ಬೆಲೆಯನ್ನು ಜಾಸ್ತಿ ಮಾಡಿದ್ದೀರಿ. ಆದರೆ ಇವತ್ತು ಕೆರೆಗಳಲ್ಲಿ ನೀರು ಇರುವುದಿಲ್ಲ. ೫೦ ಎಕರೆಗೂ ಸಹ ನೀರು ಬಿಟ್ಟಿರುವುದಿಲ್ಲ; ಆದರೆ ಅಂಥವರಿಗೂ ಸಹ ಇವತ್ತು ಅದೇ ರೇಟ್‌ನ್ನು ಫಿಕ್ಸ್ ಮಾಡಿದ್ದೀರಿ. ಮಳೆ ಬರದಿದ್ದರೆ ಒಂದು ಸಾರಿಯೂ ಸಹ ಭತ್ತವನ್ನು ಅವರು ತೆಗೆದುಕೊಂಡಿರುವುದಿಲ್ಲ. ಅಂಥವರಿಗೂ ಅದೇ ವಾಟರ್ ರೇಟ್‌ನ್ನು ಹಾಕಿದರೆ ಬಹಳ ತೊಂದರೆಯಾಗುವುದಿಲ್ಲವೇ ? ಆದುದರಿಂದ ಇದರ ಬಗ್ಗೆ ನಾನು ಹಿಂದೆ ೨-೩ ಸಲ ಪ್ರಸ್ತಾಪ ಮಾಡಿ ಹೇಳಿದ್ದೇನೆ ಮತ್ತು ಬೇರೆ ಕಡೆಗೂ ಕೂಡ ಈ ಫ್ಲಾಟ್ ರೇಟ್‌ನ್ನು ಹಾಕಿ ಎನ್ನುವ ಬಗ್ಗೆ ಸೂಚನೆ ಕೊಟ್ಟಿದ್ದೇನೆ. ಬಾಗಾಯತ್ತು ಜಮೀನಿದ್ದರೆ ೨೦-೩೦ ರೂಪಾಯಿ ಹಾಕಿ, ತರಿ ಇದ್ದರೆ ೧೫-೨೦ ರೂಪಾಯಿ ಹಾಕಿ. ಅದನ್ನು ಬಿಟ್ಟು ಇವತ್ತು ಒಂದು ಸಾರಿಯೂ ಸಹ ಮಳೆ ಬಾರದೆ ಬೆಳೆ ಬಾರದಿದ್ದರೂ ಸಹ ಅವನಿಂದ ವಸೂಲಿ ಮಾಡುತ್ತೇವೆಂದರೆ ಬಹಳ ತೊಂದರೆಯಾಗುತ್ತದೆ. ಇವತ್ತು ಏನಾದರೂ ಅವನಿಗೆ ಬೆಳೆ ಹೋಯಿತು ಎಂದರೆ ಅದನ್ನು ವೆರಿಫೈ ಮಾಡಲು ಅಸಿಸ್ಟೆಂಟ್ ಕಮಿಷನ್‌ರವರು ಮತ್ತು ಅವರ ಜೊತೆಗೆ ಎಗ್ಜಿಕ್ಯುಟೀವ್ ಇಂಜಿನಿಯರ್‌ರವರು ಹೋಗಿ ನೀರು ಕೆರೆಯಲ್ಲಿ ಇರಲಿಲ್ಲ, ಮಳೆ ಬಂದಿರಲಿಲ್ಲ, ವಾಟರ್ ಕೊಟ್ಟಿರಲಿಲ್ಲವೆಂದು ರಿಪೋರ್ಟ್ ಕೊಟ್ಟರೆ ಮಾತ್ರ ರೈತರಿಗೆ ಅನುಕೂಲವಾಗುತ್ತದೆ, ಇಲ್ಲದಿದ್ದರೆ ಇಲ್ಲ. ನಮ್ಮ ಹಾಸನ ಜಿಲ್ಲೆಯಲ್ಲಿ ಸುಮಾರು ೬-೭ ಸಾವಿರ ಕೆರೆಗಳಿವೆ. ಆದರೂ ಕೂಡ ಪತ್ರಿ ವರ್ಷ ಒಂದಲ್ಲ ಒಂದು ಭಾಗದಲ್ಲಿ ಮೂರನೇ ಒಂದು ಭಾಗದಷ್ಟು ಬೆಳೆ ಹಾಳಾಗುತ್ತಿದೆ. ಅದನ್ನೆಲ್ಲ ಎಕ್ಸಿಕ್ಯೂಟೀವ್ ಇಂಜಿನಿಯರ್ ಆಗಲೀ ಅಥವಾ ಅಸಿಸ್ಟೆಂಟ್ ಇಂಜಿನಿಯರ್ ಆಗಲಿ ಹೋಗಿ ನೋಡುವುದಕ್ಕೆ ಸಾಧ್ಯವಿಲ್ಲವೆ ? ಅವರು ಒಂದನ್ನೂ ಹೋಗಿ ನೋಡಿಲ್ಲ, ನೋಡುವುದಿಲ್ಲ. ಇವತ್ತಿನ ದಿವಸ ರೈತರ ಮಕ್ಕಳು ತಮ್ಮ ಹೆಂಡತಿಯ ತಾಳಿಯನ್ನು ಹರಾಜು ಹಾಕಿದರೂ ನೀರಿನ ದರವನ್ನು ಕಟ್ಟುವ ಸ್ಥಿತಿಯಲ್ಲಿ ಇಲ್ಲ. ರೈತರು ಕಂದಾಯ, ನೀರಿನ ದರ ಇತ್ಯಾದಿ ತೆರಿಗೆಗಳನ್ನು ಕಟ್ಟಲು ಸಾಧ್ಯವಾಗದೆ ತುಂಬಾ ಹಿಂಸೆ ಪಡುತ್ತಿದ್ದಾರೆ. ಸರ್ಕಾರ ಈ ಕಡೆ ಗಮನ ಹರಿಸಿ ರಿಯಾಯಿತಿ ನೀಡಿದರೆ ರೈತರಿಗೆ ಅಧಿಕಾರಿಗಳ ಕಾಟವಾದರೂ ತಪ್ಪುತ್ತದೆಂದು ಮಾನ್ಯ ಪಟೇಲರು ಹೇಳುತ್ತಿದ್ದರು. ಇವತ್ತು ಈ ಸಂಬಂಧವಾಗಿ ರೈತರ ಹೊಲ ಮನೆಗಳನ್ನು ಹರಾಜಾಗುತ್ತಿವೆ. ಮಾನ್ಯ ಗ್ರಾಮಾಭಿವೃದ್ಧಿ ಸಚಿವರಾದ ಶ್ರೀಮಾನ್ ಬೇಗಾನೆ ರಾಮಯ್ಯನವರೂ ಸಹ ಇದರ ಬಗ್ಗೆ ಆಲೋಚಿಸಿ ದಯಮಾಡಿ ಕ್ಯಾಬಿನೆಟ್‌ನಲ್ಲಿ ಹೇಳಬೇಕು; ಇಲ್ಲದಿದ್ದರೆ, ಹಾಸನದ ರೈತರಿಗೆ ಹೇಳಿಕೊಟ್ಟು ಹಿಡಿಸುತ್ತೇನೆ. ಈ ವಿಚಾರವನ್ನು ಬಹಳ ಸಂಕಟದಿಂದ ಹೇಳುತ್ತಿದ್ದೇನೆ. ದಯಮಾಡಿ ಇದನ್ನು ಮಾಡಿ. ಪಕ್ಕದಲ್ಲಿ ಕುಳಿತುಕೊಂಡು ಮಾತನಾಡುತ್ತಿದ್ದೀರಿ, ಗ್ರಾಮಾಭಿವೃದ್ಧಿ ಮಂತ್ರಿಗಳಾದ ನಿಮಗೆ ಈ ಬಗ್ಗೆ ಹೆಚ್ಚಿನ ಕಾಳಜಿ ಇರಬೇಕು ಮತ್ತು ಅಧಿಕಾರ ವಾಣಿ ಇರಬೇಕು, ಗ್ರಾಮಾಂತರ ಪ್ರದೇಶದ ರೈತರು ನ್ಯಾಯವಾಗಿ ಬಾಳಿ ಬದುಕ ಬೇಕಾದರೆ ಅವರ ಏಳಿಗೆ ಬಗ್ಗೆ ಹೆಚ್ಚಿನ ಗಮನ ಕೊಡತಕ್ಕ ವ್ಯವಸ್ಥೆ ಆಗಬೇಕು; ಹಾಗಾದರೆ ಮಾತ್ರ ನಾನು ಇಲ್ಲಿ ಇರುತ್ತೇನೆ, ಇಲ್ಲದಿದ್ದರೆ ಎದ್ದು ಹೋಗುತ್ತೇನೆಂದು ಹೇಳುವ ಛಲ ನಿಮಗೆ ಬೇಕು. ಯಾರು ಹೇಗೆ ಹೇಳುತ್ತಾರೋ ಹಾಗೆ ಕೇಳುವುದು ಸರಿಯಲ್ಲ, ಅಧಿಕಾರ ಇದ್ದಾಗ ಜನಗಳ ಸೇವೆಯನ್ನು ನಿಷ್ಠೆಯಿಂದ ಏನೇನು ಮಾಡುವುದಕ್ಕೆ ಅವಕಾಶ ಇದೆಯೋ ಅದನ್ನೆಲ್ಲ ಧೈರ್ಯದಿಂದ ಮಾಡಿ ಅದನ್ನು ಮಾಡದೇ ಬರೀ ರೈತರ ಮುಂದೆ ಮಾತನಾಡುವುದರಿಂದ ಏನೇನೂ ಪ್ರಯೋಜನವಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರೊಬ್ಬರಿಗೆ ಹೇಳುತ್ತಿದ್ದೀರೋ ಅಥವಾ ಎಲ್ಲಾ ಮಂತ್ರಿಗಳಿಗೂ ಹೇಳುತ್ತಿದ್ದೀರೋ?

ಶ್ರೀ ಕೆ. ಹೆಚ್. ಹನುಮೇಗೌಡ.—ಎಲ್ಲರಿಗೂ ಹೇಳುತ್ತಿದ್ದೇನೆ.

ಉಪಾಧ್ಯಕ್ಷರು.—ಸಣ್ಣ ನೀರಾವರಿ ಮಂತ್ರಿಗಳಿದ್ದಾರೆ.. ಅವರು ಗಮನಿಸುತ್ತಾರೆ,

ಶ್ರೀ ಕೆ. ಹೆಚ್. ಹನುಮೇಗೌಡ.—ಅದನ್ನು ದಯಮಾಡಿ ಮಾಡಿ. ಮಾನ್ಯ ಮುಖ್ಯ ಮಂತ್ರಿಗಳು ಇದಿದ್ದರೆ. ವಿವರವಾಗಿ ಹೇಳುತ್ತಿದ್ದೆ. ಪ್ಲಾಟ್ ರೇಟನ್ನು ಯಾವತ್ತೂ ಕೆರೆಗಳ ಮುಂದೆ ಇರತಕ್ಕ ಬಯಲಿಗೆ ಹಾಕಬೇಕು.

ಇನ್ನು ಸ್ಲಂ ಕ್ಲಿಯರೆನ್ಸ್ ಬಗ್ಗೆ ಹೇಳುವುದಾದರೆ, ಅದು ನಾಗರೀಕನಿಗೆ ಇರತಕ್ಕ ಕಳಂಕ ಎಂದರೂ ತಪ್ಪಾಗಲಾರದು. ಯಾರು ಹಗಲೂ ಇರಳೂ ದುಡಿಯುತ್ತಿದ್ದಾರೋ ಆ ಜನಗಳು ವಾಸಿಸತಕ್ಕ ಪ್ರದೇಶವನ್ನು ನೋಡಿದರೆ ಕರುಳು ಕಿತ್ತು ಬರುತ್ತದೆ. ನಮ್ಮದು ಡೆಮೊಕ್ರೆಟಿಕ್ ಸೆಟ್ ಆಫ್ ಎಂದು ಹೇಳಿಕೊಳ್ಳುವುದಕ್ಕೆ ಅರ್ಹತೆ ಇದೆಯೋ ಎಂದು ಅನ್ನಿಸುತ್ತದೆ. ಇಂಥವರು, ನಾವು ಉತ್ತಮವಾದ ಕ್ರಾಂತಿಯನ್ನು ಮಾಡುತ್ತಿದ್ದೇವೆಂದು ಹೇಳಕೊಳ್ಳುತ್ತಾರೆ. ಕೆಲವು ಕಡೆ ಮಾತ್ರ ಉತ್ತಮವಾದ ಕೆಲಸವಾಗುತ್ತಿದೆ, ಇವರು ಟೂರ್ ಹೋಗುವಾಗ ಕೆಲವಕ್ಕೆ ಟೂರ್ ಪ್ರೋಗ್ರಾಂ ಕೊಟ್ಟು ಹೋಗಲಿ, ಮತ್ತೆ ಕೆಲವಕ್ಕೆ ಅಂದರೆ ಸ್ಲಂ ಏರಿಯಾ ಮುಂತಾದವುಗಳಿಗೆ ಸರ್‌ಪ್ರೈಸ್ ವಿಸಿಟ್ ಕೊಡಬೇಕು. ಮತ್ತು ಅಲ್ಲಿ ಏನಾಗಿದೆ, ಏನಾಗುತ್ತಿದೆ, ಏನಾಗಬೇಕೆಂಬುದನ್ನು ಪರಿಶೀಲಿಸಬೇಕು. ಸರ್ಕಾರ ಏನು ಹಣ, ಕೊಟ್ಟಿದೆ ಅದು ಸರಿಯಾಗಿ ಖರ್ಚಾಗಿದೆಯೋ ಎಂಬುದನ್ನು ನೋಡಬೇಕು. ಕೇಂದ್ರ ಸರ್ಕಾರದವರು ಸಹ ಅನೇಕ ಯೋಜನೆಗಳನ್ನು ಹಾಕಿದ್ದಾರೆ; ಅವು ಕೂಡ ಕಾರ್ಯಗತವಾಗುತ್ತಿವೆಯೋ ಎಂಬುದನ್ನು ಗಮನಿಸಬೇಕು. ಅವುಗಳು ಸಫಲವಾದರೆ ಬಹಳ ಜನ ನಿಮ್ಮನ್ನು ಸ್ಮರಿಸುತ್ತಾರೆ. ಯಾರ ದುಡ್ಡನ್ನು ಹೇಗೇ ಹೊಡೆಯಲಿ; ಬಡವರ ದುಡ್ಡನ್ನು ಮಾತ್ರ ಹೊಡೆಯದಂತೆ ಎಚ್ಚರಿಕೆ ವಹಿಸಿ ಉತ್ತಮ ಮಟ್ಟದಲ್ಲಿ ಕೆಲಸ ನಡೆಯುವುದಕ್ಕೆ ಸಹಾಯಕರಾಗಬೇಕೆಂದು ಹೇಳುತ್ತೇನೆ. ಇಷ್ಟು ಹೇಳಿ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಇನ್ನೊಂದು ಸಾರಿ ಪ್ರಾರ್ಥಿಸಿಕೊಳ್ಳುತ್ತೇನೆ; ನಮ್ಮ ಸರ್ಕಾರ ಮಾಡಿರತಕ್ಕ ಉತ್ತಮವಾದ ಕೆಲಸಗಳನ್ನು ನೋಡಿ ಆತ್ಮ ತೃಪ್ತಿ ಪಟ್ಟುಕೊಂಡು, ಒಳ್ಳೆಯ ಕೆಲಸಗಳನ್ನು ಒಳ್ಳೆಯದೆಂದು ಹೇಳಿ ನಮ್ಮ ಸರ್ಕಾರದಲ್ಲಿ ಎಲ್ಲ ಸತ್ಯವಾಗಿ ನಡೆಯುತ್ತದೆ, ನಮ್ಮದು ಧರ್ಮರಾಯನ ರಾಜ್ಯ ಎಂದು ನಾನು ಹೇಳುವುದಿಲ್ಲ. ಅನೇಕ ನ್ಯೂನತೆಗಳು ಇವೆ. ಅವುಗಳನ್ನು ಎತ್ತಿ ತೋರಿಸತಕ್ಕದ್ದು ಅವರ ಧರ್ಮ. ಒಳ್ಳೆಯದು ಮಾಡಿದಾಗ ಒಳ್ಳೆಯದೆಂದು ಹೇಳಿ, ನ್ಯೂನತೆಗಳು ಇದ್ದಾಗ ಇಂಥದ್ದು ನ್ಯೂನತೆ ಇದೆ ಎಂದು ಹೇಳಬೇಕೆ ವಿನಹ ಮಾನ್ಯ ಲಕ್ಷ್ಮೀಸಾಗರ್‌ರವರ ಹಾಗೆ ವಾಚಾಮ ಗೋಚರವಾಗಿ ಬೈಯ್ಯತಕ್ಕದ್ದು ಸೂಕ್ತವಲ್ಲ. ಅದರಿಂದ ಏನಾಗುತ್ತದೆ ಎಂದರೆ, ಒಂದು ಮನೆಯಲ್ಲಿ ಇಬ್ಬರು ಮಕ್ಕಳು ಇದ್ದಾಗ, ಒಳ್ಳೆಯ ಕೆಲಸ ಮಾಡಿದವನಿಗೂ ಅದೇ ಚಾವಟಿ ಏಟು, ಕೆಟ್ಟ ಕೆಲಸ ಮಾಡಿದವನಿಗೂ ಅದೇ ಚಾವಟಿ ಏಟು ಅನ್ನುವ ಹಾಗೆ ಆಗುತ್ತದೆ. ಆಗ ಒಳ್ಳೆಯ ಕೆಲಸ ಮಾಡಿದವನಿಗೆ, ನಾನು ಏಕೆ ಒಳ್ಳೆಯ ಕೆಲಸ ಮಾಡಬೇಕು, ಅದರಿಂದ ಏನು ಪ್ರಯೋಜನ; ತಪ್ಪು ಮಾಡಿದ ನನಗೂ ಹತ್ತು ಏಟು ಬಿತ್ತು, ತಪ್ಪು ಮಾಡಿದ ಅವನಿಗೂ ಹತ್ತು ಏಟು ಬಿತ್ತು, ಆದ್ದರಿಂದ ನಾನು ಏಕೆ ಒಳ್ಳೆಯ ಕೆಲಸವನ್ನು ಮಾಡಬೇಕು ಎಂಬ ಮನೋಭಾವನೆ ಒಳ್ಳೆಯ ಹುಡುಗನಲ್ಲಿ ಉಂಟಾಗುತ್ತದೆ. ನಮ್ಮ ದೇಶದ ಧರ್ಮ ಏನು ಹೇಳುತ್ತದೆಂದರೆ, ಒಳ್ಳೆಯ ಕೆಲಸಕ್ಕೆ ಸೌಜನ್ಯಕ್ಕಾದರೂ ಒಳ್ಳೆಯದೆಂದು ಮತ್ತು ಕೆಟ್ಟ ಕೆಲಸಕ್ಕೆ ಕೆಟ್ಟದೆಂದೂ ಹೇಳಬೇಕು. ಇರತಕ್ಕ ನ್ಯೂನತೆಗಳನ್ನು ಕಟ್ಟು ನಿಟ್ಟಾಗಿ ಖಂಡಿಸಬೇಕು. ಅವರು ಏನಾದರೂ ಹೇಳಲಿ, ನಾನು ಜನಗಳ ದೃಷ್ಟಿಯಿಂದ ಹೇಳುತ್ತೇನೆ. ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು, ನಮ್ಮ ಸರ್ಕಾರದವರು ಮಾಡಿರುವ ಒಳ್ಳೆಯ ಕೆಲಸಗಳ ಕಡೆ ಗಮನ ಕೊಡಬೇಕು. ತಮ್ಮ ಚಿತ್ತವನ್ನು ಹರಿಸಬೇಕು. ಒಳ್ಳೆಯ ಕೆಲಸವನ್ನು ಮಾಡಿದ್ದಾಗಲಾದರೂ ಅದು ಕೆಟ್ಟದೆಂದು ಹೇಳಿದೆ ಒಳ್ಳೆಯ ಕೆಲಸ ಮಾಡಿದ್ದಾರೆಂದು ಹೇಳುವ ಮಟ್ಟಿಗಾದರೂ ಬದಲಾವಣೆ ಮಾಡಿದ್ದಾರೆಂದು ಹೇಳಿದರೆ ಸಾಕು. ಇಷ್ಟು ಹೇಳಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ. ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಹನುಮೇಗೌಡರು, ಆಡಳಿತ ಪಕ್ಷದ ಸದಸ್ಯರಾದರೂ ಕೂಡ ಅದರ ಭಾಷಣದ ಪೂರ್ಣ ಭಾಗದಲ್ಲಿ ನಾವು ಮಾತನಾಡಿದ ಹಾಗೆಯೇ ಮಾತನಾಡಿದ್ದಾರೆ. ಅದಕ್ಕೆ ನಾನು ಅವರನ್ನು ಸಂಪೂರ್ಣವಾಗಿ ಬೆಂಬಲಿಸಿ ಅವರು ಹೇಳಿದನ್ನು ಅನುಮೋದಿಸುತ್ತೇನೆ. ನಾವು ವಿರೋಧ

ಪಕ್ಷದಲಿರತಕ್ಕ ಸದಸ್ಯರು: ನಾವು ಹೇಳಿದಂತಹ ಧಾಟಿಯಲ್ಲಿ ಹೇಳದೆ ಹೋದರೆ ಅವರು ಧಾರವಾಡ ಎಮ್ಮೆ ರೀತಿಯಲ್ಲಿ ನಡೆದುಕೊಳ್ಳುತ್ತಾರೆ. ಅದಕ್ಕೋಸ್ಕರ ನಾವು ಸ್ವಲ್ಪ ಗಮನ ಕೊಡಬೇಕಾಗುತ್ತದೆ.

ಒಬ್ಬರು ಮಾನ್ಯ ಸದಸ್ಯರು.—ಧಾರವಾಡದ ಎಮ್ಮೆ ಎಂದರೆ ಯಾವ ತರಹ ಇರುತ್ತವೆ ?

† ಶ್ರೀ ಎ. ಜಿ. ಕೊಡಗಿ (ಬೈಂದೂರು).—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಈ ಸದನದಲ್ಲಿ ಓದಿದಂತಹ ಶ್ರೀಮಾನ್ ಗುಂಡೂರಾಯರ ಭಾಷಣದ ಮೇಲೆ ಕೆಲವು ವಿಚಾರಗಳನ್ನು ತಮ್ಮ ಮುಖಾಂತರ ಈ ಸದನಕ್ಕೆ ಹಾಗೂ ಕರ್ನಾಟಕ ರಾಜ್ಯದ ಜನತೆಯ ಗಮನಕ್ಕೆ ತರುವುದಕ್ಕೆ ಇಚೆ ಪಡು ತ್ತೇನೆ. ಮುಖ್ಯವಾಗಿ ಒಂದು ವಿಚಾರದಲ್ಲಿ ಮಾತ್ರ ನಾನು ವಿರೋಧ ಪಕ್ಷದಲ್ಲಿದ್ದರೂ ಸಹ ಸ್ಪಷ್ಟವಾಗಿ ಒಪ್ಪಿಕೊಳ್ಳುತ್ತೇನೆ. ಮಾನ್ಯ ಗುಂಡೂರಾಯರ ಪ್ರಾಮಾಣಿಕತೆಯ ವಿಚಾರದಲ್ಲಿ ನಾನು ಹೆಚ್ಚು ಅನುಮಾನ ವ್ಯಕ್ತಪಡಿಸುವುದಿಲ್ಲ. ಅವರ ಸರ್ಕಾರದ ವಿಚಾರವಾಗಿ ಕೆಲವು ಮಾತುಗಳನ್ನು ಬೇರೆ ಬೇರೆ ಕಡೆಗಳಲ್ಲಿ ಹೇಳಿದ್ದೇನೆ. ಇನ್ನು ಅವರೇ ಹೇಳಿಕೊಂಡಿರುವ ಒಂದು ವಿಚಾರವನ್ನು ನಾನು ಈ ಸದನದ ಗಮನಕ್ಕೆ ತಂದರೆ ಈ ಸರ್ಕಾರದ ಒಂದು ಚಿತ್ರ ಕರ್ನಾಟಕ ಜನತೆಗೆ ಗೊತ್ತಾಗುತ್ತದೆಂದು ಭಾವಿಸಿದ್ದೇನೆ. ಅವರು ಏನು ಹೇಳಿದ್ದಾರೆಂದರೆ. ‘‘ನಾವು ಇಂದಿರಾ ಕೃಪಾ ಪೋಷಿತ ನಾಟಕ ಮಂಡಳಿಯ ಸದಸ್ಯರು’’ ಎಂದು. ಆ ಸದಸ್ಯರಲ್ಲಿ ಮಾನ್ಯ ಗುಂಡೂರಾಯರು ಪ್ರಧಾನ ಪಾತ್ರ ವಹಿಸಿದ್ದಾರೆ, ಆ ಪಾತ್ರಕ್ಕೆ ಮಾನ್ಯ ಬಂಗಾರಪ್ಪನವರಿಗೂ ಮತ್ತು ಅವರಿಗೂ ಪೈಪೋಟಿ ಇದ್ದುದು ಈಗ ಬಗೆಹರಿದು ಈಗ ಮಾನ್ಯ ಗುಂಡೂರಾಯರು ಪ್ರಧಾನ ನಾಯಕರಾಗಿ ಉಳಿದುಕೊಂಡಿದ್ದಾರೆ. ಈ ಗುಂಡೂರಾಯರ ಸರ್ಕಾರದಲ್ಲಿ ಶ್ರೀಮತಿ ರೇಣುಕಾ ರಾಜೇಂದ್ರನ್‌ರವರು ಪ್ರಧಾನ ನಾಯಕಿಯಾಗಿ ಉಳಿದ್ದಿದ್ದಾರೆ. ನಾಟಕದಲ್ಲಿ ನಾಯಕನ ಪಾತ್ರ ಎಷ್ಟು ಪ್ರಧಾನವೋ, ಖಳನಾಯಕನ ಪಾತ್ರ ಕೂಡ ಅಷ್ಟೇ ಪ್ರಧಾನ. ಶ್ರೀಮಾನ್ ವೀರಪ್ಪ ಮೊಯಿಲಿಯವರು ಆ ಖಳನಾಯಕನ ಪಾತ್ರವನ್ನು ವಹಿಸಿದ್ದಾರೆ. ಇಷ್ಟಾದರೆ ನಾಟಕಕ್ಕೆ ಸಾಕಾಗುವುದಿಲ್ಲ. ಅದಕ್ಕೆ ಮುಖ್ಯವಾಗಿ ವಿದೂಷಕರು ಬೇಕಾಗುತ್ತದೆ. ಶ್ರೀಮಾನ್ ಹಿಬ್ರಾಹಿಂ ಮತ್ತು ಶ್ರೀಮಾನ್ ಬೇಗಾನೆ ರಾಮಯ್ಯನವರು ವಿದೂಷಕರ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ನಂತರ ಸ್ವಾಮಿ, ಈ ನಾಟಕ ಮಂಡಳಿ ಸುವ್ಯವಸ್ಥಿತವಾಗಿ ನಡೆಯಬೇಕಾದರೆ ಇಷ್ಟು ಸಾಕಾಗುವುದಿಲ್ಲ. ಇದಕ್ಕೆ ಬೇರೆ ಬೇರೆ ಪಾತ್ರಧಾರಿಗಳು ಬೇಕು, ಮಾನ್ಯ ಶ್ರೀ ಶ್ರೀಕಂಠಯ್ಯನವರು ಮತ್ತು ಶ್ರೀ ಧರ್ಮಸಿಂಗ್‌ರವರು ಇನ್ನಿತರ ಪಾತ್ರಗಳಲ್ಲಿ ಅಭಿನಯಿಸುತ್ತಿದ್ದಾರೆ. ಜೊತೆಗೆ ಎಕ್ಸ್ಟ್ರಾಸ್ ಬೇಕಾಗು ತ್ತದೆ. ಆಕಸ್ಮಿಕವಾಗಿ ದೊಡ್ಡ ದೊಡ್ಡ ಪಾತ್ರಗಳನ್ನು ಮೆರವಣಿಗೆ ಮಾಡುವುದಕ್ಕೆ ಜನ ಬೇಕಾಗುತ್ತದೆ. ಅದಕ್ಕೂ ಕೂಡ ಸಾಕಷ್ಟು ಜನ ಈ ಕಡೆಯಿಂದ ಆ ಕಡೆಗೆ ಹೋದವರು ಇದ್ದಾರೆ. ಹಂಗಾಮಿಯಾಗಿ ಪಾತ್ರ ನಿರ್ವಹಿಸುವುದಕ್ಕೆ ಸದಾ ಸಿದ್ಧರಾಗಿದ್ದಾರೆ. ಈ ನಾಟಕಕ್ಕೆ ನಿರ್ದೇಶನ ಬೇಕಲ್ಲ ? ಶ್ರೀ ಎಫ್. ಎಂ. ಖಾನ್ ಅವರು ಈ ನಾಟಕ ಮಂಡಳಿಯ ನಿರ್ದೇಶನ ಮಾಡುತ್ತಿದ್ದಾರೆ.

ಶ್ರೀ ಬಿ. ಎನ್. ಕೆಂಗೇಗೌಡ.—ಮಾನ್ಯ ಅಧ್ಯಕ್ಷರೇ. ಶ್ರೀ ಎಫ್. ಎಂ. ಖಾನ್ ಅವರು ಈ ಮನೆಯ ಸದಸ್ಯರಲ್ಲ. ಅವರು ಈ ಸಭೆಯಲ್ಲಿ ಇಲ್ಲದೇ ಇರುವುದರಿಂದ ಅವರ ವಿಷಯದಲ್ಲಿ ಇಲ್ಲಿ ಮಾತನಾಡುವುದು ಸರಿಯಲ್ಲ.

ಶ್ರೀ ಎ. ಜಿ ಕೊಡಗಿ.—ನಾನು ಟೀಕೆ ಮಾಡಲಿಲ್ಲ. ನಾನೇನೂ ಅವರ ಮೇಲೆ ಆಪಾದನೆ ಮಾಡಲಿಲ್ಲ. ದಯವಿಟ್ಟು ತಾಳ್ಮೆಯಿಂದ ಕೇಳಿ. ನಮ್ಮ ಗುಂಡೂರಾಯರು ಹೇಳಿದಂತೆ ಶ್ರೀಮತಿ ಇಂದಿರಾಗಾಂಧಿಯವರು ಈ ನಾಟಕ ಮಂಡಲಿಯ ವ್ಯವಸ್ಥಾಪಕರು, ಮತ್ತು ಪೋಷಕರು. ನಾಟಕದ ಹೆಸರು ೨೦ ಅಂಶಗಳ ಕಾರ್ಯಕ್ರಮ. ಇದು ಸರ್ಕಾರದ ಚಿತ್ರ. ಶ್ರೀಮಾನ್ ಗುಂಡೂರಾಯರಿಗೆ ಬಹಳ ಚೆನ್ನಾಗಿ ಪ್ರಾಮಾಣಿಕವಾಗಿ ನಾಟಕವನ್ನು ಅಭಿನಯಿಸಬೇಕೆಂಬ ಉದ್ದೇಶ ಇದೆ. ಒಳ್ಳೆಯ ರೀತಿ ಯಿಂದ ಅಭಿನಯ ಮಾಡದೇಹೋದರೆ.........

ಶ್ರೀ ಬಸವರಾಜಪ್ಪ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಕೊಡಗಿಯವರೂ ಕೂಡ ೨೦ ಅಂಶದ ಕಾರ್ಯಕ್ರಮದ ನಾಟಕದಲ್ಲಿ ಪಾತ್ರ ವಹಿಸಿದ್ದರು.

ಶ್ರೀ ಎ. ಜಿ. ಕೊಡಗಿ.—ಆ ವಿಷಯಕ್ಕೂ ಬರುತ್ತೇನೆ. ಸ್ವಾಮಿ. ಪ್ರಾರಂಭದಲ್ಲಿ ಈ ನಾಟಕ ಮಂಡಲಿಗೆ ಒಳ್ಳೆಯ ರೀತಿಯಿಂದ ಬೆಂಬಲ ಸಿಕ್ಕಿತು. ನಂತರ ನಾಟಕ ಮಂಡಲಿ ನಡೆಯುವುದಕ್ಕೆ ಪ್ರಾರಂಭವಾಯಿತು. ಸುಮಾರು ಮೂರು ನಾಲ್ಕು ತಿಂಗಳ ನಂತರ ನಾಟಕಕ್ಕೆ ಜನ ಸಿಗುವುದಿಲ್ಲ ಎಂದಾಗ ಜನರನ್ನು ಆಕರ್ಷಿಸುವುದಕ್ಕೆ ಬೇರೆ ಬೇರೆ ರೀತಿಯ ಅವಕಾಶಗಳನ್ನು ನಿರ್ಮಾಣ ಮಾಡಿ

ಕೊಟ್ಟರು, ಮತ್ತೂ ಸಿಗುವುದಿಲ್ಲ ಎಂದಾಗ ಧರ್ಮಾರ್ಥವಾಗಿ ಪ್ರದರ್ಶನ ಪ್ರಾರಂಭ ಆಯಿತು. ಬಂದವರಿಗೆ ಊಟ, ತಿಂಡಿ, ಕಾಫಿ ವ್ಯವಸ್ಥೆ ನಡೆಯುತ್ತಿದೆ. ಇದರ ಪರಿಣಾಮ ನಾಟಕ ಕಂಪನಿ ದಿವಾಳಿ ಹಂತದಲ್ಲಿದೆ. ಶ್ರೀಮತಿ ಇಂದಿರಾಗಾಂಧಿಯವರ ಉದ್ದೇಶ ಒಳ್ಳೆಯದಿದೆ. ಒಳ್ಳೆಯ ನಾಟಕ ಕಂಪನಿ ತಯಾರು ಮಾಡಿ ಒಳ್ಳೆಯ ರೀತಿಯ ಕಾರ್ಯಕ್ರಮ ಹಾಕಿ ನಾಟಕ ಆಡಬೇಕೆಂಬ ಒಳ್ಳೆಯ ಉದ್ದೇಶವಿತ್ತು ಉದ್ದೇಶ ಚೆನ್ನಾಗಿದೆ. ನಾಟಕ ಕಂಪನಿ ದಿವಾಳಿ ಹಂತವನ್ನು ತಲುಪಿರುವುದು ದೌರ್ಭಾಗ್ಯ. ಎಲ್ಲರಿಗೂ ಧರ್ಮಾರ್ಥವಾಗಿ ನಾಟಕ ತೋರಿಸುವ ಹುಮ್ಮಸ್ಸಿನಲ್ಲಿ ಬಂದವರಿಗೆಲ್ಲಾ ಊಟ, ಕಾಫಿ ವ್ಯವಸ್ಥೆ ಮಾಡಿದ್ದರಿಂದ ನಾಟಕ ಮಂಡಲಿ ಸಂಪೂರ್ಣ ದಿವಾಳಿ ಹಂತದಲ್ಲಿದೆ ಎಂದು ಈ ಸಂದರ್ಭದಲ್ಲಿ ಹೇಳಿದರೆ ಎಲ್ಲ ಸ್ನೇಹಿತರೂ, ಆ ಕಡೆಯವರೂ (ಆಡಳಿತ ಪಕ್ಷದ ಕಡೆಯವರು) ಒಪ್ಪುತ್ತಾರೆ. ಕರ್ನಾಟಕದ ಚಿತ್ರವನ್ನು ತಮ್ಮ ಮುಂದೆ ನಾನು ತಂದಿದ್ದೇನೆ.

ಶ್ರೀ ಡಿ. ವಿ. ಮೈಂಗಾವ್‌ಕರ್.—ನೀವು ಪ್ರೇಕ್ಷಕರಾಗಿ ಮಾತನಾಡುತ್ತಿದ್ದೀರಾ ಅಥವಾ ಗ್ರೀನ್ ರೂಂನಲ್ಲಿ ಕುಳಿತು ಮಾತನಾಡುತ್ತಿದ್ದೀರಾ ?

ಶ್ರೀ ಎ. ಜಿ. ಕೊಡಗಿ.—ಪ್ರೇಕ್ಷಕನಾಗಿ ನಾಟಕವನ್ನು ಕಂಡು ನನ್ನ ಅನುಭವವನ್ನು ಈ ಸಭೆಯ ಮುಖೇನ ಈ ಕರ್ನಾಟಕದ ಜನತೆಯ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಇವತ್ತು ಒಂದು ವರ್ಷದ ಆಡಳಿತ ಸಂಪೂರ್ಣವಾಗಿದೆ. ಒಂದು ವರ್ಷದ ಆಡಳಿತ ಸಂಪೂರ್ಣವಾಗಿದೆಯೆಂದು ಸಂತೋಷ ಸಮಾರಂಭ ಕೂಡ ಕರ್ನಾಟಕದಲ್ಲಿ ನಡೆದಿದೆ. ಆಂಧ್ರದಲ್ಲಿ ೧೦೦ ದಿವಸ ಮುಖ್ಯಮಂತ್ರಿಯಾಗಿ ಉಳಿದಿದ್ದೇ ದೊಡ್ಡ ವಿಚಾರ ಎಂದು ಪತ್ರಿಕೆಗಳಲ್ಲಿ ಜಾಹೀರಾತು ಬಂದಿದೆ. ಕರ್ನಾಟಕದಲ್ಲಿ ಕೂಡ ಒಂದು ವರ್ಷ ಶ್ರೀಮಾನ್ ಗುಂಡೂರಾಯರ ಆಡಳಿತ ಆಗಿ ಉಳಿದಿದೆ. ಇದಕ್ಕಾಗಿ ಸಮಾರಂಭದ ಏರ್ಪಾಡು ಕೂಡ ಮೊನ್ನೆ ಆಗಿದೆ. ಅಧಿಕಾರದಲ್ಲಿ ಉಳಿದಿದ್ದೆ ದೊಡ್ಡ ವಿಚಾರ ಎಂಬುದು ಸತ್ಯ. ನಮಗೂ ಅನುಮಾನ ಇತ್ತು. ಇವರ ಪೈಪೋಟಿಯಲ್ಲಿ ಈ ನಾಟಕ ಮಂಡಲಿ, ಸರ್ಕಾರ ಎಲ್ಲೋ ಹೋಗುತ್ತದೆ ಎಂದು ತಿಳಿದುಕೊಂಡಿದ್ದೆವು ಆದ್ದರಿಂದ ಅದು ಅಧಿಕಾರದಲ್ಲಿ ಉಳಿದಿದ್ದು ನಿಜವಾಗಿ ಬಹಳ ಆಶ್ಚರ್ಯಕರ. ಆದಕ್ಕಾಗಿ ಸಮಾರಂಭ ಏರ್ಪಾಡಾಗಿತ್ತು. ಈ ಸಮಾರಂಭಕ್ಕೆ ಖರ್ಚು ವೆಚ್ಚ ಎಲ್ಲಾ ಎಲ್ಲಿಂದ ಬಂತು ? ಖರ್ಚು ವೆಚ್ಚ ಎಲ್ಲಿಂದ ಬಂತು ಎಂದಾಗ, ಖರ್ಚುವೆಚ್ಚ ಆಗೇ ಇಲ್ಲ ಎಂದು ಕೆಲವರು ಸೂಚನೆ ಮಾಡಿದರು. ನಮ್ಮ ಕರ್ನಾಟಕದ ೨೫ ಸಾವಿರ ಮುಜರಾಯಿ ದೇವಸ್ಥಾನಗಳಲ್ಲೂ ೧೦೦ ಜನ ಬಡವರಿಗೆ ಧರ್ಮಾಥವಾಗಿ ಊಟದ ವ್ಯವಸ್ಥೆ ವಿಶೇಷ ಪೂಜೆ ವ್ಯವಸ್ಥೆ ಆಗಬೇಕು ಎಂದು ಒಂದು ಸುತ್ತೋಲೆ ಬಂದಿದೆ. ಈ ಸುತ್ತೋಲೆ ಎಲ್ಲಾ ದೇವಸ್ಥಾನಗಳಿಗೂ ಹೋಗಿದೆ. ಎಲ್ಲಾ ಚರ್ಚು, ಮಸೀದಿಗಳಿಗೂ ಆ ದಿವಸ ವಿಶೇಷ ಪೂಜೆ ಮಾಡಬೇಕು ಎಂಬ ಆದೇಶ ಹೋಗಿದೆ. ಆ ವಿಷಯ ಪತ್ರಿಕೆಯಲ್ಲೂ ಬಂದಿದೆ. ಒಂದು ವರ್ಷ ಆಡಳಿತದಲ್ಲಿ ಉಳಿದಂಥ ಸಾಧನೆಗಾಗಿ ಇಷ್ಟು ವ್ಯವಸ್ಥೆಗಳು ನಡೆದಿವೆ. ಇದು ಬಹುಶಃ ಕರ್ನಾಟಕದ ಜನತೆಯ ಗಮನಕ್ಕೆ ತರಬೇಕಾದುದು ನಮ್ಮ ಕರ್ತವ್ಯ. ಈ ಒಂದು ವರ್ಷದಲ್ಲಿ ಏನು ಸಾಧನೆ ಮಾಡಿದರು ಎಂಬುದನ್ನು ನನ್ನ ಮಿತ್ರರು ಹೇಳಿದರು. ಸಾಧನೆ ಮಾಡಿದ್ದನ್ನು ಮುಚ್ಚುಮರೆ ಇಲ್ಲದೆ ವಿರೋಧಪಕ್ಷದವರು ಹೇಳಬೇಕೆಂದು ಮಾನ್ಯ ಸದಸ್ಯರು ಹೇಳಿದರು. ನಮ್ಮ ಸಮಸ್ಯೆ ಏನೆಂದರೆ, ಏನು ಸಾಧನೆಯಾಗಿದೆ ಎಂಬುದು ಗೊತ್ತಾಗುತ್ತಿಲ್ಲ. ಸಾಧನೆ ಮಾಡುವ ಘೋಷಣೆಗಳು ನಡೆದಿವೆ. ಘೋಷಣೆಗಳನ್ನು ಕೇಳಿದ್ದೇವೆ. ಸಾಧನೆ ಏನಾಗಿದೆ ಎಂಬುದನ್ನು ಸೂಕ್ಷ್ಮವಾಗಿ ಪರಿಶೀಲನೆ ಮಾಡಿದರೆ ಏನೂ ಇಲ್ಲ ಎಂದು ಹೇಳಿದರೆ ಅತಿಶಯೋಕ್ತಿಯಲ್ಲ.

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಅಧ್ಯಕ್ಷರೇ, ೧೦೦ ಜನರಿಗೆ ದೇವಸ್ಥಾನಗಳಲ್ಲಿ ಊಟ ಹಾಕಬೇಕೆಂಬ ಸರ್ಕ್ಯುಲರ್ ಇದೆ ಎಂದು ಮಾನ್ಯ ಸದಸ್ಯರು ಹೇಳಿದರು. ಇದು ಸತ್ಯಕ್ಕೆ ದೂರವಾದ ಸಂಗತಿ. ನನ್ನ ಹತ್ತಿರವೂ ಸರ್ಕ್ಯುಲರ್ ಇದೆ. ಅದರಲ್ಲಿರುವುದಿಷ್ಟೆ.

ಶ್ರೀ ಹೆಚ್. ಡಿ. ದೇವೇಗೌಡ.—ಸರ್ಕ್ಯುಲರ್ ಇಲ್ಲದಿದ್ದರೂ ಮುಜರಾಯಿ ಮಂತ್ರಿಗಳು ಹೇಳುವುದೆಲ್ಲಾ ಸರ್ಕ್ಯುಲರ್ರೆ.

ಶ್ರೀ ಮಳ್ಳೂರು ಆನಂದರಾವ್.—ಕರ್ನಾಟಕದ ಜನತೆಗೆ ಕಲ್ಯಾಣವಾಗಲಿ ಎಂದು ಪೂಜೆ, ಪ್ರಾರ್ಥನೆ ಮಾಡಿ ಎಂದು ಸುತ್ತೋಲೆಯಲ್ಲಿದೆ ಎಲ್ಲಿ ಊಟದ ವ್ಯವಸ್ಥೆ ಮಾಡುವುದಕ್ಕಾಗುತ್ತದೋ ಅಂಥ ಕಡೆಗಳಲ್ಲಿ ದೇವಸ್ಥಾನದ ಫಂಡಿನಲ್ಲಿ ಬಡಜನರಿಗೆ ಊಟದ ವ್ಯವಸ್ಥೆ ಮಾಡಿ ಎಂದು ಅದರಲ್ಲಿದೆ. ಬೇರೆ ಏನೂ ಖಂಡಿತ ಇಲ್ಲ.

ಶ್ರೀ ಕೆ. ಬಿ. ಶಿವಯ್ಯ.—೧೦೦ ಜನರಿಗೆ ಊಟದ ವ್ಯವಸ್ಥೆ ನಡೆಸಿದ್ದಾರೆ.

ಶ್ರೀ ಮಳ್ಳೂರು ಆನಂದರಾವ್.—ನಡೆಸಿಲ್ಲ. ನನ್ನ ಹತ್ತಿರ ಸ್ಟ್ಯಾಟಿಸ್ಟಿಕ್ಸ್ ಇದೆ, ಆಪಾದನೆ ಮಾಡುವುದಾದರೆ ಮಾಡಲಿ, ಆದರೆ ತಿಳಿದಂ ಮಾಡಿದರೆ ಉತ್ತಮ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಆನಂದರಾಯರು ಪೂಜೆಗೆ ಹೋಗಿದ್ದಾರೋ ಇಲ್ಲವೋ ? ಊಟ ಮಾಡಿದರೋ ಇಲ್ಲವೋ ?

ಶ್ರೀ ಮಳ್ಳೂರು ಆನಂದರಾಯರು.—ನಾನು ಹೋಗಿ ಊಟ ಮಾಡಲಿಲ್ಲ. ೫೦-೬೦ ದೇವಸ್ಥಾನದಲ್ಲಿ ಪೂಜೆ ನಡೆಗಿದೆ. ಉತ್ಪ್ರೇಕ್ಷೆ ಮಾಡುವುದು ಬೇಡ.

ಶ್ರೀ ಎ. ಜಿ. ಕೊಡಗಿ.—ಆದೇಶ ನೋಡಿದ್ದೇನೆ. ಊಟ ಎಷ್ಟು ಜನರಿಗೆ ಹಾಕಿದ್ದಾರೋ ನೋಡಲಿಲ್ಲ. ಖರ್ಚುವೆಚ್ಚದ ಲೆಕ್ಕಾಚಾರ ನನ್ನ ಹತ್ತಿರ ಇಲ್ಲ.

ಶ್ರೀ ಮಳ್ಳೂರು ಆನಂದರಾಯರು.—ಆದೇಶದಲ್ಲಿ ಹಾಗಿಲ್ಲ.

ಶ್ರೀ ಎ. ಜಿ. ಕೊಡಗಿ.—೧೦೦ ಜನರಿಗೆ ಊಟದ ವ್ಯವಸ್ಥೆ ಮಾಡಬೇಕು ಎಂದಿದೆ. ಸರ್ಕಾರದಿಂದ ಪತ್ರ ಹೊರಟರೆ ಅದು ಆದೇಶವಾಗಿಯೇ ಇರಬೇಕೆಂದಿಲ್ಲ. ಸರ್ಕಾರಿ ಅಧಿಕಾರಿಗಳಿಂದ ಕೆಲವೊಮ್ಮೆ ಸೂಚನೆ ಹೋದಾಗ ಅದನ್ನು ಪರಿಪಾಲಿಸಬೇಕಾಗುತ್ತದೆ ಎಂಬುದು ಗೊತ್ತಿದೆ. ನಾನು ಆ ಬಗ್ಗೆ ಎಲ್ಲಾ ಅಂಕಿಅಂಶಗಳನ್ನು ಇಟ್ಟು ವಾದ ಮಾಡುವ ಸ್ಥಿತಿಯಲ್ಲಿಲ್ಲ. ಮಾನ್ಯ ಸದಸ್ಯರಾದ ಶ್ರೀ ಕೆ.ಹೆಚ್. ಹನುಮೇಗೌಡರು ರೈತರ ಬಗ್ಗೆ ಕಳಕಳಿಯಿಂದ ಮಾತನಾಡಿದ್ದಾರೆ. ಅವರ ವಿಚಾರದಲ್ಲಿ ನಮಗೆ ಗೌರವವಿದೆ. ನಮ್ಮ ಸರ್ಕಾರ ರೈತರ ಬಗ್ಗೆ ಒಂದು ವರ್ಷದಲ್ಲಿ ಬಹಳ ಕಾಳಜಿ ವಹಿಸಿದೆ, ಹಿಂದಿನ ಸರ್ಕಾರ ಮಾಡಲಾರದ ಕೆಲಸವನ್ನು ಸಾಧನೆ ಮಾಡಿದೆ, ರೈತರಿಗೆ ತೃಪ್ತಿಯುಂಟಾಗುವ ರೀತಿಯಲ್ಲಿ ಮಾಡಿದ್ದೇವೆ ಎಂದು ಹೇಳಿದರು. ಇಷ್ಟು ಹೇಳಿ ಅವರು ರೈತರ ಸಮಸ್ಯೆಗಳನ್ನು ಒಂದೊಂದಾಗಿ ಸಭೆಯ ಮುಂದಿಟ್ಟರು ರೈತರಿಗೆ ತೃಪ್ತಿಯಾಗುವ ರೀತಿಯಲ್ಲಿ ಕೆಲಸ ಮಾಡಿದೆ ಎಂದಮೇಲೆ ಸಮಸ್ಯೆ ಹೇಗೆ ಬಂತು ? ಅಂದರೆ ಕಡಿಮೆ ಕೆಲಸವಾಗಿದೆ ಎಂಬುದನ್ನು ಸ್ಪಷ್ಟವಾಗಿ ಹೇಳಿದಂತಾಯಿತು. ರೈತರ ಸಮಸ್ಯೆಗಳು ಹಲವಾರಿವೆ......

ಶ್ರೀ ಕೆ. ಹೆಚ್. ಹನುಮೇಗೌಡ.—ನಾನು ಹೇಳಿದ್ದು, ಹತ್ತಾರು ವರ್ಷಗಳಿಂದ ಇದ್ದಂಥ ಸಮಸ್ಯೆಗಳನ್ನು ಈ ಮುಖ್ಯಮಂತ್ರಿಗಳು ಅಧಿಕಾರಕ್ಕೆ ಬಂದಮೇಲೆ ತಿಳಿದುಕೊಂಡು ಹಲವು ಸಮಸ್ಯೆಗಳಿಗೆ ಪರಿಹಾರ ಮಾಡಿದ್ದಾರೆ ಎಂದು. ಇನ್ನೂ ಸಮಸ್ಯೆಗಳಿವೆ. ರೈತ ಪ್ರತಿನಿಧಿಗಳು ಸಂಘ ಮಾಡಿಕೊಂಡು ಅವರ ಸಮಸ್ಯೆಗಳ ಬಗ್ಗೆ ಹೇಳುತ್ತಿದ್ದಾರೆ, ಅದಕ್ಕೆ ನನ್ನ ಸ್ವಾಗತವಿದೆ ಎಂದು ಹೇಳಿದೆನೇ ವಿನಹ ಬೇರೆ ಏನೂ ಹೇಳಲಿಲ್ಲ. ಒಂದೇ ಸಾರಿ ೮೦ ಕೋಟಿ ರೂಪಾಯಿನ ಪರಿಹಾರ ಯಾವ ಮುಖ್ಯಮಂತ್ರಿ ಕೊಟ್ಟರು ?

೬-೦೦ ಪಿ. ಎಂ.

ಹಿಂದೆ ಒಂದು ಉದಾಹರಣೆ ಕೊಟ್ಟು ಹೇಳಿದ್ದೆ. ಬರೀ ೨೦ ರೂಪಾಯಿಗಳಷ್ಟು ನೀರಿನ ತೆರಿಗೆಯನ್ನು ಕಡಿಮೆ ಮಾಡಿ ಎಂದು ರೈತರು ಕೇಳಿದಾಗ ಅದು ಸಾಧ್ಯವಾಗುವುದಿಲ್ಲವೆಂದು ತಿರಸ್ಕರಿಸಿದ ನಾಯಕರಿಂದ ರೈತರ ಪರವಾಗಿ ಬಾವುಟ ಹಿಡಿದುಕೊಂಡು ನಿಂತಿದ್ದಾರೆ. ನಮ್ಮ ಸರ್ಕಾರ ಎಲ್ಲವನ್ನೂ ಮಾಡಿದೆ ಎಂದು ನಾನು ಹೇಳುವುದಿಲ್ಲವಾದರೂ, ನಮ್ಮ ರಾಜ್ಯದ ರೈತರಿಗೆ ಅಗತ್ಯವಾದ ಕೆಲವೊಂದು ಕಾರ್ಯಗಳನ್ನು ಮಾಡಿದೆ ಎಂದು ಧೈರ್ಯವಾಗಿ ಹೇಳಬಲ್ಲೆ. ಒಂದು ಕಡೆ ಆಸ್ಪತ್ರೆ ಆಗಬೇಕು, ಇನ್ನೊಂದು ಕಡೆ ರಸ್ತೆ ಆಗಬೇಕು, ಮತ್ತೊಂದು ಕಡೆ ಇನ್ನೊಂದು ಆಗಬೇಕೆಂದು ಕೇಳುತ್ತಾ ಹೋದರೆ, ನಮ್ಮ ಸರ್ಕಾರದವರೇನೂ ಅಲ್ಲಾವುದ್ದೀನನ ಅದ್ಭುತ ದೀಪ ಇಟ್ಟುಕೊಂಡಿದ್ದಾರೆಯೆ ? ಉಜ್ಜಿ ಉಜ್ಜಿ

ಕೇಳಿದ್ದನ್ನೆಲ್ಲ ಕೊಡುವುದಕ್ಕೆ. ನೀವು ಸರ್ಕಾರ ನಡೆಸುತ್ತಿದಾಗ, ಉಜ್ಜಿ ಉಜ್ಜಿ ಏನೇನು ಮಾಡಿದಿರಿ ಎಂಬುದನ್ನು ಹೇಳಿ. ನಮ್ಮ ಸರ್ಕಾರದವರು ಅಧಿಕಾರಕ್ಕೆ ಬಂದಮೇಲೆ ರೈತರ ಬಗ್ಗೆ ಏನೇನು ಮಾಡಿದ್ದೇವೆನ್ನುವುದನ್ನು ಪಟ್ಟಿ ಮಾಡಿದ್ದೇನೆ. ಅವರು ಅಧಿಕಾರದಲ್ಲಿದ್ದಾಗ ಏನೇನು ಮಾಡಿದ್ದರೆಂಬುದನ್ನು ಹೇಳಲಿ.

SRI A. LAKSHMISAGAR.—Sir, I rise to a point of order My friend Mr. Hanume Gowda—let him not himself take the responsibility of replying to the debate. There are Ministers who are meant for it. Sri Kodagi did not say anything against him. Now it is already 6-00 P.M.

MR. DEPUTY SPEAKER.—Now the House stands adjourned t meet at 1-00 P M. tomorrow.

The House adjourned at two minutes past Six of the Clock to meet again at One of the Clock on Thursday the 5th February, 1981.